ವಿರೋಧಪಕ್ಷವೆಂದು ಮಾನ್ಯತೆ ಗಳಿಸಬೇಕಾದರೆ 23ಕ್ಕಿಂತ ಕಡಿಮೆಯಿಂದ ಸದಸ್ಯರಿರಬೇಕಾಗುತ್ತದೆ. ಒಂದಕ್ಕಿಂತ ಹೆಚ್ಚು ಶಾಸಕಾಂಗ ಪಕ್ಷಗಳು ಅಗತ್ಯವಾದ ಅರ್ಹತೆಗಳನ್ನು ಹೊಂದಿದ್ದರೆ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರುಗಳನ್ನು ಹೊಂದಿರುವಂಥ ಪಕ್ಷಕ್ಕೆ ವಿಧಾನ ಸಭೆಯಲ್ಲಿ ಅಧಿಕೃತ ವಿರೋಧಪಕ್ಷವೆಂದು ಮಾನ್ಯತೆ ನೀಡಲಾಗುವುದು.

ಕರ್ನಾಟಕ ಕಾಂಗ್ರೆಸ್ ಪಕ್ಷದ ಐದು ಸದಸ್ಯರು ನನ್ನ ಮುಂದೆ ಹಾಜರಾಗಿ, ಕಾಂಗ್ರೆಸ್ ಪಕ್ಷದೊಂದಿಗೆ ವಿಲೀನವಾಗಿರುವುದಾಗಿ ಪತ್ರ ನೀಡಿರುವುದರಿಂದ ಭಾರತ ಸಂವಿಧಾನದ ಹತ್ತನೇ ಅನುಸೂಚಿಯ 4ನೇ ಪ್ರಕರಣದ ಉಪಬಂಧಗಳ ಮೇರೆಗೆ ನಾನು ಈ ವಿಲನೀಕರಣಕ್ಕೆ ಸಂಬಂಧಪಟ್ಟ ಮಾನ್ಯತೆಯನ್ನು ಎತ್ತಿಹಿಡಿದಿದ್ದೇನೆ. ಇದರಿಂದಾಗಿ ವಿಧಾನ ಸಭೆಯಲ್ಲಿ 36 ಸದಸ್ಯರನ್ನು ಹೊಂದಿದ್ದ ಕಾಂಗ್ರೆಸ್ (ಐ) ಪಕ್ಷದ ಬಲವು ಈ ಐದು ಜನರ ವಿಲೀನದಿಂದಾಗಿ 41 ಆಗಿರುತ್ತದೆ.

ವಿಧಾನ ಸಭೆಯಲ್ಲಿ ಭಾರತೀಯ ಜನತಾಪಕ್ಷವು 40 ಸದಸ್ಯರನ್ನು ಹೊಂದಿದ್ದು, ಅಧಿಕೃತ ವಿರೋಧಪಕ್ಷದ ಮಾನ್ಯತೆಯನ್ನು ಹೊಂದಿತ್ತು. ಆದರೆ ಈಗ ಬದಲಾದ ಸನ್ನಿವೇಶದಲ್ಲಿ ಕಾಂಗ್ರೆಸ್ (ಐ) ಪಕ್ಷವು ವಿಧಾನ ಸಭೆಯಲ್ಲಿ 41 ಸದಸ್ಯರನ್ನು ಹೊಂದಿರುವುದರಿಂದ ಅಧಿಕೃತ ವಿರೋಧಪಕ್ಷವೆಂದು ಮಾನ್ಯತೆಗೊಳಿಸಲು ಹಕ್ಕುಳ್ಳುದ್ದಾಗಿದೆ.

ಆದುದರಿಂದ ವಿಧಾನ ಸಭೆಯಲ್ಲಿ ಕಾಂಗ್ರೆಸ್ (ಐ) ಶಾಸಕಾಂಗ ಪಕ್ಷಕ್ಕೆ ಅಧಿಕೃತ ವಿರೋಧಪಕ್ಷವೆಂದು ಮಾನ್ಯತೆ ನೀಡಿದ್ದೇನೆ ಹಾಗೂ ಕಾಂಗ್ರೆಸ್ (ಐ) ಶಾಸಕಾಂಗ ಪಕ್ಷದ ನಾಯಕರಾದ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ ಅವರನ್ನು ವಿರೋಧಪಕ್ಷದ ನಾಯಕರೆಂದು ಮಾನ್ಯತೆ ನೀಡಿದ್ದೇನೆ.

8. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ವಿಷಯ:- ಹೆಜ್ಜಾಲದಲ್ಲಿ ನಡೆದ ಗೋಲಿಬಾರ್‌ಗಳ ಬಗ್ಗೆ:-

ಅಧ್ಯಕ್ಷರು:- ಈಗ ನಿಲುವಳಿ ಸೂಚನೆಯನ್ನು ಹಲವಾರು ಸದಸ್ಯರು ಕೊಟ್ಟಿದ್ದೀರಿ, ಆ ಪೈಕಿ ಮೊದಲಿಗೆ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಕಳುಹಿಸಿರುವುದನ್ನು ಈಗ ತೆಗೆದುಕೊಳ್ಳುತ್ತೇನೆ. ಖರ್ಗೆಯವರೇ, ಸೂಚನೆ ಮಂಡಿಸಿ.

12.30 ಪಿಎಂ

+ ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ದಿನಾಂಕ 3-7-96 ರಂದು ಹೆಜ್ಜಾಲದಲ್ಲಿ ವಳ್ಳಿಯಪ್ಪ ಟೆಕ್ಸ್‌ಟೈಲ್ ಕಾರ್ಖಾನೆ ಬಳಿ ಕಾರ್ಮಿಕರು ಹಾಗೂ ನಾಗರೀಕರು ಮೇಲೆ ಪೋಲೀಸರ ಗೋಲೀಬಾರ್ ಮತ್ತು ಅದಕ್ಕೆ ಸಂಬಂಧಪಟ್ಟ ಹಾಗೆ 3 ಜನರ ಮರಣ ಇದರ ಬಗ್ಗೆ ಇವರೆಲ್ಲರೂ ಇಲ್ಲಿ ಇಂದು ಪ್ರಶ್ನೆ ಎತ್ತಿದ್ದಾರೆ. ಮಾನ್ಯ ಅಧ್ಯಕ್ಷರೆ, ತಮಗೆ ಮತ್ತು ಎಲ್ಲರಿಗೂ ತಿಳಿದಿರುವ ಹಾಗೆ ಸರಕಾರ ಇದರ ಬಗ್ಗೆ ಈಗಾಗಲೇ ನಡೆದಿರತಕ್ಕಂತಹ ಗೋಲೀಬಾರ್‌ನಲ್ಲಿ ಆಗಿರತಕ್ಕಂತಹ ಕೊಲೆ ಇದಕ್ಕೆ ಸಂಬಂಧಪಟ್ಟ ಹಾಗೆ ನಾವು ನ್ಯಾಯಾಂಗ ತನಿಖೆಯನ್ನು ಮಾಡಬೇಕೆಂದು ಆಜ್ಞೆಮಾಡಿಯಾಗಿದೆ. ನ್ಯಾಯಾಂಗ ತನಿಖೆಗೆ ಆಜ್ಞೆ

ಮಾಡಿಯಾದ ಮೇಲೆ ಪುನಃ ಇದೇ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿ ಅದರ ಬಗ್ಗೆ ಚರ್ಚೆ ಮಾಡತಕ್ಕಂಥಾದ್ದು ನಮ್ಮ ನಿಯಮಾವಳಿಯಲ್ಲಿ ಇದಕ್ಕೆ ಅವಕಾಶ ಇಲ್ಲ. ವಿರೋಧ ಪಕ್ಷದವರದ್ದೇ ಬೇಡಿಕೆ ಇತ್ತು. ಅಲ್ಲಿ ನಡೆದಿರತಕ್ಕಂತಹ ಗೋಲೀಬಾರ್ ಯಾವುದು ಇದೆ ಅದಕ್ಕೆ ಸಂಬಂಧಪಟ್ಟ ಹಾಗೆ ನ್ಯಾಯಾಂಗ ತನಿಖೆ ನಡೆಸಬೇಕೆಂದು ಹೇಳಿದ್ದರು. The terms of reference of the Commission are: Circumstances leading to firing which ultimately led to the death of three persons. ಇದಕ್ಕೆ ಸಂಬಂಧಪಟ್ಟ ಹಾಗೆ ನ್ಯಾಯಾಂಗ ತನಿಖೆಯನ್ನು ಈಗಾಗಲೇ ನೇಮಕ ಮಾಡಿ ಆ ಪ್ರಕ್ರಿಯೆ ಶುರುವಾಗುತ್ತಿರತಕ್ಕಂತಹ ಸಂದರ್ಭದಲ್ಲಿ ಈ ಸದನದಲ್ಲಿ ಇದನ್ನು ಚರ್ಚೆ ಮಾಡಲಿಕ್ಕೆ ನಮ್ಮ ನಿಯಮಾವಳಿಯಲ್ಲಿ ಕೂಡ ಅವಕಾಶ ಇಲ್ಲ. ಈ ನಿಲುವಳಿ ಸೂಚನೆಯನ್ನು ತಂದಿರುವ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಎಲ್ಲರೂ ನನ್ನ ವಾದವನ್ನು ಒಪ್ಪುತ್ತಾರೆಂದು ಭಾವಿಸಿದ್ದೇನೆ. ನಾವೂ ಕೂಡ ಈ ಸದನದಲ್ಲಿ ಕೆಲವು ಸಂಪ್ರದಾಯಗಳನ್ನು ಒಪ್ಪಿದ್ದೇವೆ. ಅನೇಕ ವಿಧಿ ವಿಧಾನಗಳನ್ನು ಇಲ್ಲಿ ನಾವು ಮಾಡಿದ್ದೇವೆ. ಅದನ್ನು ನಾವೆಲ್ಲರೂ ಒಪ್ಪಿಯಾದ ಮೇಲೆ ಇದನ್ನು ಇಲ್ಲಿ ಇಂದು ಚರ್ಚೆ ಮಾಡಲಿಕ್ಕೆ ಅವಕಾಶ ಬರುವುದಿಲ್ಲ. ಆದ್ದರಿಂದ ತಾವು ಅವರಿಗೆ ಆದೇಶ ಕೊಡುವುದರ ಮುಖಾಂತರ ಈ ಹಿನ್ನೆಲೆಯಲ್ಲಿ ಇದನ್ನು ಕಾನೂನಿನ ಅಡಿಯಲ್ಲಿ ಚರ್ಚೆ ಮಾಡುವುದಕ್ಕಾಗುವುದಿಲ್ಲವೆಂಬ ತೀರ್ಪನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):- ಶ್ರೀಮಾನ್ ನಾಣಯ್ಯನವರು ಏನು ಒಂದು ಕ್ರಿಯಾಲೋಪವನ್ನು ಎತ್ತಿದ್ದಾರೆ ಅದು ಇದಕ್ಕೆ ಅನ್ವಯಿಸುವುದಿಲ್ಲ. ಜ್ಯುಡಿಷಿಯಲ್ ಪ್ರೋಬ್ ಮಾಡಿ ಎಂದು ನಾವು ಕೇಳಿದ್ದೇವೆ ಮತ್ತು ಎಲ್ಲಾ ವಿರೋಧ ಪಕ್ಷಗಳ ಸದಸ್ಯರೂ ಕೇಳಿದ್ದಾರೆ. ನಾವು ಇದಕ್ಕೆ ಸೀಮಿತವಾಗಿ ನಿಲುವಳಿ ಸೂಚನೆಯನ್ನು ಇಲ್ಲಿ ಇಂದು ಕೊಟ್ಟಿಲ್ಲ. ತಾವು ಸಂಪೂರ್ಣವಾಗಿ ನೋಡಿದರೆ ರಾಮನಗರ ತಾಲ್ಲೂಕಿನ ಹೆಜ್ಜಾಲದ ವೆಳ್ಳಿಯಪ್ಪ ಜವುಳಿ ಕಾರ್ಮಿಕರು ಶಾಂತಿಯುತವಾಗಿ ನಡೆಸುತ್ತಿದ್ದ ರಸ್ತೆ ತಡೆ ಚಳುವಳಿಯಲ್ಲಿ ಯಾವುದೇ ಪೂರ್ವಭಾವಿ ಸೂಚನೆ ಇಲ್ಲದೆ ಪೋಲೀಸರು ಅನಾವಶ್ಯಕವಾಗಿ ಗುಂಡು ಹಾರಿಸಿದ ಪರಿಣಾಮವಾಗಿ ಅಮಾಯಕರ ಸಾವು ನೋವುಗಳು ಸಂಭವಿಸಿದ್ದು ಅದೇ ರೀತಿ ರಾಜ್ಯದ ಇತರೇ ಸ್ಥಳಗಳಾದ ಮುಳಬಾಗಿಲು ಬಂಗಾರುಪೇಟೆ ಹೊಳೆನರಸೀಪುರ, ಮಂಡ್ಯ ಮುಂತಾದ ಕಡೆಗಳಲ್ಲಿ ಪೋಲಿಸರ ಅತಿ ವರ್ತನೆಯಿಂದಾಗಿ ಪೋಲೀಸ್ ಠಾಣೆಗಳಲ್ಲಿ ಸಾವು ಸಂಭವಿಸಿದೆ. ಜೊತೆಗೆ ರಾಜ್ಯದ ಇತರ ಕಡೆಗಳಲ್ಲಿ ಕಾನೂನು ಮತ್ತು ಶಾಂತಿ ಪಾಲನೆ ಸಂಪೂರ್ಣವಾಗಿ ಕುಸಿದಿರುವ ವಿಷಯದಲ್ಲಿ ಚರ್ಚಿಸಲು ಈ ನಿಲುವಳಿ ಸೂಚನೆಯನ್ನು ನೀಡಲಾಗಿದೆ. ಅಂದರೆ ಅದೊಂದು ವಿಷಯ. ಆದರೆ ಇಲ್ಲಿ ಅನೇಕ ಇನ್ಸಿಡೆಂಟ್ಸ್‌ಗಳು ಇವೆ. ಇಲ್ಲಿ ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ಇದೆ. ಕೇವಲ ಕಾನೂನಿನ ವ್ಯವಸ್ಥೆಗೆ ಸಂಬಂಧಪಟ್ಟಂತೆ ಮಾತನಾಡುತ್ತಿದ್ದೇವೆ. ಎರಡನೆಯದು ಜ್ಯುಡಿಷಿಯಲ್ ಅಂದರೆ ಅವರು ಇವತ್ತು ಪಬ್ಲಿಷ್ ಮಾಡಿ ಯಾವ್ಯಾವ ಟರ್ಮ್ಸ್ ಆಫ್ ರೆಫರೆನ್ಸ್ ಇದೆ ಅದಕ್ಕೇನಾದರೂ ಅಡ್ಡಿ ಆತಂಕಪಡಿಸುವುದು ಇದ್ದರೆ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಆ ಪ್ರಶ್ನೆ ಇಲ್ಲಿ ಉದ್ಭವಿಸಿಲ್ಲ. ಯಾವ ರೀತಿಯಾಗಿ ಪೋಲೀಸರು ತಮ್ಮ ದೌರ್ಜನ್ಯವನ್ನು ಅಲ್ಲಿ ನಡೆಸಿದರು ಇದಕ್ಕೆ ಹಿನ್ನೆಲೆಯ

ಏನು, ಇದಕ್ಕೆ ಕಾರಣಕರ್ತರು ಯಾರು, ಯಾವ ಕಾರಣಕ್ಕಾಗಿ ನಡೆಯಿತು ಎಂಬ ವಿಚಾರ ಮಾಡಬೇಕಾಗಿದೆ. ಅದೂ ಚುನಾವಣೆ ಘೋಷಣೆಯಾದ ಮೇಲೆ ಮಂತ್ರಿಗಳು ಚುನಾವಣಾ ಪ್ರಚಾರಕ್ಕೆ ಹೋಗುವಾಗ ಪಾರ್ಲಿಮೆಂಟ್ ಸದಸ್ಯರು ಪ್ರಚಾರಕ್ಕೆ ಹೋದಾಗ ಇವರು ಪ್ರಚೋದನೆ ಮಾಡಿದರೋ ಇಲ್ಲವೇ ಪೋಲೀಸರು ತಾವಾಗಿಯೆ ಇವರ ರಕ್ಷಣೆಗೋಸ್ಕರ ಆ ರೀತಿ ಮಾಡಿದರೋ ಅಥವಾ ತಮ್ಮ ಹೊಲದಲ್ಲಿ ಕೆಲಸ ಮಾಡತಕ್ಕಂತಹ ಅಮಾಯಕ ಜನರ ಮೇಲೆ ಇವರು ಗೋಲೀಬಾರ್ ಮಾಡಿದರೋ ಎಂಬುದು ಸಂದರ್ಭವನ್ನೇ ಹೇಳುತ್ತೇವೆಯೇ ಹೊರತಾಗಿ ಬೇರೆ ಹೇಳುವುದಿಲ್ಲ. ಯಾರು ಮಾಡಿದರು, ಏನು ಇಲ್ಲ ಎನ್ನುವುದನ್ನು ಜ್ಯುಡಿಷಿಯಲ್ ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ನೋಡೋಣ. ಅದರಲ್ಲೂ ಜ್ಯುಡಿಷಿಯಲ್ ಪ್ರೋಬ್ ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ. ಕಾಂಗ್ರೆಸ್ ಪಕ್ಷದ ಸದಸ್ಯರೇ ಇದಕ್ಕೆ ಕಾರಣ ಇರಬಹುದೆಂಬ ಸಂಶಯ ನನಗೆ ಬಂದಿದೆ. ಎಂದು ಪತ್ರಿಕಾ ಹೇಳಿಕೆ ಕೊಟ್ಟಿದ್ದಾರೆ. ಒಂದು ಕಡೆ ಜ್ಯುಡಿಷಿಯಲ್ ಪ್ರೋಬ್ ಮಾಡಿಸುತ್ತೇವೆಂದು ಹೇಳುತ್ತೀರಿ ಮತ್ತೊಂದು ಕಡೆ ಕಾಂಗ್ರೆಸ್ ಪಕ್ಷದವರದ ಮೇಲೆ ನಮ್ಮ ಸಂಶಯ ಇದೆ ಎಂದು ಹೇಳುತ್ತೀರಿ. ತಾವು ಎಷ್ಟರ ಮಟ್ಟಿಗೆ ಅದರ ಮೇಲೆ ನಡೆದುಕೊಂಡಿದ್ದೀರಿ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಅದಕ್ಕೇನೂ ಸಂಬಂಧ ಬರುವುದಿಲ್ಲ. ಅನೇಕ ಲಾಕಪ್‌ಡೆತ್ಸ್ ಬಗ್ಗೆ ಲಾ ಅಂಡ್ ಆರ್ಡರ್ ಬಗ್ಗೆ ಡಕಾಯಿತಿ ಬಗ್ಗೆ ಎಲ್ಲವನ್ನೂ ನಾವು ಪ್ರಸ್ತಾಪ ಮಾಡಬೇಕಾಗುತ್ತದೆ ತಾವು ದಯವಿಟ್ಟು ಅವಕಾಶ ಮಾಡಿಕೊಡಬೇಕು.

ಶ್ರೀ ಜೆ.ಹೆಚ್.ಪಟೇಲ್:- ನಾನು ಕಾಂಗ್ರೆಸ್ ಪಕ್ಷದ ಬಗ್ಗೆ ಸಂದೇಹ ಬರುವ ಬಗ್ಗೆ ಹೇಳಿದ್ದೇನೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಇದು ಯಾವ ಪತ್ರಿಕೆಯಲ್ಲಿ ಬಂದಿದೆಯೋ ನನಗೆ ಗೊತ್ತಿಲ್ಲ ನಾನಂತೂ ಹೇಳಿಲ್ಲ. ಜ್ಯುಡಿಷಿಯಲ್ ಪ್ರೋಬ್ ಎಂದು ಹೇಳಿದ ಮೇಲೆ ಯಾವುದೇ ಪಕ್ಷದ ಹೆಸರನ್ನು ಹೇಳಿದರೆ ತಪ್ಪಾಗುತ್ತದೆಂದು ಅದೆ ಪತ್ರಿಕಾ ಗೋಷ್ಠಿಯಲ್ಲಿ ಹೇಳಿದ್ದೇನೆ. ಪತ್ರಿಕೆಯವರು ಊಹೆ ಮಾಡಿದರೋ ಅಥವಾ ಅವರಿಗೆ ನಿಜಾಂಶ ಗೊತ್ತಿತ್ತೋ ನನಗೆ ಗೊತ್ತಿಲ್ಲ. ನಾನು ಮಾತ್ರ ಹೇಳಿಲ್ಲ. ಅದನ್ನು ಹೇಳಲೂಬಾರದು. ಯಾರೂ ಯಾವ ಪಕ್ಷಗಳು ಎಂದು ಹೇಳಬಾರದು. ಜ್ಯುಡಿಷಿಯಲ್ ವಿಚಾರಣೆಗೆ ಆದೇಶ ಮಾಡಿ ಅದು ಮುಂದೆ ಏನು ಹೇಳುತ್ತದೆ ಅವರ ಫೈಂಡಿಂಗ್ಸ್ ಏನು ಎನ್ನುವುದರ ಮೇಲೆ ಮಾತನಾಡಬೇಕೇ ವಿನಹ ಇದು ನಿಲುವಳಿ ಸೂಚನೆಗೆ ಬರುವುದಿಲ್ಲ. ಚರ್ಚೆ ಮಾಡಿದರೆ ನಾವು ಯಾವತ್ತಿಗೂ ಸಿದ್ಧ. ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೂ ಸಿದ್ಧ. ಆದರೆ ನಿಲುವಳಿ ಸೂಚನೆಯಲ್ಲಿ ಬರುವುದಿಲ್ಲ. ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಶುರು ಮಾಡಲಿ. ಅಥವಾ ಬೇರೆ ಯಾವುದಾದರೂ ರೂಪದಲ್ಲಿ ತರಬಹುದು. ತಾವು ಚೆನ್ನಾಗಿ ಅರಿತವರು. ಈ ರೀತಿ ನಿಯಮವನ್ನು ಪ್ರತಿನಿತ್ಯ ಮಾಡುವುದಾದರೆ ಆ ರೂಲ್ ಬುಕ್ ಏಕೆ ಇರಬೇಕು? ನಮಗೆ ಹೇಗೆ ಮನಸ್ಸಿಗೆ ಬಂತೋ ಹಾಗೆ ಮಾತನಾಡುತ್ತಾ ಹೋಗಬಹುದು. ತಮ್ಮ ಕಂಟ್ರೋಲ್ ಇದೆ. ಮಾನ್ಯ ವಿರೋಧ ಪಕ್ಷದ ನಾಯಕರು ಕಾನೂನು ಬಲ್ಲವರು. ನಾವೇ ಮಾಡಿದ ಕಾನೂನುಗಳನ್ನು ನಾವು ಗೌರವಿಸದೇ ಹೋಗುವುದು, ಕಾನೂನು ಮಾಡುವ ಸದನದಲ್ಲೇ ಕಾನೂನಿಗೆ ಬೆಲೆ ಇಲ್ಲವೆಂದರೆ ಬಹಳ ಕಷ್ಟವಾಗುತ್ತದೆ ಎಂದು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾವು ಕಾನೂನು ಬಿಟ್ಟು ಏನೂ ಮಾಡುತ್ತಿಲ್ಲ. ಇದಕ್ಕೆ ಪ್ರೊಫಾರ್ಮ ಇದೆ. ನಿಲುವಳಿ ಸೂಚನೆಯನ್ನು ತಿರಸ್ಕಾರ ಮಾಡುವುದು ಅದನ್ನು ಅಲೋ ಮಾಡುವುದು ಎಷ್ಟರ ಮಟ್ಟಿಗೆ ಇದನ್ನು ಚರ್ಚೆಗೆ ತೆಗೆದುಕೊಂಡು ಹೋಗಬೇಕು ಎನ್ನುವುದು ತಮ್ಮ ತೀರ್ಪಿಗೆ ಬಿಟ್ಟಿದ್ದುದು. ತಾವು ಏನು ಅಪ್ಪಣೆ ಕೊಡುತ್ತಿರೋ ಅದರ ಪ್ರಕಾರ ನಾವು ಹೋಗುತ್ತೇವೆ. ಆ ಪ್ರೊಫಾರ್ಮ್ ಪ್ರಕಾರ ನಾವು ಕೊಟ್ಟಿದ್ದೇವೆ. ಅದರ ಪ್ರಕಾರವೇ ನಾವು ಕೇಳಿದ್ದುದು. ಕಾನೂನು ಬಿಟ್ಟೆ ಹೋಗುತ್ತಿದ್ದಾರೆಂದು ಹೇಳುವುದು ಸರಿಯಲ್ಲ. ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಜ್ಯುಡಿಷಿಯಲ್‌ಗೆ ತೊಂದರೆಯಾಗತಕ್ಕಂತಹ ರೀತಿಯಲ್ಲಿ ಅಥವಾ ವಿಚಾರಣೆಗೆ ಅಡ್ಡಿ ಬರತಕ್ಕಂತಹ ರೀತಿಯಲ್ಲಿ ಮಾಹಿತಿಕೊಡುವುದಿಲ್ಲ. ಯಾವ ರೀತಿ ಅಮಾಯಕ ಜನರ ಕೊಲೆಯಾಯಿತು. ಅದು ಕೊಲೆಯೇ ಎಂದು ನೇರವಾಗಿ ಹೇಳಬಹುದು. ಯಾವುದಾದರೂ ಬೇರೆ ಅನಾಹುತವನ್ನು ತಪ್ಪಿಸುವುದಕ್ಕೋಸ್ಕರ ಫೈರಿಂಗ್ ಮಾಡಿದ್ದಾರೆಂದು ನಾನು ಹೇಳುವುದಿಲ್ಲ. ಪೋಲೀಸರೇ ನೇರವಾಗಿ ಷೂಟ್ ಮಾಡಿದ್ದು ಅದನ್ನು ನಾವು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಗೆ ಇದನ್ನು ತೆಗೆದುಕೊಂಡರೆ ಸಮಗ್ರವಾಗಿ ಅದೆ ಒಂದು ವಿಷಯದ ಮೇಲೆ ದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಇದಕ್ಕೊಂದು ವಿಶೇಷ ಮಹತ್ವ ಬರಬೇಕು ಇಂತಹ ಘಟನೆ ಮೊದಲನೆಯ ಸಲ ನಡೆದಿದೆ. ಚುನಾವಣೆಯಲ್ಲಿ ಈ ರೀತಿಯಾಗಿ ಅಧಿಕಾರಿಗಳನ್ನು ದುರುಪಯೋಗ ಮಾಡಿಕೊಂಡು ಅಮಾಯಕ ಜನರ ಮೇಲೆ ಬಲತ್ಕಾರ ಮಾಡತಕ್ಕಂಥಾದ್ದು ಮೊದಲನೆಯ ಸಲ. ಹಿಂದೆಂದೂ ಆಗಿಲ್ಲ. ಅದಕ್ಕೋಸ್ಕರ ನಾವು ಈ ಪ್ರಶ್ನೆಯನ್ನು ಬೇರೆ ರೂಪದಲ್ಲಿ ತರತಕ್ಕಂತಹ ಅವಶ್ಯಕತೆ ಇದೆ. ತಾವು ಇದನ್ನು ಚರ್ಚೆಗೆ ತೆಗೆದುಕೊಂಡರೆ ಒಳ್ಳೆಯದಾಗುತ್ತದೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

+ ಶ್ರೀ ಜಿ.ವಿ. ಶ್ರೀ ರಾಮರೆಡ್ಡಿ (ಬಾಗೇಪಲ್ಲಿ):- ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಿದ್ದೇವೆ. ಆದ್ದರಿಂದ ಇದನ್ನು ಇಲ್ಲಿ ಚರ್ಚೆ ಮಾಡಬಾರದೆಂದು ನಿಯಮಾವಳಿಯಲ್ಲಿ ಇದೆ ಎಂದು ಮಾನ್ಯ ಕಾನೂನು ಮಂತ್ರಿಗಳು ಹೇಳುತ್ತಿದ್ದಾರೆ. ಇದಕ್ಕೆ ಇನ್ನೂ ನ್ಯಾಯಾಧೀಶರನ್ನು ನೇಮಕ ಮಾಡಿಲ್ಲ. ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಿದಂತಹ ಸಂದರ್ಭದಲ್ಲಿ ಆ ನ್ಯಾಯಾಂಗ ತನಿಖೆಗೆ ಒಳಪಟ್ಟಂತಹ ಅಥವಾ ನ್ಯಾಯಾಧೀಶರು ಮಾಡಿದಂಥಾದ್ದರ ಬಗ್ಗೆ ನಾವು ಚರ್ಚೆ ಮಾಡುತ್ತಿಲ್ಲ. ಹೆಜ್ಜಾಲದಲ್ಲಿ 3ನೇ ತಾರೀಖು ನಡೆದಂತಹ ಘಟನೆ ಬಗ್ಗೆ ಚರ್ಚೆ ಮಾಡಬೇಕು. ಪೋಲೀಸರು ಅಲ್ಲಿ ಪೈಶಾಚಿಕ ಕೃತ್ಯವನ್ನು ನಡೆಸಿದ್ದಾರೆ. 3 ಜನರ ಮುಗ್ಧ ಕಾರ್ಮಿಕರನ್ನು ಸಾಯಿಸಿದ್ದಾರೆ. ಏಕೆ ಇವರನ್ನು ಯಾವ ಕಾರಣದಿಂದ ಸಾಯಿಸಿದ್ದಾರೆ ಎನ್ನುವುದನ್ನು ಚರ್ಚೆ ಮಾಡಲಿಕ್ಕೆ ನಾವು ತಂದಿದ್ದೇವೆಯೇ ಹೊರತಾಗಿ, ನ್ಯಾಯಾಂಗ ತನಿಖೆಯನ್ನು ಅದರ ವ್ಯಾಪ್ತಿಯನ್ನು ಚರ್ಚೆ ಮಾಡಲಿಕ್ಕೆ ಇಲ್ಲಿ ತಂದಿಲ್ಲ. ಇಲ್ಲಿ ಹಲವಾರು ಗೊಂದಲಮಯ ಪರಿಸ್ಥಿತಿಗಳು ಉಂಟಾಗಿವೆ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ ಹೇಳಿದರು. ಕಾಂಗ್ರೆಸ್ ಪಕ್ಷದ ಸದಸ್ಯರು ಪಿತೂರಿ ನಡೆಸಿದ್ದಾರೆ ಅಥವಾ ಅವರ ಮೇಲೆ ಸಂಶಯ ಇದೆ ಎಂದು ನಾನು ಹೇಳಲಿಲ್ಲವೆಂದು ಹೇಳಿದರು. 3ನೇ ತಾರೀಖು ಚಿಕ್ಕನಾಯಕನ ಹಳ್ಳಿಯಲ್ಲಿ ಬಹಿರಂಗ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ ರೀತಿ ಹೇಳಿದ್ದಾರೆ. ಕಾಂಗ್ರೆಸ್ ಪಿತೂರಿ-ಪಟೇಲ್, ಬಿಡದಿ ಸಮೀಪ ನಡೆದ ಗಲಭೆಗೆ ಕಾಂಗ್ರೆಸ್ ಪಕ್ಷದ ಪಿತೂರಿಯೇ

ಕಾರಣವೆಂದು ಮಾನ್ಯ ಮುಖ್ಯಮಂತ್ರಿ ಜೆ.ಹೆಚ್.ಪಟೇಲ್ ಆರೋಪಿಸಿದರು. ಪ್ರಜಾವಾಣಿ ಪತ್ರಿಕೆ 3ನೇ ತಾರೀಖು ಬಂದಿದೆ.

ಅಧ್ಯಕ್ಷರು:- ನಮ್ಮ ಸದನದಲ್ಲಿ ಅವುಗಳನ್ನು ಆಧಾರವಾಗಿಟ್ಟುಕೊಂಡು ನಾವು ಕಾರ್ಯಕಲಾಪ ನಡೆಸುವುದಕ್ಕಾಗುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ನಮಗೆ ಬೇರೆ ಆಧಾರಗಳನ್ನೇನೂ ಅವರು ಕೊಟ್ಟಿಲ್ಲ.

ಅಧ್ಯಕ್ಷರು:- ಈ ಸದನದಲ್ಲಿ ಹಿಂದೆ ನನ್ನ ಸ್ಥಾನದಲ್ಲಿ ಇರತಕ್ಕಂತಹವರು ಅನೇಕ ತೀರ್ಪುಗಳನ್ನು ಕೊಟ್ಟಿದ್ದಾರೆ. ಪತ್ರಿಕಾ ವರದಿಗಳನ್ನು ಆಧರಿಸಿ ನಾವು ಕಲಾಪವನ್ನು ನಡೆಸುವುದು ಸಾಧುವಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಆ ಆಧಾರವನ್ನು ಒಪ್ಪುವುದು ಬಿಡುವುದು ತಮ್ಮ ವಿವೇಚನೆಗೆ ಹಾಗೂ ಈ ಸದನದ ವಿವೇಚನೆಗೆ ಬಿಟ್ಟರತಕ್ಕಂತಹ ವಿಷಯ. ಆದರೆ ನಾನು ತಮ್ಮ ಗಮನಕ್ಕೆ ತರುವ ವಿಷಯವೇನೆಂದರೆ ಆ ಗೋಲಿಬಾರ್ ನಡೆಯುವ ಅವಶ್ಯಕತೆ ಇತ್ತೇ? ಗೋಲಿಬಾರ್ ನಡೆಸಿರುವ ವಿಧಾನ ಹೇಗಿದೆ? ಅದರ ವ್ಯಾಪ್ತಿ ಏನಿದೆ? ಈ ರೀತಿಯ ಅಮಾನುಷವಾದ ಕೃತ್ಯ ನಡೆಯಬೇಕಾಗಿತ್ತೇ? ಇದರಲ್ಲಿ ಹಲವಾರು ಗೊಂದಲದ ಪರಿಸ್ಥಿತಿ ಇದೆ. ಬೇರೆ ಬೇರೆ ಹೇಳಿಕೆಗಳನ್ನು ಸರ್ಕಾರವೇ ಇದರ ಬಗ್ಗೆ ಹೇಳಿದೆ. ಮತ್ತೆ ಪೋಲೀಸರು ರಸ್ತೆ ರೋಖೋ ಚಳುವಳಿಗೆ ಅನುಮತಿ ಕೊಟ್ಟಿರುವುದು. ಇವೆಲ್ಲಾ ಆದರೂ ಕೂಡ ನಾವು ಚರ್ಚೆ ಮಾಡಬೇಕು ಎನ್ನುತ್ತಿರುವ ವಿಷಯ ಇವತ್ತು ಕಾರ್ಮಿಕರನ್ನು ಬಲಿ ತೆಗೆದುಕೊಂಡಿರುವುದು. ಮೂರು ಜನ ಮುಗ್ಧ ಕಾರ್ಮಿಕರನ್ನು ಬಲಿ ತೆಗೆದುಕೊಂಡಿರುವ ಈ ಘಟನೆಯನ್ನು ಈ ಸದನದಲ್ಲಿ ಚರ್ಚೆ ಮಾಡದಿದ್ದರೆ ಹೇಗೆ? ಇಡೀ ರಾಜ್ಯದ ಜನತೆ ಇದರ ಬಗ್ಗೆ ದಂಗಾಗಿದ್ದಾರೆ. ಗೋಲಿಬಾರ್ ನಡೆಸುವ ಅವಶ್ಯಕತೆ ಇತ್ತೇ? ಇಂಥ ಪ್ರಮುಖವಾದ ವಿಷಯವನ್ನು ಚರ್ಚೆ ಮಾಡಲಿಕ್ಕೆ ಸದನದಲ್ಲಿ ನಮಗೆ ಬೇರೆ ಯಾವುದೂ ದಾರಿ ಇಲ್ಲ. ಇದರ ಮುಖಾಂತರವೇ ನಾವು ನಿಲುವಳಿ ಸೂಚನೆ ಮುಖಾಂತರ ಚರ್ಚೆಗೆ ಸದನದಲ್ಲಿ ತೆಗೆದುಕೊಂಡಿದ್ದೇವೆ. ಇದನ್ನು ಪ್ರಸ್ತಾಪ ಮಾಡಬೇಕು ಎಂದು ಹೇಳಿ ತಮ್ಮ ಅನುಮತಿಯನ್ನು ಕೇಳಿದ್ದೇವೆ. ತಾವು ಪ್ರಶ್ನೋತ್ತರ ಮುಗಿದಮೇಲೆ ಇದನ್ನು ತೆಗೆದುಕೊಳ್ಳೋಣ ಎಂದು ಹೇಳಿದಿರಿ. ನೀವೂ ಕೂಡ ಪ್ರಾರಂಭ ಮಾಡಿಯೆಂದು ಹೇಳಿದ ಮೇಲೆ ತಮ್ಮ ಆದೇಶ ಬಂದ ಮೇಲೆ ಇದರ ಬಗ್ಗೆ ಪ್ರಶ್ನೆ ಮಾಡುವುದು ಸರಿಯಲ್ಲ. ನ್ಯಾಯಾಂಗ ತನಿಖೆಯನ್ನು ಅದರ ಬಗ್ಗೆ ಚರ್ಚೆ ಮಾಡಬೇಕು ಎಂದು ನಾವೇನೂ ಇಲ್ಲಿ ಕೇಳುತ್ತಿಲ್ಲ. ಆ ಘಟನೆಯ ಬಗ್ಗೆ ಮತ್ತು ಅಲ್ಲಿ ನಡೆದಿರುವ ಕೃತ್ಯದ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಇದಕ್ಕೆ ಯಾರು ಕಾರಣ ಎಂದು ಹೇಳುವುದು ಇಡೀ ರಾಜ್ಯಕ್ಕೆ ಗೊತ್ತಾಗಬೇಕು. ಅದನ್ನು ನಾವು ಇಲ್ಲಿ ಪ್ರಸ್ತಾಪ ಮಾಡಬೇಕಾಗಿರುವುದು. ನಿಲುವಳಿ ಸೂಚನೆಯನ್ನು ನಾವು ಐದಾರು ಜನರು ಕಳುಹಿಸಿದ್ದೇವೆ ಎಲ್ಲಾ ಪಕ್ಷದವರು ಸೇರಿ. ಆದ್ದರಿಂದ ಈ ನಿಲುವಳಿ ಸೂಚನೆಗೆ ತಾವು ಅನುಮತಿ ಕೊಡಬೇಕು, ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಬೇಕು ಎಂದು ಹೇಳಿ ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ.

+ ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ತಾವು ಮಾತನಾಡುವಾಗ ಪತ್ರಿಕಾ ವರದಿಗಳು ಆಧಾರವಾಗುವುದಿಲ್ಲ ಎಂದು ಹೇಳಿ ತೀರ್ಪು ಕೊಟ್ಟಿರುವುದರ ಬಗ್ಗೆ ಹೇಳಿದ್ದೀರಿ. ಆ ತೀರ್ಪನ್ನು ನಾವೇನೂ ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು:- ನಾನು ಕೊಟ್ಟ ತೀರ್ಪಲ್ಲ. ಹಿಂದಿನವರು ಕೊಟ್ಟಿರುವ ತೀರ್ಪು.

ಶ್ರೀ ವಾಟಾಳ್ ನಾಗಾರಾಜ್:- ಹಿಂದಿನವರು ಕೊಟ್ಟಿದ್ದಾರೆ ಎಂದು ಹೇಳಿದ್ದೀರಿ. ಆ ತೀರ್ಪನ್ನು ಸಹ ನಾವು ಇಲ್ಲಿ ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಒಂದು, ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ನಮ್ಮಗಳಿಗೆ ಆಧಾರ ಇರುವುದು, ಸರ್ಕಾರಕ್ಕೆ ಆಧಾರ ಪೋಲೀಸ್ ಇಲಾಖೆ ಇದೆ. ಅವರಿಗೆ ಅನೇಕ ರೀತಿಯ ವ್ಯವಸ್ಥೆಗಳಿವೆ. ನಮ್ಮಗಳಿಗೆ ಇರುವ ವ್ಯವಸ್ಥೆ ಪತ್ರಿಕೆಯೇ ನೇರವಾಗಿ. ಸಾಮಾನ್ಯವಾಗಿ ಇತ್ತೀಚಿನ ದಿನಗಳಲ್ಲಿ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪತ್ರಿಕೆಗಳಲ್ಲಿ ಬಂದಂಥ ಸುದ್ದಿಯೇ ಬಹಳ ಆಧಾರವಾಗಿ ನಡೆಯುವುದು ತಮಗೆ ಗೊತ್ತಿದೆ. ಈಗ ನೇರವಾಗಿ ಮಾನ್ಯ ಮುಖ್ಯಮಂತ್ರಿಗಳು ನಾನು ಹಾಗೆ ಹೇಳಿಲ್ಲ ಎಂದು ಅವರು ಹೇಳಿದ್ದಾರೆ. ಇಲ್ಲಿ ಪತ್ರಿಕೆಯಲ್ಲಿ ಹೇಳುವಾಗ ವರದಿಗಾರರು ತಮ್ಮ ಹೆಸರನ್ನೂ ಕೊಟ್ಟಿದ್ದಾರೆ. ಇದು ಬಹಳ ಅತ್ಯಂತ ಪ್ರಾಮುಖ್ಯ. ಆ ವರದಿಗಾರರ ಹೆಸರೇ ಪತ್ರಿಕೆಯಲ್ಲಿ ಪ್ರಕಟವಾಗಿದೆ. ತುಮಕೂರಿನಲ್ಲಿ ಇವರು ಪತ್ರಿಕಾ ಹೇಳಿಕೆ ಕೊಡುವಾಗ ಕಾಂಗ್ರೆಸ್‌ನವರು ಮಾಡಿದ್ದಾರೆ ಎಂದು ಹೇಳಿಕೆ ಕೊಟ್ಟಿದ್ದಾರೆ. ಆಮೇಲೆ ಅದು ಚರ್ಚೆಗೆ ಬಂದಾಗ ಮಾಡೋಣ. ನಾನು ತಮಗೆ ಏನು ಹೇಳುವುದೇನೆಂದರೆ ಇದು ಎಂಟು ದಿವಸಗಳ ಹಿಂದೆ ನಡೆದಿರುವುದು. ವರ್ಷದ ಹಿಂದೆ ನಡೆದಿರುವ ವಿಚಾರಗಳೇನಲ್ಲ. ನ್ಯಾಯಾಂಗ ತನಿಖೆ ವಿಷಯ ಬಂದಾಗ ನ್ಯಾಯಾಧೀಶರು ಯಾರು? ಅದು ಇನ್ನೂ ತೀರ್ಮಾನವಾಗಿಲ್ಲ. ಯಾರು ನ್ಯಾಯಾಧೀಶರು? ತನಿಖೆ ಯಾವಾಗ? ತನಿಖೆಗೆ ಒಳಪಡಿಸಿರುವ ವಿಚಾರಗಳೇನು? ಯಾವ ಯಾವ ಸೂತ್ರಗಳು ಯಾವುವು ಇನ್ನೂ ಗೊತ್ತಿಲ್ಲ. ಸುಮ್ಮನೆ ನ್ಯಾಯಾಂಗ ತನಿಖೆ, ಸತ್ತವರಿಗೆ ಒಂದು ಲಕ್ಷ ರೂಪಾಯಿ ಪರಿಹಾರ ಬಿಟ್ಟರೆ ನ್ಯಾಯಾಂಗ ತನಿಖೆಯನ್ನು ಯಾರು ಮಾಡಬೇಕು? ಆ ವ್ಯಾಪ್ತಿಯಲ್ಲಿ ನಾವು ಇನ್ನೂ ಹೋಗಿಲ್ಲ. ಆದ್ದರಿಂದ ಇಲ್ಲಿ ನ್ಯಾಯಾಂಗ ತನಿಖೆಯಲ್ಲಿರುವುದು ಚರ್ಚೆ ಮಾಡಬಾರದು ಎಂದು ಒಂದು ಪರಿಪಾಠ ಹಾಕತಕ್ಕಂಥದ್ದಲ್ಲ. ಇವತ್ತು ಹಿಂದೆ ಇದೇ ಸರ್ಕಾರ ಬಂದಾಗ ನನಗೆ ಆಶ್ಚರ್ಯವಾಯಿತು. ಜೆ.ಹೆಚ್.ಪಟೇಲರ ಅನೇಕ ಭಾಷಣಗಳನ್ನು ನಾನು ಕೇಳಿದ್ದೇನೆ. ಯಾವಾಗಲೂ ಈ ರೀತಿ ಗೋಲಿಬಾರ್‌ಗಳ ಬಗ್ಗೆ ಅವರು ವಿರೋಧ ಮಾಡಿದ್ದಾರೆ. ಗೋಲಿಬಾರ್ ನಡೆದಿರುವುದು ಸರಿಯಲ್ಲ ಎಂದು ಹೇಳಿದ್ದಾರೆ. ಅವರಿಗೆ ಗೊತ್ತಿದೆ. ಮಧುಗಿರಿ ಪ್ರಕರಣ ನಡೆದಾಗ ತಮಗೂ ಜ್ಞಾಪಕ ಇರಬಹುದು. ಮಧುಗಿರಿ ಪ್ರಕರಣ ಚರ್ಚೆ ನಡೆದಾಗ ಆಗ ಇದ್ದಂಥ ಗೃಹಮಂತ್ರಿಗಳು ಸಭೆಯಲ್ಲೇ ರಾಜೀನಾಮೇ ಕೊಟ್ಟಂಥ ಇತಿಹಾಸ ಇದೆ. ಆ ಪ್ರಶ್ನೆ ಬೇರೆ. ಆದರೆ ನಾನು ತಮಗೆ ಏನೂ ಹೇಳುತ್ತೇನೆ ಎಂದರೆ ಇದು ಬಹಳ ಪ್ರಾಮುಖ್ಯತೆ ಮತ್ತು ಗಹನವಾದ ವಿಚಾರ. ಈ ವಿಚಾರವನ್ನು ತಾವು ನೇರವಾಗಿ ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ನಮ್ಮ ಅತ್ಯಂತ ಅಗ್ರಹ ಮತ್ತು ಮನವಿ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ರೀತಿ ಇದು ಗೋಲಿಬಾರ್ ಅಲ್ಲ. ಕೊಲೆ! ಇದು ಸ್ಪಷ್ಟ. ಆದ್ದರಿಂದ ಇನ್ನು ಕೊಲೆ ಮಾಡಿರುವ ಅಧಿಕಾರಿಗಳನ್ನು ಬಂಧಿಸಿಲ್ಲ. ಸಾಮಾನ್ಯವಾಗಿ ಯಾರಾದರೂ ಮಾಡಿದ್ದರೆ ಅವರನ್ನು ಈ ಕೂಡಲೇ ಬಂಧಿಸಿ ಜೈಲಿಗೆ ಹಾಕುತ್ತಿದ್ದರು.

ಈ ಕ್ಷಣದವರೆಗೆ ಯಾರು ಕೊಲೆ ಮಾಡಿದ್ದಾರೆ, ಇದನ್ನು ಕೊಲೆಯಂತಲೇ ನಾವು ಕರೆಯುತ್ತೇವೆ. ಆದ್ದರಿಂದ ಅನೇಕ ವಿಚಾರಗಳನ್ನು ನಾವು ಇಲ್ಲಿ ತರಬೇಕಾಗಿದೆ. ದಯಮಾಡಿ ಚರ್ಚೆಗೆ ಅವಕಾಶ ಕೊಡಬೇಕು ಎಂದು ಹೇಳಿ ಇಷ್ಟಕ್ಕೇ ಮಾತ್ರ ನಾನು ನಿಲ್ಲುತ್ತಿದ್ದೇನೆ.

ಅಧ್ಯಕ್ಷರು:- ಮಾನ್ಯ ಕಾನೂನು ಮಂತ್ರಿಗಳು ಒಂದು ವಾಕ್ಯವನ್ನು ಹೇಳಿದರು. "Circumstances leading to firing" is the subject matter under terms of reference by judicial enquiry." ಎಂದು ತಾವು ಹೇಳಿದ್ದುದು. ಶ್ರೀರಾಮರೆಡ್ಡಿಯವರು ಹೇಳಿದ್ದು ಎಲ್ಲಾ ವಿಚಾರಗಳು ಕೂಡ circumstances leading to the police action.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ತಮ್ಮ ಗಮನಕ್ಕೆ ರೂಲ್ 62ನ್ನು ತರುತ್ತೇನೆ:-

> "No motion which seeks to raise discussion on a matter pending before any statutory tribunal or statutory authority performing any judicial or quasi-judicial function or any commission or court of enquiry appointed to enquiry into or investigate any matter shall ordinarily be permitted to be moved;
>
> Provided that the Speaker may in his discretion allow such matter being raised in the House as is concerned with the procedure or subject or stage of enquiry if the Speaker is satisfied that it is not likely to prejudice the consideration of such matter by the statutory tribunal, statutory authority, commission or court of enquiry."

ಅದಕ್ಕೆ ನಾವು ತಮ್ಮ ಮನಸ್ಸನ್ನು ಏತಕ್ಕೆ ಒಲಿಸುತ್ತಿದ್ದೇವೆ ಎಂದರೆ ಇವರು ಕೂಡಿಸಿದಂಥ ಅಥವಾ ನಮ್ಮ ಜ್ಯುಡಿಷಿಯಲ್ ಪ್ರೋಬ್‌ಗೆ ಎನ್‌ಕ್ವೈರಿಗೆ ಧಕ್ಕೆ ತರುವ ರೀತಿಯಲ್ಲಿ ಅಥವಾ ಪ್ರಿಜ್ಯುಡೀಸ್ ಮಾಡುವ ರೀತಿಯಲ್ಲಿ ಯಾವುದೇ ಪದಗಳನ್ನು ನಾವು ಉಪಯೋಗ ಮಾಡುವುದಿಲ್ಲ. ನಾವು ಹೇಳುವುದು ಇವರ ಆಡಳಿತ, ಇವರ ನಡವಳಿಕೆ ಯಾವ ರೀತಿಯಾಗಿ ಎಲ್ಲಾ ಕಡೆ ನಡೆದಿದೆ ಎನ್ನುವ ಬಗ್ಗೆ ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ಮೇಲೆ ಸಂಪೂರ್ಣವಾಗಿ ನಾವು ಮಾತನಾಡುತ್ತಿದ್ದೇವೆ. ಅದರಲ್ಲಿ ಫೈರಿಂಗ್ ಕೂಡ ಒಂದು ವಿಷಯ ಇದೆ. ಇದನ್ನು ನೇರವಾಗಿ ಜ್ಯುಡಿಷೀಯಲ್ ಪ್ರೋಬ್‌ಗೆ ಧಕ್ಕೆಯಾಗುತ್ತದೆ ಎನ್ನುವ ಮಾತು ಬರುವುದಿಲ್ಲ. ತಮಗೆ ಅಧಿಕಾರ ಇದೆ. ಈಗಾಗಲೇ ತಾವು ನಮಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಮಾತನಾಡುವುದಕ್ಕೆ ತಾವು ಪರ್ಮಿಷನ್ ಕೊಟ್ಟರೆ ನಾನು ಮುಂದುವರಿಯುತ್ತೇನೆ.

ಅಧ್ಯಕ್ಷರು:- ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರು. ಚರ್ಚೆ ಬೇಡಿ ಎಂದು ನಾವು ಹೇಳುತ್ತಿಲ್ಲ. ಚರ್ಚೆಗೆ ನಾವು ಸಿದ್ಧವಾಗಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಇಲ್ಲಿ ನಮಗೆ ಅಡ್ಡ ಬರುವುದು ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದ ಹಾಗೆ ನಮ್ಮ ಸದನವನ್ನು ನಡೆಸಿಕೊಂಡು ಹೋಗುವುದಕ್ಕೆ ನಾವೇ ಕೆಲವು ನಿಯಮಾವಳಿಗಳನ್ನು ರೂಪಿಸಿಕೊಂಡಿದ್ದೇವೆ. ನಾವು ಅವುಗಳಿಗೆ ತಿಲಾಂಜಲಿಯನ್ನು ಕೊಡಬೇಕೇ ಅಥವಾ ಗೌರವಿಸಬೇಕೇ ಎನ್ನುವುದಷ್ಟೇ ಪ್ರಶ್ನೆ. ಮತ್ತೆ ತಮ್ಮ ನೋಟೀಸಿನಲ್ಲಿ ತಾವು ಓದಿ ಹೇಳಿದ ಹಾಗೆ ಮಂಡ್ಯ ಮುಳುಬಾಗಿಲು ಇನ್ನು ಅನೇಕ ಕಡೆಗಳ ವಿಷಯಗಳನ್ನು ಹೇಳಿದ್ದೀರಿ. It should be a matter of recent occurrence, should be a specific matter. ಎನ್ನುವುದು ನಮ್ಮ ನಿಬಂಧನೆಗಳಲ್ಲಿ ಇದೆ. ಹೀಗೆ ಎಲ್ಲವೂ ಇದ್ದಾಗ ನಿಲುವಳಿ ಸೂಚನೆಯಲ್ಲೇ ಚರ್ಚೆ ಆಗಬೇಕು ಎನ್ನುವಂಥ ಪಟ್ಟು ಏತಕ್ಕೆ ಹಿಡಿಯುತ್ತೀರಿ? You may take up this matter under some other rule. You take it straightaway for discussion. I am not here to scuttle it. ನೀವು ಬೇಕಾದರೆ ಐದು ನಿಮಿಷ ಕುಳಿತುಕೊಂಡು ವಿಚಾರ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇದು ಕೇವಲ ನಾಲ್ಕು ದಿವಸಗಳ ಹಿಂದೆ ಆಗಿರುವುದು. ಸ್ಟ್ಯಾಚುಟರಿ ಕಂಪ್ಲೈ ಮಾಡುವುದಕ್ಕೋಸ್ಕರ ಕರೆದಂತೆ ಆಗಿದೆ. ಈ ಅಸೆಂಬ್ಲಿ. ನಾವೇನು ಹೆಸರುಗಳನ್ನು ಹೇಳುತ್ತಿದ್ದೇವೆ, ಮಂಡ್ಯ ಇರಬಹುದು, ಮುಳುಬಾಗಿಲು ಇರಬಹುದು ಅಥವಾ ಹಡಗಲಿಯಲ್ಲಿ ನಡೆದಿರುವ ರೇಪ್ ಕೇಸ್ ಇರಬಹುದು. ಜಗಳೂರಿನದು ಇರಬಹುದು. ಇವೆಲ್ಲವನ್ನೂ ಹೇಳುತ್ತಿರುವುದು ಆರು ತಿಂಗಳಲ್ಲಿಯೇ ನಡೆದಂಥ ಘಟನೆಯೇ ಹೊರತಾಗಿ ನಾವೇನು ಎರಡು ವರ್ಷಗಳ ಹಿಂದಿನದನ್ನು ಹೇಳುತ್ತಿಲ್ಲ. ಏಕೆಂದರೆ ಆಗ ಅಸೆಂಬ್ಲಿಯೇ ಇರಲಿಲ್ಲ. ಮತ್ತೆ ನಾವು ಎಲ್ಲಿ ಹೇಳಬೇಕು?

ಅಧ್ಯಕ್ಷರು:- ನಾನು ಈ ಸ್ಥಾನದಲ್ಲಿ ಕುಳಿತು ಅಗತ್ಯಕ್ಕಿಂತ ಹೆಚ್ಚು ಮಾತನಾಡಿ ನಾನೇನೋ ಮನಸ್ಸಿನಲ್ಲಿ ಪೂರ್ವಗ್ರಹಪೀಡಿತನಾಗಿದ್ದೇನೇನೊ ಎನ್ನುವ ಅಭಿಪ್ರಾಯ ಕೊಡಲಿಕ್ಕೆ ನಾನು ತಯಾರಾಗಿಲ್ಲ. ತಾವು ಸಾಕಷ್ಟು ಅನುಭವ ಹೊಂದಿರುವ ಅತ್ಯಂತ ಹಿರಿಯ ಸದಸ್ಯರು ಇದ್ದೀರಿ. ಮತ್ತು ವಿರೋಧ ಪಕ್ಷದ ನಾಯಕರಾಗಿ ಇಲ್ಲಿ ಕುಳಿತಿದ್ದೀರಿ. ಒಂದು ಖಚಿತವಾದ ವಿಚಾರ ಇತ್ತೀಚೆಗೆ ನಡೆದಂಥ ವಿಚಾರಕ್ಕೆ ನಾವು ಸೀಮಿತ ಆಗಬೇಕಾಗುತ್ತದೆ. ಮಾನ್ಯ ಕಾನೂನು ಸಚಿವರು ಹೇಳಿದ ಹಾಗೆ ಯಾವ ಸನ್ನಿವೇಶದಲ್ಲಿ ಪೋಲೀಸರು ಗೋಲಿಬಾರ್ ನಡೆಸಬೇಕಾಯಿತು ಎನ್ನುವಂಥದ್ದು ಜ್ಯುಡಿಷಿಯಲ್ ಪ್ರೋಬ್ ಅದರ ಬಗ್ಗೆ ಅವರು ಈಗಾಗಲೇ ಹೇಳಿದ್ದಾರೆ, ಅದರ ವ್ಯಾಪ್ತಿಗೆ ತಂದಿದ್ದಾರೆ. ನಾವು ಮತ್ತೆ ಮಾತನಾಡಿ ಆ ಸೆಂಟೆನ್ಸ್ ತೆಗೆದುಹಾಕೋಣ, ಈ ಸೆಂಟೆನ್ಸ್ ಸೇರಿಸಿಕೊಳ್ಳೋಣ, ಅವರು ಪಾಯಿಂಟ್ ಆಫ್ ಆರ್ಡರ್ ಹೇಳುವುದು, ಹೀಗೆ ಕಾಲ ವ್ಯರ್ಥ ಮಾಡಿಕೊಳ್ಳುವುದರ ಬದಲು ಈ ವಿಚಾರ ಬಹಳ ಪ್ರಾಮುಖ್ಯವಾದುದು. ಅದರ ಬಗ್ಗೆ ಅಗತ್ಯ ಚರ್ಚೆ ಆಗಲೇಬೇಕು ಎನ್ನುವ ದೃಷ್ಟಿಯಿಂದ ನಿಲುವಳಿ ಸೂಚನೆ ಮೇರೆಗೆ ಆಗಬೇಕು ಎನ್ನುವುದಕ್ಕಿಂತಲೂ ಕೂಡ ತಾವು ಸ್ವಲ್ಪ ದೂರಾಲೋಚನೆ ಮಾಡಿದರೆ ಒಳ್ಳೆಯದು. ಯಾವುದಾದರೂ ನಿರ್ಧಾರವನ್ನು

ತೆಗೆದುಕೊಳ್ಳಿ. ನೀವು ಎಲ್ಲರೂ ಒಪ್ಪಿಕೊಂಡರೆ, ನನಗೆ ಅಧಿಕಾರ ಇದೆ. ಅದನ್ನು ಈಗಲೇ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಹಿಂದೆ ಸಹ ಕುಣಿಗಲ್ ಫೈರಿಂಗ್, ಅಂಬೇಡ್ಕರ್ ಸ್ಟ್ಯಾಚು ಬಗ್ಗೆ ಚರ್ಚೆ ಬಂತು. ಸಂತಾಪ ಸೂಚನೆ ಇದ್ದಾಗಲೂ ಕೂಡ ಚರ್ಚೆ ಮಾಡಿದ್ದೇವೆ.

ಅಧ್ಯಕ್ಷರು:- ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ನನ್ನ ವಿನಂತಿ ಇಷ್ಟೇ. ನಾನು ಏಕೆ ಹೇಳುತ್ತಿದ್ದೇನೆ ಅಂದರೆ ನಿಲುವಳಿ ಸೂಚನೆಯಲ್ಲಿ ಒಂದು ವಿಚಾರವನ್ನು ಪ್ರಸ್ತಾವಿಕ ಮಂಡನೆಗೆ ತೆಗೆದುಕೊಳ್ಳಬೇಕಾಗಿದ್ದರೂ ಕೂಡ ಏನೆಲ್ಲಾ ವಸ್ತು ಇರಬೇಕು ಎಂದು ನಿಯಮವನ್ನು ರೂಪಿಸಿಕೊಂಡಿದ್ದೇವೆ. ಅದಕ್ಕೆ ಯೋಗ್ಯವಾದುದಲ್ಲ ಎನ್ನುವ ಅನುಮಾನ ಎಲ್ಲೋ ಬಂದಾಗ ಏಕೆ ನಾವು ಅದನ್ನು ಮಾಡುವುದಕ್ಕೆ ಹೋಗಬೇಕು? ಒಂದು ಹೊಸ ಸಂಪ್ರದಾಯ ಹಾಕಿದ ಹಾಗೆ ಆಗುತ್ತದೆ. ವಿಚಾರ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ನನ್ನ ಅಭ್ಯಂತರವಿಲ್ಲ. ನಮ್ಮ ಆ ಒಂದು ಪ್ಯಾರಾಮೀಟರ್ಸ್‌ನಲ್ಲಿ ಬರದೇ ಇದ್ದಾಗ ನಾವು ಏಕೆ ಇನ್‌ಸಿಸ್ಟ್ ಮಾಡಬೇಕು ಎಂಬುದನ್ನು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. You please think over.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು):- ನಿಯಮ 60,63, ಮತ್ತು 69 ಈ ಮೂರು ಸಾರ್ವಜನಿಕ ಮಹತ್ವಕ್ಕೆ ಸಂಬಂಧಪಟ್ಟಂತಹ ವಿಚಾರಗಳು. 69ರ ನಿಯಮಾವಳಿ ಪ್ರಕಾರ ತಾವು ಅನುಮತಿ ಕೊಡಬಹುದು. ಅವರು ಹೇಳಬಹುದು. ನಿಯಮ 63 ಯಾವುದಕ್ಕೆ ಬರುತ್ತದೆ? Adjournment motion is different from other motions. It can, if they press for voting, get the status of no confidence motion. ಅದಕ್ಕೂ ನಾವು ತಯಾರಿದ್ದೇವೆ. ಆದರೆ ಇವತ್ತು ಚರ್ಚೆಗೆ ಅವರೇನು ವಿಷಯ ಹೇಳುತ್ತಿದ್ದಾರೆ ಅದು 60ರ ನಿಯಮದಲ್ಲಿ ಬರುವುದಿಲ್ಲ, 69ರಲ್ಲಿ ಬರುತ್ತದೆ. ಆದ್ದರಿಂದ ಇದು ತಮ್ಮ ಅಧಿಕಾರಕ್ಕೆ ಬಿಟ್ಟಿದ್ದುದು.

MR. SPEAKER:- There are several instances where this Assembly has discussed such matters under preliminary submission. I am not telling anything new. But the only handicap in this particular situation is they have already ordered for a judicial probe. Even before this Assembly could take up this matter for discussion the government has gone ahead ordering for a judicial probe. It is there exactly I am getting into difficulty. Kindly, appreciate my difficulty also. Let us not sit on prestige. After all, we have framed rules for our own convenience. Let me hear Mr. Prakash.

ಶ್ರೀ ಎಂ.ಪಿ. ಪ್ರಕಾಶ್:- ಮಾನ್ಯ ಅಧ್ಯಕ್ಷರೇ, ತಾವು ಕೊಟ್ಟಂತಹ ಅಭಿಪ್ರಾಯಕ್ಕೆ ಪೂರಕವಾಗಿ ತಾವೇನು ತಮ್ಮ ಅನುಭವದ ಮೂಲಕ ಪ್ರಸ್ತಾವನೆ ಮಾಡಿದ್ದೀರಿ. ಕೌಲ್ ಅಂಡ್ ಶಕ್ದರ್‌ನಲ್ಲಿ ಕೂಡ ಅನುಕೂಲ ಆಗುವಂತಹ ಉದಾಹರಣೆ ಇದೆ.

"It has been held that an adjournment motion on a matter which can be raised during a debate on the motion of thanks on the President's Address, budget discussion, motion on international situation, the motion regarding a matter of public interest to be held in the same session is not in order."

MR. SPEAKER:- I am aware of that.. ನಾನೇನು ಹೇಳುವುದು ಅಂದರೆ ನಾವು ರಾಜ್ಯಪಾಲರ ಭಾಷಣಕ್ಕೆ ಇಷ್ಟು ಸಮಯ ಎಂದು ನಮ್ಮ ಸದನ ಕಲಾಪ ಸಮಿತಿಯಲ್ಲಿ ಚರ್ಚೆ ಮಾಡಿದಾಗ ಆ ಒಂದು ವೇಳೆ ವ್ಯರ್ಥ ಆಗುತ್ತದೆ. ಆ ಸಮಯ ಇಲ್ಲಿ ವಿನಿಯೋಗಿಸುವುದು ಬೇಡ ಎಂದರೆ ಇದನ್ನು ಪ್ರತ್ಯೇಕವಾಗಿ ಇನ್ನೊಂದು ರೂಪದಲ್ಲಿ ತೆಗೆದುಕೊಳ್ಳೋಣ. ನಿಯಮ 69ರಲ್ಲೋ ಅಥವಾ ಇನ್ನೊಂದರಲ್ಲೋ ತೆಗೆದುಕೊಳ್ಳಬೇಕು ಎಂದರೆ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ನಾನು ತಯಾರಿದ್ದೇನೆ. ನಾನು ರಾಜ್ಯಪಾಲರ ಭಾಷಣದ ಮೇಲೆ ತೆಗೆದುಕೊಳ್ಳಿ ಎಂದು ಈಗ ಹೇಳುವುದಿಲ್ಲ. ಆ ಸಮಯ ನಾವೇನು ವಿನಿಯೋಗಿಸಿದ್ದೇವೆ ಅದನ್ನು ಹಾಗೆಯೇ ಇಟ್ಟುಕೊಳ್ಳೋಣ. But let us take up this matter straightaway for discussion.

ಶ್ರೀ ಎಂ.ಪಿ. ಪ್ರಕಾಶ್:- 69ರ ನಿಯಮದಲ್ಲಾದರೂ ತೆಗೆದುಕೊಳ್ಳಬಹುದು ಅಥವಾ ತಾವು ಆದೇಶ ಕೊಟ್ಟಂತೆ ರಾಜ್ಯಪಾಲರ ಭಾಷಣದಲ್ಲಿ ಈ ವಿಚಾರವನ್ನು ಪ್ರಸ್ತಾವನೆ ಮಾಡಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಮ್ಮ ಸಬ್ಮಿಷನ್ ಇದೆ ಎಂದು ಹೇಳಿದ್ದೇವೆ. ಹೇಳಿದ ಮೇಲೆ ತಮಗೆ ಮನವರಿಕೆ ಆಗಲಿಲ್ಲ. ಸಮಾಧಾನ ಆಗಲಿಲ್ಲ ಎಂದರೆ ಮುಂದೆ ಯೋಚನೆ ಮಾಡೋಣ.

ಶ್ರೀ ಎಂ.ಪಿ. ಪ್ರಕಾಶ್:- ಅಡ್ಮಿಸಿಬಿಲಿಟಿ ಬಗ್ಗೆ ತಾವು ಪ್ರಸ್ತಾಪ ಮಾಡುತ್ತಿದ್ದೀರಿ. ಏಕೆಂದರೆ ಅವರನ್ನು ಓಲೈಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಪ್ರಿಲಿಮಿನರಿ ಸಬ್ಮಿಷನ್‌ನಲ್ಲಿ ನಾವು ಏನೇನು ಹೇಳಬಹುದು. ಯಾವ ಫ್ಯಾಕ್ಟ್ಸ್ ಹೇಳಬಹುದು. ತಮಗೆ ಸಮಾಧಾನ ಆದ ಮೇಲೆ ಇದು ಅಡ್ಮಿಟ್ ಮಾಡತಕ್ಕದ್ದು ಅವಕಾಶ ಇದೆ ಎಂದು ತಮಗೆ ಮನವರಿಕೆ ಆದರೆ ಮಾಡಿ ಇಲ್ಲ ಎಂದರೆ ಬೇರೆ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ ಎಂದರೆ ನೋಡೋಣ.

ಶ್ರೀ ಜೆ.ಹೆಚ್. ಪಟೇಲ್:- ಸಂಪ್ರದಾಯ ಇದೆ. ಪ್ರಿಲಿಮಿನರಿ ಸಬ್‌ಮಿಷನ್‌ಗೆ ತಾವು ಅನುಮತಿ ಕೊಟ್ಟರೆ, ಸಾಯಂಕಾಲ ಆರು ಗಂಟೆಯವರೆಗೆ ಒಂದೊಂದು ಅಡ್ಜರ್ನ್‌ಮೆಂಟ್ ಮೋಷನ್ ಮೇಲೆ ಮಾತನಾಡಿರುವುದನ್ನು ನೋಡಿದ್ದೇವೆ. ನಾನು ಅದನ್ನು ಹೇಳುತ್ತಾ ಇಲ್ಲ.

ಜ್ಯುಡಿಷಿಯಲ್ ಎನ್‌ಕ್ವೈರಿಗೆ ಆರ್ಡರ್ ಮಾಡಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಬೇಕೋ ಹೇಳಲಿ. ಅವರು ಹೇಳುವುದರ ಬಗ್ಗೆ ನಮ್ಮದು ಅಭ್ಯಂತರ ಇಲ್ಲ. ಬೇರೆ ನಿಯಮದ ಪ್ರಕಾರ ಹೇಳಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇದರಲ್ಲಿ ಹೇಳುತ್ತೇವೆ. ತಾವು ನೋಡಿ. ಕುಣಿಗಲ್ ಫೈರಿಂಗ್ ನಡೆದಾಗಲೂ ಕೂಡ ಅಲ್ಲಿ ಜ್ಯುಡಿಷಿಯಲ್ ಪ್ರೋಬ್ ಇದ್ದರೂ ಕೂಡ ಇಲ್ಲಿ ಚರ್ಚೆಗೆ ಬಂತು. ಆಮೇಲೆ ಡಾ: ಅಂಬೇಡ್ಕರ್ ಅವರ ಸ್ಟ್ಯಾಚು ಡಿಸ್‌ಫಿಗರ್ ವಿಚಾರ ಕೂಡ ಇಲ್ಲಿ ಚರ್ಚೆಗೆ ಬಂತು. ಅಲ್ಲಿ ಈ ತರಹ ಇದ್ದಾಗಲೂ ಕೂಡ ಚರ್ಚೆ ನಡೆಯಿತು.

ಶ್ರೀ ಎಂ.ಪಿ. ಪ್ರಕಾಶ್:- ಆರ್ಡರ್ ಆಗಿರಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅನೌನ್ಸ್ ಮಾಡಿದರು. ತಾವು ದಾಖಲೆ ತೆಗೆದು ನೋಡಿ. ಸದನ ಸಮಿತಿ ವಿಚಾರ ಬೇರೆ. ಸದನ ಸಮಿತಿ ಮಾಡಿರುವ ವಿಚಾರ ಬೇರೆ.

ಶ್ರೀ ಎಂ.ಸಿ. ನಾಣಯ್ಯ :- ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರ ಗಮನಕ್ಕೆ ಸರ್ಕಾರದ ವತಿಯಿಂದ ಇಷ್ಟು ವಿಚಾರವನ್ನು ತರುತ್ತಿದ್ದೇನೆ. ಅವರು ಯಾವ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಹೊರಟಿದ್ದಾರೆ ಎಂದರೆ ಅಲ್ಲಿ ಅಮಾಯಕವಾಗಿ, ಶಾಂತಿಯುವಾಗಿ ಕುಳಿತಿರತಕ್ಕವರ ಮೇಲೆ ಯಾವುದೇ ಪ್ರಚೋದನೆ ಇಲ್ಲದೆ, ಪೂರ್ವಬಾವಿ ಸೂಚನೆ ಇಲ್ಲದೆ ಈ ಒಂದು ಘಟನೆ ನಡೆದಿದೆ ಎಂಬ ವಿಚಾರವನ್ನು ಅವರು ಎತ್ತಿದ್ದಾರೆ. ಬಹಳ ಪ್ರಾಮುಖ್ಯವಾದ ವಿಚಾರ. ಅದನ್ನೇ precisely the judicial commission will inquire ino the matter.

ಅಧ್ಯಕ್ಷರು:- ನಮ್ಮ ಡಾ: ಚಿತ್ತರಂಜನ್ ಅವರು ಸಿಟ್ಟಿಂಗ್ ಮೆಂಬರ್ ಇದ್ದರು. He was assasinated. What is that we did here when that matter came up? Kindly recall your memory. ತಾವೆಲ್ಲರೂ ತಮ್ಮ ನೆನಪನ್ನು ಸ್ವಲ್ಪ ಹಸಿರು ಮಾಡಿಕೊಳ್ಳಿ. By then, we had already ordered for a judicial enquiry. It was a gentlemanly agreement that we should not discuss.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾವು ಆ ಟರ್ಮ್ಸ್ ಆಫ್ ರೆಫರೆನ್ಸ್‌ಗೆ ಹೋಗುವುದೇ ಇಲ್ಲ. Who are the persons responsible for firing? ಅವರ ಮೇಲೆ ನೀವು ಆಕ್ಷನ್ ತೆಗೆದುಕೊಳ್ಳಿ. ನಾವು ಬೇರೆ ವಿಷಯವನ್ನು ಪ್ರಸ್ತಾಪ ಮಾಡುತ್ತೇವೆ. ನಾವು ಕೆಲವು ವಿಚಾರಗಳನ್ನು ಹೇಳಿದ್ದೇವೆ. ಅವರು ಓಪನ್ನಿ ವಿಚಾರ ಹೇಳಿದ್ದಾರೆ. ಅವರು ಪತ್ರಿಕೆ ಕೂಡ ಈಗಾಗಲೇ ಓದಿ ಹೇಳಿದರು. ಚಿಕ್ಕನಾಯಕನಹಳ್ಳಿಯಲ್ಲಿ ಭಾಷಣ ಮಾಡಿದ್ದು ಹೇಳಿದರು.

ಅಧ್ಯಕ್ಷರು:- ಸನ್ಮಾನ್ಯ ಖರ್ಗೆಯವರು ತಾವು ಹೇಳಬೇಕು ಎಂದು ಅಪೇಕ್ಷೆ ಪಡತಕ್ಕ ಎಲ್ಲಾ ವಿಚಾರವನ್ನು ಹೇಳಬಹುದು. ಈ ಘಳಿಗೆಯಲ್ಲಿಯೇ ಪ್ರಾರಂಭ ಮಾಡೋಣ. ನಾವು ಬದಲಾವಣೆ ಮಾಡೋಣ. ನಾನೇನು ಹೇಳುವುದು ಎಂದರೆ ಇದು ನಿಲುವಳಿ ಸೂಚನೆಗೆ ಯೋಗ್ಯವಾದ ವಸ್ತು ಆಗುವುದಿಲ್ಲ. ಗೋಲೀಬಾರ್‌ಗೆ ಸನ್ನಿವೇಶ ನಿರ್ಮಾಣ ಆಗಿ, ಜ್ಯುಡಿಷಿಯಲ್ ಪ್ರೋಬ್‌ಗೆ ಟರ್ಮ್ಸ್

ಆಫ್ ರೆಫರೆನ್ಸ್ ಇಟ್ಟುಕೊಂಡಿರುವದರಿಂದ ನಾವಾಗಿ ನಾವೇ ರೂಪಿಸಿಕೊಂಡಿರತಕ್ಕ ನಿಯಮಾವಳಿಗಳನ್ನು ಕೈ ಬಿಡುವುದು ಬೇಡ. ಈ ಕ್ಷಣದಲ್ಲಿಯೇ ಪ್ರಾರಂಭ ಮಾಡಿ. We will change it to rule 69. I have the powers. All of you can participate in the discussion.

SRI M. MALLIKARJUNA KHARGE:- Even under rule 63, as a matter of urgent importance, if excesses have taken place, ಅಥವಾ ಇನ್ನೋಸೆಂಟ್ ಜನ ಸತ್ತಿದ್ದಾರೆ ಎಂದು ಮನವರಿಕೆ ಆದರೆ, ಅಲ್ಲಿ ಚುನಾವಣೆಯಲ್ಲಿ ಇಂತಹ ಘಟನೆಗಳು ಅಥವಾ ದಾಂಧಲೆಗಳು ನಡೆದಿದೆ ಎಂದು ಮನವರಿಕೆ ಆದರೆ ತಾವು ಅವಕಾಶ ಕೊಡುವುದಕ್ಕೆ ತಮಗೆ ಸಂಪೂರ್ಣವಾದ ಅಧಿಕಾರ ಇದೆ. ರೂಲ್ ಸಸ್ಪೆಂಡ್ ಮಾಡಿ ನಮಗೆ ಅವಕಾಶ ಕೊಡಬಹುದಿತ್ತು ಎಲ್ಲಕ್ಕಿಂತ ಮಿಗಿಲಾಗಿ, ಇಂಪಾರ್ಟೆಂಟ್ ಮ್ಯಾಟರ್ ಇದೆ, ತಮಗೆ ಅಧಿಕಾರ ಇದೆ, ಅವಕಾಶ ಕೊಡಬಹುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಈಗ ಒಂದು ಪ್ರಶ್ನೆ ಪ್ರಸ್ತಾಪ ಆಗುತ್ತಾ ಇರತಕ್ಕದ್ದು. ಇದನ್ನು ನಿಲುವಳಿ ಸೂಚನೆಯ ಮೇರೆಗೆ ತೆಗೆದುಕೊಳ್ಳುವುದು ಬೇಡ. ಏಕೆಂದರೆ ಖರ್ಗೆಯವರು ಕಳುಹಿಸಿರತಕ್ಕ ಸೂಚನೆಯಲ್ಲಿ ಹಲವಾರು ವಿಷಯಗಳು ಇವೆ. ಆದ್ದರಿಂದ ಆ ವಿಷಯ ನಿಲುವಳಿ ಸೂಚನೆಗೆ ಬರುವುದಿಲ್ಲ. ಇದು ಒಂದು ನಿರ್ದಿಷ್ಟವಾದ ವಿಚಾರ ಇಲ್ಲ ಎಂದು ಹೇಳತಕ್ಕದ್ದು. ಲಾ ಅಂಡ್ ಆರ್ಡರ್ ಪ್ರಶ್ನೆ ಅಲ್ಲ. ಇಲ್ಲಿ ಹೆಜ್ಜಾಲ ಪ್ರಶ್ನೆ ಬಂದಂಥ ಸಂದರ್ಭದಲ್ಲಿ ನಾವು ಕೂಡ ಇಲ್ಲಿ ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ಹೆಜ್ಜಾಲದಲ್ಲಿ ನಡೆದಂತಹ ಘಟನೆ ಬಗ್ಗೆ ನಾವು 4-5 ಜನ ಸೂಚನೆ ಕಳುಹಿಸಿದ್ದೇವೆ. ಅದರಲ್ಲಿ ಪ್ರತ್ಯೇಕವಾಗಿ ಅದೊಂದೇ ವಿಷಯಕ್ಕೆ ಸಂಬಂಧಪಟ್ಟಂತೆ ಕಳುಹಿಸಿರತಕ್ಕದ್ದು. ಬೇರೆ ಯಾವುದನ್ನೂ ಕೂಡ ಕಳುಹಿಸಿಲ್ಲ.

ಅಧ್ಯಕ್ಷರು:- ಅದಕ್ಕೇ ನಾನು ನಿಮಗೆ ನಾಣಯ್ಯನವರು ಹೇಳಿದ್ದನ್ನು ನೆನಪು ಮಾಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಅದೊಂದೇ ಅಲ್ಲ. Law and order ಎನ್ನತಕ್ಕ ಪ್ರಶ್ನೆ ಅಲ್ಲ. ಅದು ಒಂದೇ ಪ್ರಶ್ನೆಗೆ ನಾವು ಚರ್ಚೆ ಮಾಡಬೇಕು ಎಂದು ಹೇಳುತ್ತಾ ಇರತಕ್ಕದ್ದು ಅಲ್ಲ. ಇಡೀ ಘಟನೆ ಬಗ್ಗೆ ಅದು ಫೈರಿಂಗ್ ಅಲ್ಲ.

MR. SPEAKER:- It is about circumstances leading to firing at Hejjala.

SRI M.C. NANAIAH:- If the terms of reference are made known, probably they will be satisfied. The terms of reference are:

> To enquire into the incidents of riots by workers of M/s. Valliappa Textiles on 3-2-97 at Hejjala on the Mysore-Bangalore highway and police firing

thereafter resulting in the death of three persons and injury to several others;

whether the incident was preplanned and whether there was any political motive behind the incidents;

whether there was any negligence or error of judgement on the part of police authorities in dealing with the situation;

whether the quantum of police force used was necessary, justified or excessive, and

any other matter which arises from or is connected with or incidental to act or omission relating to the said incident.

Sir, everything is covered under that. In the light of that, I think, discussing this particular issue on the floor of the House more particularly under Rule 60 is not permissible. I request the Hon'ble Speaker to give the ruling.

1.00 ಪಿಎಂ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಫೈರಿಂಗ್ ಬಗ್ಗೆ, ಫೈರಿಂಗ್ ಮಾಡುವುದಕ್ಕೆ ಪೂರಕವಾದ ಘಟನೆಗಳ ಬಗ್ಗೆ ಹೇಳುತ್ತಿರುವುದು. ಇದರಲ್ಲಿ ಇನ್ನೊಂದು ಪ್ರಶ್ನೆ ಕೂಡ ಇದೆ. ಏನೆಂದರೆ, ರಸ್ತೆ ರೋಖೋ ಮಾಡಿದಂಥ ಸಂದರ್ಭದಲ್ಲಿ....

MR. SPEAKER:- You should have carefully listened to the terms of reference.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ನಾನು ಕೇಳಿದ್ದೇನೆ. ಗೋಲಿಬಾರ್‌ಗೆ ಪೂರಕವಾಗಿರತಕ್ಕ, ಪ್ರೇರಕವಾಗಿರುವ ಪ್ರಶ್ನೆಯೇನೆಂದರೆ...

ಅಧ್ಯಕ್ಷರು:- ಬೇರೆಲ್ಲಾ ವಿಚಾರಗಳನ್ನೊಳಗೊಂಡಂತೆ ನೀವು ಹೇಳುತ್ತಿರುವ ಎಲ್ಲಾ ವಿಚಾರಗಳೂ ಕೂಡ ಬಂದಿವೆ. ಅದಕ್ಕೋಸ್ಕರ ತಾವು ಕೇಳಿ. I request the Hon'ble Minister to send a copy to the Hon'ble member. Read it out again, or send a copy.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಯಾವುದಾದರೂ ಸರಿ. ಫೈರಿಂಗ್ ನಡೆದಂಥ ಘಟನೆಗಳ ಬಗ್ಗೆ ರೆಫರ್ ಮಾಡಿದ್ದೇವೆಂದು ಹೇಳಿದ್ದೀರಿ. ಆದರೆ, ರಸ್ತೆ ರೋಕೋ ಮಾಡಿರತಕ್ಕ ಘಟನೆ ಬಗ್ಗೆಯೂ ಕೂಡ ಚರ್ಚೆಯಾಗಬೇಕಾಗುತ್ತದೆ. ಅದೂ ಕೂಡ ಒಂದು ಘಟನೆಯಾಗಿದೆ.

SRI M.C. NANAIAH:- The terms of references are like this:-

> To enquire into the incident of riots by workers on 3.2.97 at Hejjala and police firing thereafter resulting in the death of three persons and injury to several others,
>
> Whether the incident was pre-planned or whether any political motive was behind the incident;
>
> Whether there was any negligence or error of judgement on the part of the police authorities in dealing wih the situation,
>
> Whether the quantum of police force used was necessary, justified or excessive,
>
> Any other matter which arises from, or is connected with or incidental to any act or omission relating to the said incident.

ನೀವು ಹೇಳುತ್ತಿರುವುದೆಲ್ಲವನ್ನೂ ಕೂಡ ಅದರಲ್ಲಿ ಅಳವಡಿಸಿದ್ದೇವಲ್ಲದೆ ಹೇಳದಿರುವುದೂ ಕೂಡ ಸೇರಿಸಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಪ್ರಕರಣವನ್ನು ನೀವು ನ್ಯಾಯಾಂಗ ತನಿಖೆಗೆ ಒಳಪಡಿಸಿರುವ ಬಗ್ಗೆ ಇಲ್ಲಿ ಚರ್ಚಿಸುತ್ತಿಲ್ಲ. ಅಥವಾ ನ್ಯಾಯಾಂಗ ತನಿಖೆಗೊಳಪಡಿಸಿರುವುದು ಸರಿಯೇ ತಪ್ಪೇ ಎಂಬುದನ್ನೂ ಚರ್ಚಿಸುತ್ತಿಲ್ಲ. ನಾವು ಆ ಘಟನೆ ಬಗ್ಗೆಯಷ್ಟೇ ಚರ್ಚೆ ಮಾಡತಕ್ಕಂಥಾದ್ದು. ನ್ಯಾಯಾಂಗ ತನಿಖೆ ಮಾಡತಕ್ಕಂಥಾದ್ದು ಸರಿಯೇ ತಪ್ಪೇ ಅಥವಾ ಏನು ಮಾಡಬೇಕೆನ್ನುವ ಪ್ರಶ್ನೆ ಬಗ್ಗೆ ಚರ್ಚಿಸುತ್ತಿಲ್ಲ. ನಡೆದಿರುವ ಘಟನೆಗಳ ಬಗ್ಗೆಯಷ್ಟೇ ಚರ್ಚಿಸಬೇಕೆಂದು ನಾವು ಕೇಳುತ್ತಿದ್ದೇವೆ.

ಅಧ್ಯಕ್ಷರು:- ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೇ, ಧರ್ಮಸಿಂಗ್‌ರವರೇ, ವೈ. ರಾಮಕೃಷ್ಣರವರೇ, ವಾಟಾಳ್ ನಾಗರಾಜ್‌ರವರೇ, ನೀವುಗಳೆಲ್ಲರೂ ಹಿರಿಯ ಸದಸ್ಯರುಗಳಿದ್ದೀರಿ. You are the seniormost members in the front row this side of the House. ನಾನು ಮತ್ತೊಮ್ಮೆ ತಮ್ಮಲ್ಲಿ ಸ್ಪಷ್ಟೀಕರಣ ಕೊಡುತ್ತಿದ್ದೇನೆ. ಈ ವಿಚಾರವನ್ನು ಚರ್ಚೆ ಮಾಡಲಾರದೆಂಬುದು ನನ್ನ ಅಭಿಪ್ರಾಯವಲ್ಲ. ಆದರೆ, ಈ ನಿಲುವಳಿ ಸೂಚನೆ

ಮುಖಾಂತರ ನಾವು ಚರ್ಚಿಸುವುದು ಹೊಸ ಸಂಪ್ರದಾಯವನ್ನು ಹುಟ್ಟು ಹಾಕಿದಂತಾಗುತ್ತದೆ, ನಮ್ಮ ನಿಯಮಾ- ವಳಿಯನ್ನು ನಾವೇ ಗಾಳಿಗೆ ತೂರಿದಂತಾಗುತ್ತದಾದ್ದರಿಂದ ದಯಮಾಡಿ ಬೇಡಿ. ಈಗ ಟರ್ಮ್ಸ್ ಆಫ್ ರೆಫರೆನ್ಸ್ ಮೂಲಕ ಮತ್ತೊಮ್ಮೆ ವಿಷದವಾಗಿ ಓದಿ ಹೇಳಿರುವುದರಿಂದ ತಾವು ತಮ್ಮ ನಿರ್ಧಾರವನ್ನು ಬದಲಿಸಿಕೊಳ್ಳುವಿರೆಂದು ತಿಳಿದುಕೊಂಡಿದ್ದೇನೆ. ತಾವೆಲ್ಲರೂ ಮಂತ್ರಿಗಳಾಗಿ ಕೆಲಸ ಮಾಡಿದಂತಹವರು ತಮಗೆ ಸಾಕಷ್ಟು ಅನುಭವ ಕೂಡ ಇದೆ. ಇಂತಹ ಘಟನೆಗಳು ಅನೇಕ ಸಲ ಸಂಭವಿಸಿದೆ. ಬೇಕಾದರೆ ಚರ್ಚೆಯನ್ನು ಈ ಘಳಿಗೆಯಲ್ಲೇ ತೆಗೆದುಕೊಳ್ಳೋಣ. ಇದನ್ನು ತಮ್ಮ ವಿವೇಚನೆಗೆ ಬಿಡುತ್ತೇನೆ. ನಿಲುವಳಿ ಸೂಚನೆ ಮುಖಾಂತರವೇ ಏಕೆ ಚರ್ಚೆಯಾಗಬೇಕು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಮಗೆ ಅನುಮತಿ ಕೊಡುವುದರ ಬಗ್ಗೆ ನಿಯಮ 63ರಲ್ಲೂ ಕೂಡ ತಮಗೆ ಅವಕಾಶವಿದೆ. ಯಾವುದೇ ಒಂದು ವಿಚಾರಣೆ ಪ್ರಾರಂಭವಾಗಿದ್ದು ಅದರ ಮೇಲೆ ಪ್ರಭಾವ ಬೀರತಕ್ಕಂಥಾದ್ದು ಇನ್ನೂ ಶುರುವಾಗಿಲ್ಲ. ಟರ್ಮ್ಸ್ ಆಫ್ ರೆಫರೆನ್ಸ್ ಇಡಬಹುದು. ಇಲ್ಲಿ ಚರ್ಚೆ ನಡೆದಿರುವುದೆಲ್ಲವನ್ನೂ ಕೂಡ ಗಮನಕ್ಕೆ ತೆಗೆದುಕೊಂಡು ಯಾರು ಕೂಡ ಮಾಡಿಲ್ಲ.

ಅಧ್ಯಕ್ಷರು:- ನೀವು ಇದರಲ್ಲಿ ಹೇಳಬೇಕೆಂದಿರುವುದನ್ನೇ ನಿಯಮ 69ರ ಮೂಲಕ ಪ್ರಸ್ತಾಪಿಸಿ ಹೇಳಿ. ಒಂದು ವೇಳೆ ಅವರು ಟರ್ಮ್ಸ್ ಆಫ್ ರೆಫರೆನ್ಸ್‌ಗೆ ಅಡ್ಡ ಬರುವವರಿದ್ದರೆ ಅವರು ಕ್ರಿಯಾಲೋಪವೆತ್ತುತ್ತಾರೆ, ಮತ್ತು ಏನು ಬೇಕಿಲ್ಲವೋ ಅದನ್ನು ವಿಸರ್ಜಿಸೋಣ. ಪ್ರಿಲಿಮಿನರಿ ಸಬ್‌ಮಿಷನ್‌ಗೆ ಇಲ್ಲಿ ನಾನು ಅವಕಾಶವಿಲ್ಲವೆಂದರೆ how can I...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅದಕ್ಕೋಸ್ಕರ ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ನಿಯಮ 63ರಲ್ಲಿ ತಮಗೆ ಅಧಿಕಾರವಿರುವುದರಿಂದ ಅದನ್ನು ಚಲಾಯಿಸಿ ನಮಗೆ ಅವಕಾಶ ಮಾಡಿಕೊಡಬೇಕೆಂದು ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು:- ಅಧಿಕಾರ ಚಲಾವಣೆ ವಿವೇಚನೆಯಿಂದ ನಡೆಯಬೇಕಲ್ಲವೆ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅದನ್ನು ನೀವು ವಿವೇಚನೆಯಿಂದ ಮಾಡುತ್ತೀರೆಂಬ ವಿಶ್ವಾಸದಿಂದಲೇ ಕೇಳುತ್ತಿದ್ದೇನೆ.

SRI J.H. PATEL:- Your discretion ಅದನ್ನು ಯಾರೂ ಪ್ರಶ್ನಿಸುತ್ತಿಲ್ಲ. ಅವರು ಸರಿಯಾಗಿ ಓದಲಿಲ್ಲ ಅಷ್ಟೆ. ಜ್ಯುಡಿಷಿಯಲ್ ಎನ್‌ಕ್ವೈರಿ ಪ್ರೊಸೀಜರ್ ಯಾವ ಹಂತ ದಲ್ಲಿದೆ, ಅಪಾಯಿಂಟ್ ಆಗಿದ್ದಾಗ ಬೇಕಾಗದರೆ ನೀವು ನಿಯಮ 63ರ ಪ್ರಕಾರ ಅನುಮತಿ ಕೊಡಬಹುದು. not about the incident, but about the appointment of the judiciary.

ಶ್ರೀ ವಾಟಾಳ್ ನಾಗರಾಜ್:- ಹೆಜ್ಜಾಲದ ವಳ್ಳಿಯಪ್ಪ ಟೆಕ್ಸ್‌ಟೈಲ್ ಕಾರ್ಖಾನೆ ಬಳಿ ದಿನಾಂಕ 3-2-97 ರಂದು ಕಾರ್ಮಿಕರ ಮತ್ತು ನಾಗರಿಕರ ಮೇಲೆ ನಡೆದಂಥ ಪೋಲೀಸ್ ಗೋಲಿಬಾರ್ ಪ್ರಕರಣದ ಹಾಗೂ ತತ್ಸಂಬಂಧ ಉಂಟಾದ ಸಾವು-ನೋವುಗಳ ಬಗ್ಗೆ ವಿಧಾನಸಭೆಯಲ್ಲಿ ದಿನಾಂಕ 12-2-97 ರಂದು ಪ್ರಸ್ತಾಪಿಸಲು ಅನುಮತಿ ಕೊಡಬೇಕೆಂದು ನಾನು ತಮಗೆ ಈಗಾಗಲೇ ಸೂಚನೆ ಕಳುಹಿಸಿದ್ದೇನೆ. ಇದರಲ್ಲಿ ಮಡಿವಂತಿಕೆಯಾಗುವುದೇನೂ ಬೇಕಾಗಿಲ್ಲ. ಈಗ ಚರ್ಚೆಗೆ ಅವಕಾಶ

ಮಾಡಿಕೊಡಿ. ತಾವು ಯಾವುದರಲ್ಲಿ ಹೇಗೆ ಬದಲಾವಣೆ ಮಾಡುತ್ತೀರೋ ಮಾಡಿ ನಮಗೆ ಅವಕಾಶ ಮಾಡಿಕೊಡಿ ನಾವು ಚರ್ಚೆ ಮಾಡುತ್ತೇವೆ, ನಾವು ಹೇಳುವುದನ್ನೆಲ್ಲಾ ಹೇಳುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ:- ಕ್ರಿಯಾಲೋಪವೆತ್ತಿರುವುದು ಈಗಾಗಲೇ ನ್ಯಾಯಾಂಗ ತನಿಖೆ ಮಾಡುವುದಕ್ಕೆ ಆದೇಶವಾಗಿದೆ. ಆದುದರಿಂದ, ಟರ್ಮ್ಸ್ ಆಫ್ ರೆಫರೆನ್ಸ್ ಒಳಗೊಂಡಂತೆ ಎಲ್ಲಾ ವಿಷಯವೂ ಸೇರಿದೆಯೆಂಬ ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದಾರೆ. ತಾವು ಒಪ್ಪಿದರೆ ಈಗ ನಿಯಮ 63ರಡಿ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಕೂಡ ಯಾವುದೇ ತರಹದ ಭಾದಕವಿಲ್ಲ.

> "No motion which seeks to raise discussion on a matter pending before any statutory tribunal or statutory authority.."

It is not pending before any authority. It is only a decision of the Government to appoint a committee. Whether the judge has been appointed? No. It is still in a preliminary stage. ಇದು ಒಂದು ವಾರದಲ್ಲಿ ಆಗಿರುವ ಪ್ರಕರಣ. ಇದರ ಜೊತೆಗೆ ಜ್ಯುಡಿಷಿಯಲ್ ಎನ್‌ಕ್ವೈರಿಯನ್ನು ಯಾವುದೇ ರೀತಿಯಲ್ಲಿ ಪ್ರೀಜೂಡೈಸ್ ಮಾಡದ ರೀತಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿದೆ.

ಅಧ್ಯಕ್ಷರು:- ಈಗ ಇಂಟರ್‌ಪ್ರಿಟೇಷನ್ ಆಯಿತು. ನಾನು ನಿಮಗೆ ಕೇಳುತ್ತೇನೆ; You are a practising Advocate ಪೆಂಡೆನ್ಸಿ ಎಂದರೇನು? ನಾನು ಅಡ್ವೊಕೇಟ್ ಅಲ್ಲ.

ಶ್ರೀ ಟಿ.ಬಿ. ಜಯಚಂದ್ರ:- ಅದನ್ನು ಲೀಗಲ್ ಆಗಿ ತಾವು ಕಾನ್‌ಸ್ಟಿಟ್ಯೂಟ್ ಮಾಡಿ. ಅದರ ಜಡ್ಜ್ ಅಪಾಯಿಂಟ ಆದನಂತರ when the matter goes before them, you can say that it is pending before them. Still the matter has not gone before them.

SRI H. SHIVAPPA:- It is deemed to have been constituted.

SRI G.V. SRIRAMAREDDY:- Sir, the matter is not pending before the Court. The Government has not appointed any judge or named any person.

MR. SPEAKER:- You wanted the Government to appoint judge also?

SRI G.V. SRIRAMAREDDY:- It is only an order.

MR. SPEAKER:- When the Government takes a decision to appoint an enquiry commission headed by a Judge, sitting Judge or retired judge, whether of the rank of a district judge or

High Court judge and requested the High Court, the whole matter comes into different arena.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಸದಸ್ಯರಾದ ಶ್ರೀ ಟಿ.ಬಿ. ಜಯಚಂದ್ರರವರು ಈಗ ಹೇಳಿರುವುದು ತುಂಬಾ ಸ್ಪಷ್ಟವಾಗಿದೆ. ಈಗ ಸರ್ಕಾರ ತೀರ್ಮಾನಿಸಿರುವುದರಿಂದ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಸರ್ಕಾರ ತೀರ್ಮಾನ ಮಾಡುವುದರಿಂದಲೇ ಒಂದು ವಿಷಯ ಒಂದು ಟ್ರಿಬ್ಯೂನಲ್ ಮುಂದೆ ಅಥವಾ ಒಂದು ಕೋರ್ಟ್ ಮುಂದೆ ಬಂದಿದೆಯೆಂದು ಅರ್ಥವಾಗುವುದಿಲ್ಲ. ಯಾವಾಗ ಅರ್ಥವಾಗುತ್ತದೆಂದರೆ, ಏಕೆಂದರೆ, ಅವರೂ ಸಹ ವಾದಿಗಳು, ಅದರ ತೀರ್ಮಾನವನ್ನು...

ಅಧ್ಯಕ್ಷರು:- ಈಗ ಅದೆಲ್ಲಾ ಬೇಡ. ಎನ್‌ಕ್ವೈರಿ ಪೆಂಡಿಂಗ್ ಅಥವಾ ಪೆಂಡಿಂಗ್ ಏನ್‌ಕ್ವೈರಿಯೇ?

SRI KAGODU THIMMAPPA:- Enquiry is not pending before any Tribunal.

MR. SPEAKER:- Is it pending enquiry or enquiry is pending.

SRI KAGODU THIMMAPPA:- Neither it is a pending enquiry or enquiry is pending.

MR. SPEAKER:- You are all Advocates I am not an Advocate, I am not even a student of law.

SRI KAGODU THIMMAPPA:- When a Tribunal or judicial officer is appointed and constituted, then it becomes pending.

SRI H. SHIVAPPA:- It is a procedural matter that judge has not been appointed. But issue is pending before the Tribunal. It is pending. The moment the Government has taken a decision, it is very much pending before the enquiry commission. It is a procedural wrangle. It does not take away the very effect of the order.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಮಾನ್ಯ ಶಿವಪ್ಪನವರು ಏನು ಹೇಳುತ್ತಿದ್ದಾರೆಂದರೆ, ಅಪಾಯಿಂಟ್ ಆಗದೇ ಇರತಕ್ಕದ್ದು ಪ್ರೊಸೀಜರಲ್ ಮ್ಯಾಟರ್; ಆದರೆ ಇಲ್ಲಿ ಪ್ರೊಸೀಜರ್ ಬಗ್ಗೆಯೇ ಚರ್ಚೆಯಾಗುತ್ತಿದೆಯೆಂದು ನಾನು ಹೇಳುತ್ತಿದ್ದೇವೆ.

SRI H. SHIVAPPA:- No. We are not here to discuss about the...

SRI S.P. MUDDAHANUME GOWDA:- With regard to the question of pendency, I have taken a decision to file a case before the Court. That does not mean that the case is pending before the Court. It is only a decision to file a suit before the Court. As on today, no judicial enquiry is pending. Unless a notification is issued with regard to that, unless a Judge is appointed to enquire into the matter, the matter cannot be pending either before the judicial authority or before any other Court of Law.

MR. SPEAKER:- You have helped me now. Now here, the petitioner i.e. the Government have decided to constitute an enquiry they have also finalised the terms of reference; they have made the correspondence with the High Court. The matter is already before the High Court. It is for them to name the Judge.

SRI S.P. MUDDAHANUME GOWDA:- They have initiated proceedings in that regard. But the matter is not pending. So far as the question of pendency is concerned, the matter is still not pending.

MR. SPEAKER:- Going by your own earlier statement, if you have decided to file a case, and if you have not filed the case, the case is not pending. But if you have already made the submission before the Court..

SRI H. SHIVAPPA:- Here it has already been filed.

MR. SPEAKER:- Whether the matter is listed for the business or not is a different thing. If the matter is already before the Court...

SRI S.P. MUDDAHANUME GOWDA:- I agree. The question is, I am making my submission only with regard to the question of pendency.

MR. SPEAKER:- Any way, it is alright. It may be too much for a non-Advocate to talk about the legal procedure; I will ask the Law Minister to clarify.

ಶ್ರೀ ಕಾಗೋಡು ತಿಮ್ಮಪ್ಪ:- ಅಧ್ಯಕ್ಷರೆ, ಯಾವಾಗ ಸಬ್ಜೆಕ್ಟ್ ಮ್ಯಾಟರ್ ಪೆಂಡಿಂಗ್ ಆಗುತ್ತದೆಂದರೆ the moment the High Court constitute a Judge to enquire into the matter. ಉದಾಹರಣೆಗೆ ಪೊಲೀಸ್‌ನವರು ಎಫ್.ಐ.ಆರ್.ನ್ನು ನೊಂದಾವಣಿ ಮಾಡುತ್ತಾರೆ. ಆ ಎಫ್.ಐ.ಆರ್.ನ್ನು ಕೋರ್ಟ್‌ಗೆ ಸಬ್‌ಮಿಟ್ ಮಾಡಿದ ಮೇಲೆ ಆಗ ಕೇಸು ನೋಂದಾವಣಿಯಾಗುತ್ತದೆ. ಆ ರೀತಿ ನೋಂದಾವಣಿಯಾದ ಕೇಸ್‌ನ ಎಫ್.ಐ.ಆರ್.ನ್ನು ಪೋಲೀಸ್‌ನವರು ಹಾಗೆಯೇ ಇಟ್ಟುಕೊಂಡಿದ್ದರೆ ಅದು ಕೋರ್ಟ್ ಮುಂದೆ ಪೆಂಡಿಂಗ್ ಆಗುವುದಿಲ್ಲ. ಆದರೆ ಇಲ್ಲಿ ಕರಸ್‌ಪಾಂಡೆನ್ಸ್ ಮಾಡಿದ್ದಾರೆ.

ಅಧ್ಯಕ್ಷರು:- ಎಫ್.ಐ.ಆರ್.ನ್ನು ಪೆಂಡಿಂಗ್ ಇಟ್ಟುಕೊಳ್ಳಲು, ಆಗುವುದೇ ಇಲ್ಲ, ಎಫ್.ಐ.ಆರ್.ನ್ನು ಮಾಡಿದ ಮೇಲೆ ಅದನ್ನು ತುರ್ತಾಗಿ ಕೋರ್ಟಿಗೆ ಸಲ್ಲಿಸಲೇ ಬೇಕು, ಅದೇ ಎಫ್.ಐ.ಆರ್ ಎಂದು ಕರೆಯುವುದು.

ಶ್ರೀ ಕಾಗೋಡು ತಿಮ್ಮಪ್ಪ:- ಕೇಸನ್ನು ನೋಂದಾವಣಿ ಮಾಡುತ್ತಾರೆ, ಆದರೆ ಎಫ್.ಐ.ಆರ್.ನ್ನು ಹಾಗೇ ಇಟ್ಟುಕೊಳ್ಳುತ್ತಾರೆ.

ಅಧ್ಯಕ್ಷರು:- ಎಫ್.ಐ.ಆರ್.ನ್ನು ಮಾಡಿ ಹಾಗೆಯೇ ಇಟ್ಟುಕೊಂಡಿದ್ದಾರೆ ಅದು ಎಫ್.ಐ.ಆರ್. ಆಗುವುದಿಲ್ಲ ಅದು ಎಫ್.ಓ.ಆರ್. ಆಗುತ್ತದಷ್ಟೆ.

SRI KAGODU THIMMAPPA:- That will be a lapse on his part. No body can compel them. Law is there, that it should be produced within 24 hours.

MR. SPEAKER:- Here there are two things.

(INTERRUPTION)

MR. SPEAKER:- The whole problem is, you all had joined in this.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಯವರು):- ಇದರ ಬಗ್ಗೆ ಹೈಕೋರ್ಟ್ ರಿಜಿಸ್ಟ್ರಾರ್‌ರವರಿಗೆ ಜಡ್ಜ್ ಬೇಕು ಎಂದು ಬರೆದುಬಿಟ್ಟಿದ್ದೇವೆ.

MR. SPEAKER:- That means, your prayer is already before the High Court.

SRI J.H. PATEL:- The Government Order has already been issued. I have signed it. ಇದರ ಬಗ್ಗೆ ಇನ್ನೇನನ್ನು ಮಾತನಾಡುವುದು?

MR. SPEAKER:- It's alright. I am appealing to the Hon'ble Leader of the Opposition, can we take it up under rule 69? You can please start. Whatever you want to say, you can say.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಲ್ಪಿಮೇಟಲಿ ತಮ್ಮ ಡಿಸ್ಕ್ರಿಷನ್‌ಗೆ ಬಿಟ್ಟಿರತಕ್ಕ ಮಾತು ಬೇರೆ. ಇದರಲ್ಲಿ ಚರ್ಚೆಗೆ ಅವಕಾಶ ಅಗತ್ಯವಿದೆಯೆಂದು ನಾನು ಹೇಳುತ್ತೇನೆ. ಏಕೆಂದರೆ, ಪೆಂಡಿಂಗ್ ಎಂದರೆ some authority should be there. ಆ ರೀತಿ ಯಾವುದಾದರೂ ಅಥಾರಿಟಿಯ ಮುಂದೆ ಯಾವುದಾದರೂ ಅಪ್ಲಿಕೇಷನ್ ಪೆಂಡಿಂಗ್ ಇದ್ದರೆ ಅದನ್ನು ಪೆಂಡಿಂಗ್ ಎಂದು ಕರೆಯುತ್ತಾರೆ. When there is no authority, ಉದಾಹರಣೆಗೆ, ಎಷ್ಟೋ ಸಲ ನಾವು ಯಾವುದಾದರೂ ಕಮಿಷನ್‌ಗೋಸ್ಕರ, ಜಡ್ಜಸ್‌ಗಳಿಗಾಗಿ ಬರೆಯುತ್ತೇವೆ, ಈ ರೀತಿ ಹತ್ತು ಬಾರಿ ಕೋರಿಕೊಂಡಿರುತ್ತೇವೆ, ಎರಡು ಮೂರು ವರ್ಷಗಳಾದರೂ ಕೆಲವು ಸಲ ಹೈಕೋರ್ಟ್‌ನವರು ಜಡ್ಜಸ್‌ಗಳನ್ನು ಕಳುಹಿಸುವುದೇ ಇಲ್ಲ, ಆದ್ದರಿಂದ ಎರಡು ವರ್ಷಗಳವರೆಗೆ ಅದರ ಬಗ್ಗೆ ಚರ್ಚೆಯೇ ಮಾಡಬಾರದು, ಹಾಗೆಯೇ ಇರಬೇಕು ಎನ್ನತಕ್ಕ ಪ್ರಸಂಗಗಳು ಬರುವುದು ತಮಗೆ ಗೊತ್ತಿದೆ. ಎನ್.ಡಿ.ವಿ. ಭಟ್‌ಗೆ ಅವಕಾಶ ಕೊಟ್ಟು ಮೂರು ತಿಂಗಳುಗಳಾಗಿರಬಹುದು, ಅವರಿಗೆ ಕಛೇರಿ ಸಿಕ್ಕಿ ಒಂದೆರಡು ತಿಂಗಳುಗಳಾಗಿದೆ. ಅಂದರೆ ಆ ಘಟನೆಯಾಗಿ ಒಂದೂವರೆ ವರ್ಷದ ನಂತರ ಜಡ್ಜ್‌ರವರ ನೇಮಕಾತಿಯ ಆದೇಶ ಬಂತು, ಅನಂತರ ಅವರಿಗೆ ಸವಲತ್ತುಗಳನ್ನು ಕೊಟ್ಟರು.

ಅಧ್ಯಕ್ಷರು:- ತಾವು ಈಗ ಹೇಳಿರತಕ್ಕದ್ದು ಬಹಳ ವ್ಯಾಲಿಡ್ ಪಾಯಿಂಟ್. ಆದ್ದರಿಂದ ನಾನು ಇದಕ್ಕೆ ಸಂಬಂಧಪಟ್ಟಂತೆ ಏನು ಹೇಳುತ್ತೇನೆಂದರೆ, ಈ ವಿಚಾರದಲ್ಲಿ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ ಎಂದು ಪ್ರಿಸ್ಯೂಮ್ ಮಾಡುವುದು ಬೇಡ. ಆ ರೀತಿಯಲ್ಲಿ ಭಾವಿಸುವುದು ಬೇಡ, ಹಾಗೆಂದು ಇದರ ಬಗ್ಗೆ ಚರ್ಚೆ ಮಾಡುವುದನ್ನು ನಿಲ್ಲಿಸುವುದೂ ಬೇಡ, ನಾವು ಇದರ ಬಗ್ಗೆ ಚರ್ಚೆಗೆ ತೆಗೆದುಕೊಳ್ಳೋಣ. ನಿಯಮ 69ರ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳೋಣವೇ? I want to take your consent and then proceed. This is the first affair between you and me. Why don't you be more considerate to me?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ತಾವು ಹೇಗೆ ಹೇಳುತ್ತೀರೋ ಹಾಗೆ ನಾವು ಕೇಳುತ್ತೇವೆ.

MR. SPEAKER:- I will exercise my discretion on a later occasion. Today I want your consent. Let's go.

Sri M. Mallikharjuna Kharge:- Sir, it is entirely depending on your discretion. If you say anything, we will....

MR. SPEAKER:- Alright. I am thankful to the Hon'ble Leader of the Opposition.

SRI M. MALLIKARJUNA KHARGE:- But I still insist for this but it is left to you.

ಅಧ್ಯಕ್ಷರು:- ಈ ವಿಷಯದ ಪ್ರಾಮುಖ್ಯತೆಯನ್ನು ಗಮನದಲ್ಲಿಟ್ಟುಕೊಂಡು ಇದರ ಬಗ್ಗೆ ಚರ್ಚೆಯನ್ನು ಯಾವುದೇ ಕಾರಣಕ್ಕೂ ಮುಂದೂಡಬಾರದು ಎನ್ನತಕ್ಕ ದೃಷ್ಟಿಯಿಂದ ನನ್ನ ಅಧಿಕಾರವನ್ನು ಚಲಾಯಿಸಿ ತಾವು ಇದರ ಬಗ್ಗೆ ನಿಲುವಳಿ ಸೂಚನೆಯಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಕೊಟ್ಟಿದ್ದ ಸೂಚನೆಯನ್ನು ನಿಯಮ 69ರ ಕೆಳಗೆ ಈಗಲೇ ಚರ್ಚೆಗೆ ತೆಗೆದುಕೊಳ್ಳುತ್ತಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆಯನ್ನು ಪ್ರಾರಂಭ ಮಾಡಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಈ ವಿಚಾರವಾಗಿ, ಈ ಘಟನೆಯ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಬೇಕೆಂದು ತಾವು ಅನುಮತಿಯನ್ನು ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದಿಸುತ್ತೇನೆ. ಆದರೆ ನಿಯಮ 69ರ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳದೆ ನಿಲುವಳಿ ಸೂಚನೆಯ ಮೇರೆಗೆ ಚರ್ಚೆಗೆ ತೆಗೆದುಕೊಂಡಿದ್ದರೆ ಇನ್ನೂ ಒಳ್ಳೆಯದಾಗಿರುತ್ತಿತ್ತು; ಇನ್ನೂ ಪ್ರಾಮುಖ್ಯತೆ ಸಿಗುತ್ತಿತ್ತು; ಮಹತ್ವ ಸಿಗುತ್ತಿತ್ತು.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲು ಪ್ರಾರಂಭ ಮಾಡಿದ್ದಾರೆ, ಅವರು ಮಾತನಾಡಿ ಪೂರ್ಣ ಮಾಡಬೇಕಾದರೆ ಸುಮಾರು ಮುಕ್ಕಾಲು ಗಂಟೆಯಾಗಬಹುದು, ಆದ್ದರಿಂದ ಇದರ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡಿ ಮಧ್ಯೆ ನಿಲ್ಲಿಸದ ರೀತಿಯಲ್ಲಿ ಪೂರ್ಣ ಮಾಡುವ ಉದ್ದೇಶದಿಂದ ಭೋಜನಕ್ಕೆ ಹೋಗಿ ಅನಂತರ ಚರ್ಚೆಗೆ ಸಮಾವೇಶಗೊಳ್ಳುವುದು ಒಳ್ಳೆಯದೆಂದು ಅನ್ನಿಸುತ್ತದೆ.

ಅಧ್ಯಕ್ಷರು:- ಭೋಜನಕ್ಕೆ ಬಿಡುವು ಇಲ್ಲ. ಮಾನ್ಯ ಸಿ.ಎಂ. ಲಿಂಗಪ್ಪನವರು ಬಂದಿದ್ದಾರಂತೆ, ಅವರೊಂದಿಗೆ ಒಂದು ನಿಮಿಷ ಮಾತನಾಡಿಕೊಂಡು ಬರುತ್ತೇನೆ. ಅದಕ್ಕಾಗಿ ಉಪಾಧ್ಯಕ್ಷರು ಕಲಾಪವನ್ನು ನಡೆಸುತ್ತಾರೆ.

ಉಪಾಧ್ಯಕ್ಷರು: (ಶ್ರೀ ಸಿ.ಎಂ. ಮಾಮನಿ) ಪೀಠವನ್ನಲಂಕರಿಸಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ನಾವೇನು ಈಗಾಗಲೇ ಈ ಸದನದ ಮುಂದೆ ವಿಷಯವನ್ನು ಚರ್ಚೆಗೆ ತಂದಿದ್ದೇವೆ ಅದನ್ನು ನಿಯಮ 69ರ ಕೆಳಗೆ ಪರಿವರ್ತಿಸಿ ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ಹೆಜ್ಜಾಲದಲ್ಲಿ ನಡೆದಂಥ ಘಟನೆಯೇನಿದೆ ಅದು ಖಂಡನೀಯವಾದುದು ಮತ್ತು ವಿಶೇಷವಾಗಿ ಜನಸಾಮಾನ್ಯರ ಜೀವವನ್ನು ಉಳಿಸಬೇಕು ಎನ್ನತಕ್ಕ ದೃಷ್ಟಿಯಿಂದ ಮಾಡಿದಂಥ ಗೋಲಿಬಾರ್ ಅಲ್ಲ. ಇದು ನೇರವಾಗಿ ಜನಸಾಮಾನ್ಯರನ್ನು ಕೊಲೆ ಮಾಡಲು ಮಾಡಿದಂಥ ಗೋಲೀಬಾರ್ ಎಂದು ನಾವೆಲ್ಲರೂ ಹೇಳಬಯಸುತ್ತೇವೆ. ಅರಣ್ಯದಲ್ಲಿ ಯಾವ ರೀತಿಯಾಗಿ ಭೇಟಿಯಾಡುತ್ತಾರೆ, ಆ ರೀತಿಯಲ್ಲಿ recklessly ಇವತ್ತಿನ ದಿವಸ ಪೋಲಿಸಿನವರು ಸಾಮಾನ್ಯ ಜನರ ಜೊತೆಯಲ್ಲಿ ಬೇಟೆಯಾಡಿ, ಯಾರು ಹೊಲಗಳಲ್ಲಿ ಕೆಲಸ ಮಾಡುತ್ತಿದ್ದರೋ, ರಸ್ತೆಯಲ್ಲಿ ನಿಂತಿದ್ದರೋ

ಈ ಚಳುವಳಿಗೆ ಸಂಬಂಧವಿಲ್ಲದವರ್‍ಯಾರು ಜನರಿದ್ದಾರೋ? ಅಂಥ ಜನರ ಮೇಲೆ ಈ ತಿಂಗಳ ಮೂರನೇ ತಾರೀಖಿನ ದಿವಸ ಪೋಲಿಸರು ಗೋಲಿಬಾರ್ ಮಾಡಿದರು. ಅದರಿಂದ ಸುಮಾರು ಮೂರು ಜನರು ಪ್ರಾಣ ತೆತ್ತಿದ್ದಾರೆ, ಸುಮಾರು 29 ಜನರು ಗಾಯಗೊಂಡಿದ್ದಾರೆ, ಸಣ್ಣಪುಟ್ಟ ಗಾಯಗಳಾದಂಥವರು ಸುಮಾರು 72 ಜನರಿದ್ದಾರೆ. ಇಂಥ ಒಂದು ಘಟನೆ ಹೆಜ್ಜಾಲದಲ್ಲಿ ನಡೆಯಿತು. ಈ ರೀತಿ ಘಟನೆಯಾಗಬೇಕಾದರೆ ಕಾರಣಕರ್ತರ್‍ಯಾರು? ಯಾವ ಕಾರಣಕ್ಕಾಗಿ ಈ ಘಟನೆ ಅಲ್ಲಿ ನಡೆಯಿತು? ಇದರ ಹಿನ್ನೆಲೆ ಏನು? ಇದರ ಉದ್ದೇಶವೇನು? ಇದಕ್ಕೆ ಸ್ಫೂರ್ತಿ ಕೊಟ್ಟಂಥವರು ಯಾರು? ಇಂಥ ಪ್ರಶ್ನೆಗಳು ಇಂದು ನಮ್ಮ ಮುಂದಿವೆ. ಆ ರೀತಿಯಾದ ಗೋಲಿಬಾರ್ ಘಟನೆಯ ದೃಶ್ಯವನ್ನು ನಮ್ಮ ಕಣ್ಣೆದುರು ತಂದುಕೊಂಡಾಗ ಯಾವುದೇ ಸರ್ಕಾರವಿರಲಿ ನಾಚಿಕೆಯಿಂದ ತಲೆತಗ್ಗಿಸಬೇಕಾಗುತ್ತದೆ. ಆದರೂ ಸಹ ಅಂಥ ಘಟನೆಗೆ ಸಮರ್ಥನೆ ಮಾಡಿಕೊಳ್ಳತಕ್ಕ ಪ್ರಯತ್ನವನ್ನು ಮಾನ್ಯ ಮುಖ್ಯಮಂತ್ರಿಯವರು ಮಾಡಿಕೊಂಡಿದ್ದಾರೆ. ಯಾರೋ ಕಾನೂನನ್ನು ಮುರಿದರೆ ನಾವು ಸುಮ್ಮನೆ ಕುಳಿತುಕೊಳ್ಳಲು ಆಗುತ್ತದೆಯೇ, ಗೋಲಿಬಾರ್‌ನ್ನು ಮಾಡಬೇಕಾಗುತ್ತದೆ, ಕೊಲೆ ಮಾಡಬೇಕಾಗುತ್ತದೆ ಎನ್ನತಕ್ಕ ಪದಗಳನ್ನು ಉಪಯೋಗ ಮಾಡಿ ಮಾನ್ಯ ಮುಖ್ಯಮಂತ್ರಿಯವರು ಮಾತನಾಡಿ ಪೋಲಿಸ್‌ನವರಿಗೇ ಪ್ರೋತ್ಸಾಹವನ್ನು ಕೊಟ್ಟರೇ ಹೊರತು, ಈ ಘಟನೆಯಲ್ಲಿ ಯಾರು ಸತ್ತಿದ್ದರೋ, ನೊಂದಿದ್ದರೋ, ತೊಂದರೆಗೆ ಒಳಗಾಗಿದ್ದರೋ ಅಂಥವರಿಗೆ ಸಹಾಯ ಮಾಡುವ ಬಗ್ಗೆ ಸಹಾನುಭೂತಿಯನ್ನು ವ್ಯಕ್ತ ಮಾಡುವ ಬಗ್ಗೆ, ಯಾವುದೇ ಮಾತು ಅವರ ಬಾಯಿಯಿಂದ ಬರಲಿಲ್ಲ. ಪೋಲಿಸರು ಮಾಡಿದಂಥ ದೌರ್ಜನ್ಯದ ಬಗ್ಗೆಯೇ ಪುರಸ್ಕಾರ ಕೊಟ್ಟರೇ ಹೊರತು ಜನಸಾಮಾನ್ಯರ ಮೇಲೆ ಆದಂಥ ಅನ್ಯಾಯ, ದಬ್ಬಾಳಿಕೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಗಮನವನ್ನೂ ಕೊಡಲಿಲ್ಲ, ಅದರ ಬಗ್ಗೆ ಆ ಚಿಂತನೆಯನ್ನೂ ಮಾಡಲಿಲ್ಲ. ಅವರಿಗೆ ತೋರಿಸಬೇಕಾದ ದುಃಖವನ್ನು ಸಹ ಸಮಯವಿಲ್ಲದ ಕಾರಣ ತೋರಿಸಲಿಲ್ಲವೇನೋ ಎನ್ನತಕ್ಕ ಮಾತನ್ನು ಬಹಳ ನೊಂದ ಮನಸ್ಸಿನಿಂದ ಇವತ್ತು ಹೇಳಬೇಕಾಗಿದೆ. ಈ ಘಟನೆಯಾದರೂ ಎಲ್ಲಿ ಆಗಿದೆ? ಆದೇನು ಬೆಂಗಳೂರಿನಿಂದ ಬಹಳ ದೂರವಿಲ್ಲ. ನಮ್ಮ ಬೀದರ್‌ನಲ್ಲೋ, ಗುಲ್ಬರ್ಗಾದಲ್ಲೋ ಅಥವಾ ಮಂಗಳೂರಿನಲ್ಲೋ ನಡೆದಂತಹ ಘಟನೆಯಲ್ಲ. ಇದು ಬೆಂಗಳೂರಿನಿಂದ ಕೇವಲ 30 ಕಿ.ಮೀ. ದೂರದಲ್ಲಿ ನಡೆದಂತಹ ಘಟನೆಯಾಗಿದೆ. ಈ ಘಟನೆ ಏತಕ್ಕೋಸ್ಕರ ಆಯಿತು? ಬೆಂಗಳೂರಿನಿಂದ ಕೇವಲ 30 ಕಿ.ಮೀ. ದೂರದಲ್ಲಿ ನಡೆದಂತಹ ಘಟನೆ ಬಗ್ಗೆ ಇವತ್ತಿನ ದಿವಸ ನೇರವಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಮಾಹಿತಿ ಇಲ್ಲ. ಪೋಲಿಸ್ ಅಧಿಕಾರಿಗಳಿಗೆ ಮಾಹಿತಿ ಇಲ್ಲ ಅಥವಾ ಇಲ್ಲಿನ ಹೋಮ್ ಡಿಪಾರ್ಟ್‌ಮೆಂಟ್‌ಗೆ ಇದರ ಬಗ್ಗೆ ಮಾಹಿತಿ ಇಲ್ಲ ಎಂದರೆ ನನಗೆ ಆಶ್ಚರ್ಯವೆನಿಸುತ್ತದೆ. ಘಟನೆ ನಡೆದ ಸ್ಥಳದಲ್ಲಿ ವೆಳ್ಳಿಯಪ್ಪ ಟೆಕ್ಸ್‌ಟೈಲ್ಸ್ ಕಾರ್ಖಾನೆ ಏನಿದೆ, ಈ ಕಾರ್ಖಾನೆಯಲ್ಲಿ ಕೆಲಸ ಮಾಡತಕ್ಕಂತಹ ಸುಮಾರು 600 ಜನ ಕಾರ್ಮಿಕರು ಮುಷ್ಕರ ನಿರತರಾಗಿದ್ದರು. ಅವರ ಬೇಡಿಕೆ ಏನಿತ್ತು ಎಂದರೆ, ನಮಗೆ ಬಹಳ ದಿವಸಗಳಿಂದ ಸಿಗಬೇಕಾದಂತಹ ಸವಲತ್ತುಗಳು ಸಿಗುತ್ತಿಲ್ಲ, ಮಿನಿಮಮ್ ವೇಜಸ್ ಕೆಳಗೆ ನಮಗೆ ಏನು ಇವತ್ತು ಕಾರ್ಖಾನೆಯವರು ಹಣ ಕೊಡಬೇಕಾಗಿತ್ತೋ ಅಷ್ಟು ಹಣ ಕೊಡುತ್ತಿಲ್ಲ ಅವುಗಳನ್ನು ಕೊಡಿಸಬೇಕು ಎಂಬ ಬೇಡಿಕೆಗಳನ್ನು ಇಟ್ಟುಕೊಂಡು ಕಾರ್ಖಾನೆಯ ಕಾರ್ಮಿಕರು ಹೆಜ್ಜಾಲ ಕ್ರಾಸ್

ಹತ್ತಿರ ಟೆಂಟ್ ಹಾಕಿಕೊಂಡು ಕುಳಿತಿದ್ದರು. ಸುಮಾರು 3-4 ತಿಂಗಳುಗಳಿಂದ ಈ ಒಂದು ಕಾರ್ಯಕ್ರಮ ಅಲ್ಲಿ ನಡೆದಿತ್ತು. ಇದೇನು ಹೊಸ ಕಾರ್ಯಕ್ರಮವಲ್ಲ. ಅಲ್ಲಿ ಚುನಾವಣೆ ನಡೆದಿದೆ ಎಂಬುದೂ ಕೂಡ ಸರ್ಕಾರದ ಗಮನಕ್ಕೆ ಬಂದಿದೆ. ಅವರಿಗೂ ಕೂಡ ಗೊತ್ತು. ಇಷ್ಟಿದ್ದರೂ ಕೂಡ ಆ ಕಾರ್ಮಿಕರು ಕೇವಲ ಅದೇ ದಿವಸ ಇಂತಹ ಒಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಪ್ರಯತ್ನ ಪಟ್ಟಿದ್ದಾರೆ ಅಥವಾ ಏನಾದರೂ ಒಂದು ತಮ್ಮ ಮನಸ್ಸಿನಲ್ಲಿ ಇರತಕ್ಕದ್ದನ್ನು ಹೇಳಿಕೊಳ್ಳತಕ್ಕ ಪ್ರಯತ್ನ ಮಾಡಿದ್ದಾರೆ ಎನ್ನತಕ್ಕದ್ದಲ್ಲ. ಅನೇಕ ದಿವಸಗಳಿಂದ ಕಾರ್ಮಿಕರು ತಮ್ಮ ಬೇಡಿಕೆಗಳ ಈಡೇರಿಕೆಗೆ ಮುಷ್ಕರ ನಡೆಸುತ್ತಿದ್ದು ಮೈಸೂರು ಹೆದ್ದಾರಿಯಲ್ಲಿ ಹೋಗತಕ್ಕ ಎಲ್ಲಾ ರಾಜಕೀಯ ಮುಖಂಡರು, ಮಂತ್ರಿಗಳು, ಎಂ.ಎಲ್.ಎ.ಗಳು, ಎಂ.ಪಿ.ಗಳನ್ನು ನಿಲ್ಲಿಸಿ ಅವರಿಗೆ ಅಪ್ಲಿಕೇಷನ್ ಕೊಡತಕ್ಕದ್ದು, ತಮ್ಮ ಗೋಳನ್ನು ಅವರುಗಳ ಬಳಿ ಹೇಳಿಕೊಂಡು ಕಾರ್ಮಿಕ ಇಲಾಖೆಯಿಂದ ತಮಗೆ ಸಹಾಯ ಮಾಡಿಸಿ ಎಂದು ಅವರನ್ನು ಕೇಳಿಕೊಳ್ಳತಕ್ಕದ್ದು ಇದೆಲ್ಲಾ ನಡೆಯುತ್ತಿತ್ತು. ಮುಷ್ಕರ ನಿರತ ಕಾರ್ಮಿಕರು ತಮ್ಮ ಬೇಡಿಕೆಗಳ ಬಗ್ಗೆ ಕರಪತ್ರಗಳನ್ನೂ ಸಹ ಹೊರಡಿಸಿದ್ದರು. ಅಲ್ಲಿಯ ಕಾರ್ಮಿಕ ಸಂಘ ಸಿ.ಪಿ.ಐ (ಎಂ)ಗೆ ಸೇರಿದ ಸಂಘಟನೆಯಾಗಿದೆ. ಶ್ರೀ ಸುಬ್ರಮಣ್ಯಮ್ ಎನ್ನತಕ್ಕವರು ಸದರಿ ಸಂಘದ ಲೀಗಲ್ ಅಡ್ವೈಸರ್, ಶ್ರೀ ರಾಜಣ್ಣ ಎಂಬುವವರು ಸಂಘದ ಅಧ್ಯಕ್ಷರು ಮತ್ತು ಶ್ರೀ ತೋಪಯ್ಯ ಎಂಬುವವರು ಸದರಿ ಸಂಘದ ಜನರಲ್ ಸೆಕ್ರೆಟರಿಯಾಗಿದ್ದಾರೆ. ಇವರೆಲ್ಲಾ ಸೇರಿ ಒಂದು ಮೆಮೊರ್ಯಾಂಡಮ್ ಸರ್ಕಾರಕ್ಕೆ ಕೊಟ್ಟರು. ಆ ಮನವಿಯಲ್ಲಿ ಅವರು ಏನು ಹೇಳಿದ್ದರು ಎಂದರೆ, ಅನೇಕ ದಿವಸಗಳಿಂದ ನಮ್ಮ ಸಮಸ್ಯೆಗಳನ್ನು ನೀವು ಬಗೆಹರಿಸುತ್ತೇವೆಂದು ಭರವಸೆ ಕೊಟ್ಟರೂ ಇದುವರೆವಿಗೂ ಬಗೆಹರಿಸಿರುವುದಿಲ್ಲ. ಅದಕ್ಕಾಗಿ ಸರ್ಕಾರದ ಗಮನ ಸೆಳೆಯಲು ನಾವು ರಸ್ತೆ ರೋಕೋ ಚಳುವಳಿ ಮಾಡುತ್ತೇವೆಂದು ಕಾರ್ಮಿಕ ಮುಖಂಡರು ಸರ್ಕಾರಕ್ಕೆ ಒಂದು ಮನವಿಯನ್ನು ಲಿಖಿತ ರೂಪದಲ್ಲಿ ಕೊಟ್ಟರು. ಅದರ ಪ್ರತಿ ನನ್ನ ಹತ್ತಿರ ಇದೆ. ಕಾರ್ಮಿಕ ಮುಖಂಡರು ಬೆಳಿಗ್ಗೆ 9-11 ಗಂಟೆಯವರೆಗೆ ಒಟ್ಟು ಎರಡು ಗಂಟೆಗಳ ಕಾಲ ತಮಗೆ ರಸ್ತೆ ರೋಕೋ ನಡೆಸಲು ಅನುಮತಿ ನೀಡಬೇಕೆಂದು ಪೋಲಿಸರನ್ನು ಕೋರಿದ್ದರು. ಆದರೆ ಪೋಲೀಸರು ಅದಕ್ಕೆ ಒಪ್ಪದೇ ಸಾಂಕೇತಿಕವಾಗಿ ಕೇವಲ ಅರ್ಧ ಗಂಟೆ ಕಾಲ ಮಾತ್ರ ರಸ್ತೆ ರೋಕೋ ನಡೆಸಲು ಅನುಮತಿ ನೀಡುವುದಾಗಿ ಹೇಳಿದರು. ಆದರೆ ಕಾರ್ಮಿಕರು ಎರಡು ಗಂಟೆ ರಸ್ತೆ ರೋಕೋ ನಡೆಸುವುದಾಗಿ ಪಟ್ಟು ಹಿಡಿದರು. ನಂತರ ಪೋಲಿಸರು ಶಾಂತಿಗೆ ಭಂಗ ತರಬಾರದು ಮುಂತಾಗಿ ಕಾರ್ಮಿಕ ಮುಖಂಡರಿಗೆ ಹೇಳಿದರು. ಕಾರ್ಮಿಕ ಮುಖಂಡರು ಮತ್ತು ಪೋಲಿಸರ ನಡುವೆ ಒಪ್ಪಂದವಾಗಿ ಕೊನೆಗೆ ಪೋಲೀಸರು ರಸ್ತೆ ರೋಕೋ ನಡೆಸಲು ಕಾರ್ಮಿಕರಿಗೆ ಅನುಮತಿ ನೀಡಿದರು. ಅದರಂತೆ ಕಾರ್ಮಿಕರು 3ನೇ ತಾರೀಖು ರಸ್ತೆ ರೋಕೋ ಚಳುವಳಿಯನ್ನು ಬೆಳಿಗ್ಗೆ 9 ಗಂಟೆಗೆ ಪ್ರಾರಂಭ ಮಾಡಿದರು. ಚಳುವಳಿ ಪ್ರಾರಂಭ ಮಾಡಿ ಸುಮಾರು ಅರ್ಧ ಗಂಟೆ ಆಗಿರಬಹುದು ಅಥವಾ 40 ನಿಮಿಷ ಆಗಿರಬಹುದು. ಹತ್ತು ನಿಮಿಷ ಹೆಚ್ಚು ಕಡಿಮೆ ಆಗಿರಬಹುದು. ಅಷ್ಟರಲ್ಲೇ ಪೋಲೀಸರು ಬಂದು ಚಳುವಳಿ ನಿರತರಿಗೆ ಅರ್ಧ ಗಂಟೆ ಆಯಿತು, ಇನ್ನು ಮುಂದೆ ನೀವು ಇಲ್ಲಿಂದ ಎದ್ದೇಳಬೇಕು, ಇದೇ ಮಾರ್ಗವಾಗಿ ಚುನಾವಣಾ ಪ್ರಚಾರಕ್ಕಾಗಿ ಅನೇಕ ಮಂತ್ರಿಗಳು, ಲೋಕಸಭಾ ಸದಸ್ಯರು ಹೋಗುತ್ತಿದ್ದು ಅವರಿಗೆ ದಾರಿ ಮಾಡಬೇಕಾಗಿದೆ, ಆದ್ದರಿಂದ ಎದ್ದೇಳಿ ಎಂಬ ಮಾತನ್ನು ಪೋಲಿಸರು

ಹೇಳಿದರು. ಆಗ ಚಳುವಳಿ ನಿರತ ಕಾರ್ಮಿಕರು ಪೋಲಿಸರ ಮಾತಿಗೆ ಒಪ್ಪದೇ ನಾವು ಈಗಾಗಲೇ ಎರಡು ಗಂಟೆ ಕಾಲ ಚಳುವಳಿ ನಡೆಸಲು ತಮ್ಮಿಂದ ಅನುಮತಿ ಪಡೆದಿದ್ದೇವೆ, ಈಗ ಕೇವಲ ಅರ್ಧ ಗಂಟೆ ಮಾತ್ರ ಆಗಿದೆ, ಇನ್ನೂ ಒಂದೂವರೆ ಗಂಟೆ ಕಾಲ ನಾವು ರಸ್ತೆ ರೋಕೋ ಮಾಡಬಹುದು, ದಯವಿಟ್ಟು ನೀವು ಇದಕ್ಕೆ ಇಂಟರ್ ಫಿಯರ್ ಆಗಬೇಡಿ, ನಾವು ಶಾಂತ ರೀತಿಯಿಂದ ನಮ್ಮ ಬೇಡಿಕೆಯ ಬಗ್ಗೆ ಒತ್ತಾಯಪಡಿಸುತ್ತಾ ಕುಳಿತಿದ್ದೇವೆ, ಅಲ್ಲದೇ ನಮ್ಮ ಕ್ಷೇತ್ರದ ಲೋಕಸಭಾ ಸದಸ್ಯರಾದ ಶ್ರೀ ಕುಮಾರಸ್ವಾಮಿಯವರು ಈ ಮಾರ್ಗದಲ್ಲೇ ಹೋಗುತ್ತಿದ್ದಾರೆ, ಚುನಾವಣಾ ಸಮಯದಲ್ಲಿ ನಮ್ಮ ಸಮಸ್ಯೆಗೆ ಒಂದು ಪರಿಹಾರ ಅವರಿಂದ ಸಿಗಬಹುದು ಎಂಬ ಮಾತನ್ನು ಪೋಲಿಸರಿಗೆ ಹೇಳಿದರು. ಅಲ್ಲದೇ ಲೋಕಸಭಾ ಸದಸ್ಯರು ಹಿಂದೆ ಏನು ಭರವಸೆ ಕೊಟ್ಟಿದ್ದರು ಅದರ ಬಗ್ಗೆ ಕೂಡ ಕಾರ್ಮಿಕ ಸಂಘದವರು ತಾವು ಹೊರಡಿಸಿದ ಕರಪತ್ರದಲ್ಲಿ ಪ್ರಸ್ತಾಪಿಸಿದ್ದಾರೆ. ಆ ಕರಪತ್ರದ ಒಂದೇ ಒಂದು ಪ್ಯಾರಾವನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದು ಹೀಗಿದೆ.

"Two years ago when Sri Devegowda contested for elections from this area the workers voted for him believing his assurance that their grievances and demands will be resolved. But after his election and after becoming Chief Minister, he did not remember the workers and the assurance given. Again his son Sri H.D. Kumaraswamy who has been elected to Lok Sabha from this Constituency is not able to secure justice to workers. The assurance given by the Chief Minister and the Deputy Chief Minister to workers when they conducted Dharana in front of their residence on 30-12-1996 have not been fulfilled. They have not called even joint meeting. since 7-12-1996 due to illegality committed by the management in cutting the wages of the workers the work of the factory has come to standstill. In this background, the workers will be conducting Raste Roko Programme at Hejjala, Mysore-Bangalore Highway on 3-2-1997 in the morning for two hours to focus the attention of the public and the Government to the anti-Union victimisation policy of the management. Working

Class in general of Bangalore District are requested to support the just struggle of workers and the villagers.'

(ಮಾನ್ಯ ಸಭಾಧ್ಯಕ್ಷರು ಶ್ರೀ ರಮೇಶ್ ಕುಮಾರ್)ರವರು ಪೀಠವನ್ನು ಅಲಂಕರಿಸಿದರು)

ಈ ರೀತಿ ಕಾರ್ಮಿಕ ಸಂಘದವರು ತಮ್ಮ ಹ್ಯಾಂಡ್ ಬಿಲ್‌ನಲ್ಲಿ, ತಮ್ಮ ಮೆಮೊರ್‍ಯಾಂಡಮ್‌ನಲ್ಲಿ ಸ್ಪಷ್ಟವಾಗಿ ಸರ್ಕಾರಕ್ಕೆ ಹೇಳಿದ್ದಾರೆ. ಇದ್ದಕ್ಕಿದ್ದಂತೆ ರಸ್ತೆ ರೋಕೋ ಮಾಡಿ ಚುನಾವಣಾ ಪ್ರಚಾರಕ್ಕೆ ಹೋಗುವವರನ್ನು ತಡೆಯಬೇಕು ಎಂಬ ದೃಷ್ಟಿಯಿಂದ ಮಾಡಿದಂತಹ ಕಾರ್ಯಕ್ರಮ ಇದಲ್ಲ. ಸರ್ಕಾರಕ್ಕೆ ಅಥವಾ ಸರ್ಕಾರದ ಮಂತ್ರಿಗಳಿಗೆ ತೊಂದರೆ ಕೊಡಬೇಕು ಎನ್ನತಕ್ಕ ಉದ್ದೇಶ ಕೂಡ ಇದರಲ್ಲಿ ಇರಲಿಲ್ಲ. ರಸ್ತೆ ರೋಕೋ ಮಾಡುವುದಾಗಿ ಕಾರ್ಮಿಕ ಮುಖಂಡರು ಮೊದಲೇ ಮಾಹಿತಿ ನೀಡಿದ್ದರೂ, ಮಾಹಿತಿ ನೀಡಿ ಚಳುವಳಿ ನಡೆಸಲು ಪೋಲಿಸರ ಅನುಮತಿ ಪಡೆದಿದ್ದರೂ ಸಹ, ಅವರ ಮೇಲೆ ಗೋಲಿಬಾರ್ ಮಾಡುವಂತಹ ಪ್ರಸಂಗ ಏಕೆ ಬಂತು? ಈ ಬಗ್ಗೆ ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಯಾರು ಆ ಒಂದು ಹೆದ್ದಾರಿ ಮೇಲಿಂದ ಹೋಗುತ್ತಿದ್ದರು.... ಮಾನ್ಯ ಪಿ.ಜಿ.ಆರ್. ಸಿಂಧ್ಯರವರು ತಾವು ಘಟನೆ ನಡೆದ ಸ್ಥಳದಲ್ಲಿ ಇರಲಿಲ್ಲವೆಂದು ತಿಳಿಸಿ ಆ ಬಗ್ಗೆ ತಮ್ಮ ಮೇಲೆ ಬಂದ ಆರೋಪವನ್ನು ಡಿಸ್ಯೆ ಮಾಡಿದ್ದಾರೆ. ತಮಗೂ ಮತ್ತು ಶ್ರೀ ಕುಮಾರಸ್ವಾಮಿಯವರಿಗೂ ಸುಮಾರು 15 ಕಿ.ಮೀ. ಅಂತರ ಇತ್ತು, ನಾನು ಘಟನೆ ನಡೆದ ಸ್ಥಳದಿಂದ 30 ಕಿ.ಮೀ. ದೂರದಲ್ಲಿದ್ದೆ, ಶ್ರೀ ಕುಮಾರಸ್ವಾಮಿಯವರು ಫೈರಿಂಗ್ ನಡೆದ ಹೆಜ್ಜಾಲ ಕ್ರಾಸ್‌ದಿಂದ 15 ಕಿ.ಮೀ. ದೂರದಲ್ಲಿ ಇದ್ದರು, ಹೀಗಾಗಿ ಫೈರಿಂಗ್ ಮಾಡಲು ಅವರು ಸಂಬಂಧಪಟ್ಟವರಿಗೆ ಸೂಚನೆ ಕೊಡತಕ್ಕ ಸಂಭವವೇ ಇಲ್ಲವೆಂದು ಮಾನ್ಯ ಸಿಂಧ್ಯಾರವರು ಹೇಳಿದ್ದಾರೆ. ಅಂದರೆ ಈಗ ಮಾನ್ಯ ಸಿಂಧ್ಯಾ ಮತ್ತು ಶ್ರೀ ಕುಮಾರಸ್ವಾಮಿಯವರು ನಡುವೆ 15 ಕಿ.ಮೀ. ವ್ಯತ್ಯಾಸ ಇದೆ ಎಂಬುದು ಅರ್ಥವಾಗುತ್ತದೆ. ಈಗ ಅವರು ಇಷ್ಟು ದೂರ ಇದ್ದಾರೆ. ಮೊದಲು ಅವರಿಬ್ಬರೂ ಬಹಳ ಹತ್ತಿರ ಇದ್ದರು. ಈಗ ಚುನಾವಣಾ ಪ್ರಚಾರಕ್ಕೆ ಹೋಗುವಾಗ 15 ಕಿ.ಮೀ. ಅಂತರ ಇಟ್ಟುಕೊಂಡು ಹೋಗಿದ್ದಾರೆ. ತಮಗೂ ಶ್ರೀ ಕುಮಾರಸ್ವಾಮಿಯವರಿಗೂ 15 ಕಿ.ಮೀ. ಅಂತರ ಇಟ್ಟುಕೊಂಡು ಹೋಗಿದ್ದಾರೆ. ತಮಗೂ ಶ್ರೀ ಕುಮಾರಸ್ವಾಮಿಯವರಿಗೂ 15 ಕಿ.ಮೀ. ದೂರ ಇರುವುದನ್ನು ಮಾನ್ಯ ಸಚಿವರು ಗುರುತಿಸಿಕೊಂಡಿದ್ದಾರೆ. ಈ ಬಗ್ಗೆ ಅವರೇ ಹೇಳಿಕೊಂಡಿದ್ದಾರೆ. 'ದಿ ಹಿಂದೂ' ಪತ್ರಿಕೆಯಲ್ಲಿ ಈ ಬಗೆಗಿನ ಅವರ ಪತ್ರಿಕಾ ಹೇಳಿಕೆಯ ಪೂರ್ಣ ಪಾಠ ವರದಿಯಾಗಿದೆ. ಹೀಗಿರುವಾಗ ಘಟನೆ ಬಗ್ಗೆ ಮಾಹಿತಿ ಇದ್ದರೂ ಕೂಡ, ಅವರಿಗೆ ಪ್ರತಿಯೊಂದು ಗೊತ್ತಿದ್ದೂ ಕೂಡ ಈ ಘಟನೆ ಹೇಗೆ ನಡೆಯಿತು? ಯಾರು ಅಲ್ಲಿ ಗೋಲಿಬಾರ್ ನಡೆಸಲು ಆದೇಶ ಕೊಟ್ಟರು? ಜಿಲ್ಲಾಧಿಕಾರಿಯವರು ಆದೇಶ ಕೊಟ್ಟರೇ? ಗೃಹ ಇಲಾಖಾ ಕಾರ್ಯದರ್ಶಿಯವರಿಂದ ಆದೇಶ ಹೋಯಿತೇ? ಮಾನ್ಯ ಮುಖ್ಯಮಂತ್ರಿಗಳಿಂದ ಆದೇಶ ಹೋಯಿತೇ? ಎಂದು ನಾನು ನಿಮ್ಮನ್ನು ಕೇಳುತ್ತೇನೆ. ಆದರೆ ಇವರ್‍ಯಾರಿಂದಲೂ ಗೋಲಿಬಾರ್‌ಗೆ ಪೋಲೀಸರು ಅನುಮತಿ ತೆಗೆದುಕೊಂಡಿಲ್ಲ.

1.30 ಪಿ.ಎಂ.

ಸ್ಥಳದಲ್ಲೇ ಇರತಕ್ಕಂಥ ಎಸ್.ಪಿ., ನಾರಾಯಣಗೌಡರು, ಅಶೋಕ್ ಕುಮಾರ್‌ರವರು, ಅಲ್ಲಿರತಕ್ಕಂತಹ ಇನ್ನೊಬ್ಬ ಬೆಟ್ಟೇಗೌಡರವರು, ಈ ಜನ ಅವರೇ ಕಾನೂನು ತಮ್ಮ ಕೈಯಲ್ಲಿ ತೆಗೆದುಕೊಂಡು ಅವರ ಮುಖಂಡರನ್ನು ಅಥವಾ ಅವರಿಗೆ ಯಾವ ಆಶೀರ್ವಾದ ಇತ್ತು, ಅವರ ಕವಚ ಅವರ ಹಿಂದೆ ಇತ್ತು ಅಂತಹವರಿಗೆ ಸಮಾಧಾನ ಪಡಿಸುವುದಕ್ಕೋಸ್ಕರ, ನೀವು 600 ಜನ ಎಂದು ಹೇಳುತ್ತೀರಿ, 600 ಜನ ಕಾರ್ಮಿಕರು ಇದ್ದಾರೆ ಎನ್ನತಕ್ಕಂತಹ ಮಾತನ್ನು ನೀವೇ ಹೇಳುತ್ತೀರಿ. ಮೊದಲು ಎಫ್ ಐ ಆರ್.ನಲ್ಲೂ ಕೂಡ ಮುನ್ನೂರು ಜನ ಕಾರ್ಮಿಕರು ಎಂಬ ಮಾತನ್ನು ಹೇಳುತ್ತೀರಿ, ಇಂಟರ್ ಸಿ.ಐ.ಟಿ.ಇ.ನವರು ಸ್ವತಃ ಅವರ ಪಾಂಪ್ಲೆಟ್‌ನಲ್ಲಿ ಮತ್ತು ಮೆಮೊರ್‍ಯಾಂಡಂನಲ್ಲಿ 600ಕ್ಕಿಂತ ಹೆಚ್ಚಿಗೆ ಜನ ನಮ್ಮ ಕಾರ್ಮಿಕರು ಇಲ್ಲ ಎನ್ನುವ ಮಾತು ಹೇಳುತ್ತಾರೆ. ಅಂದರೆ 600 ಜನರನ್ನು ಕಂಟ್ರೋಲ್ ಮಾಡತಕ್ಕಂತಹ ಶಕ್ತಿ ಈ ಸರ್ಕಾರಕ್ಕೆ ಇಲ್ಲ ಎಂದರೆ ಇನ್ನೂ ಎಷ್ಟರ ಮಟ್ಟಿಗೆ ಈ ಸರ್ಕಾರದವರು ಸುಲಲಿತವಾಗಿ ದೇಶದ ಜನರಿಗೆ ನೋಡಿಕೊಂಡಿದ್ದಾರೆ, ಅವರ ರಕ್ಷಣೆ ಮಾಡಿದ್ದಾರೆ ಎನ್ನತಕ್ಕಂತಹ ಮಾತು, ಮತ್ತು ಲಾ ಅಂಡ್ಯ ಆರ್ಡರ್ ಸಿಚ್ಯುಯೇಷನ್ ಕಂಟ್ರೋಲ್ ಮಾಡಿಕೊಂಡು ಹೋಗಿದ್ದಾರೆ ಎನ್ನುವುದಕ್ಕೆ ಇದೊಂದೇ ಉದಾಹರಣೆ ಸಾಕು. 30 ಕಿ.ಮೀ ದೂರದಲ್ಲಿರತಕ್ಕಂತಹ ಹೆಜ್ಜಾಲ ಗ್ರಾಮದಲ್ಲಿ ಈ ಘಟನೆ ನಡೆಯಬೇಕಾದರೆ, ದೂರದಲ್ಲಿರತಕ್ಕಂತಹ ಘಟನೆಗಳು ಇನ್ನು ಎಷ್ಟರ ಮಟ್ಟಿಗೆ ಮರೆ ಮಾಚಿ ಹೋಗಿವೆ, ಮುಚ್ಚಿ ಹೋಗಿವೆ ಅದರ ಬಗ್ಗೆ ಚಿಂತನೆ ಇಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಇಷ್ಟಕ್ಕೆ ಅವರು ನಿಲ್ಲಿಸದೆ, ಕೊನೆಗೆ ಫೈರಿಂಗ್ ಮಾಡಿದರು. ಯಾರೋ ಬಾಗಿಲಲ್ಲಿ ನೋಡಿಕೊಂಡು ನಿಂತ ಹೆಣ್ಣು ಮಗಳು ಸೀತ ಎಂದು 18 ವರ್ಷ, ಮದುವೆಯಾಗಿ ಕೇವಲ ಎರಡು ತಿಂಗಳು ಮಾತ್ರ ಆಗಿದೆ. ಎನ್ನುವ ಮಾತು ಅವರು ಹೇಳುತ್ತಿದ್ದಾರೆ. ಏಕೆಂದರೆ ನಾನು ಶ್ರೀಮಾನ್ ಧರ್ಮಸಿಂಗ್‌ರವರು ಮತ್ತು ಅನೇಕ ಮುಖಂಡರು ಆಸ್ಪತ್ರೆಗೆ ಭೇಟಿ ಕೊಟ್ಟಾಗ ಅವರು ಸ್ಪಷ್ಟವಾಗಿ ಹೇಳುತ್ತಿದ್ದರು. ನಾವು ಯಾವುದರಲ್ಲೂ ಇಲ್ಲ ಈ ಒಂದು ಸ್ಟ್ರೈಕ್‌ಗೂ ಸಂಬಂಧಪಟ್ಟವರು ಅಲ್ಲ. ಆದರೂ ಕೂಡ ನಮ್ಮ ಮೇಲೆ ನೇರವಾಗಿ ಅವರು ಯಾವ ರೀತಿಯಾಗಿ ಶೂಟ್ ಮಾಡುತ್ತಾರೆ, ಆ ರೀತಿಯಾಗಿ ಶೂಟ್ ಮಾಡಿದ್ದಾರೆ. ಎನ್ನತಕ್ಕಂತಹ ಮಾತನ್ನು ಅವರ ಮನೆಯ ಜನ ನಮಗೆ ಹೇಳಿದರು. ಹೀಗೆ ಅಲ್ಲಿರತಕ್ಕಂತಹ ಮೂರು ಜನರ ಕೊಲೆಯಾಯಿತು. ಕೃಷ್ಣಪ್ಪ 24 ವರ್ಷದ ಹುಡುಗ ಸೀತ 18 ವರ್ಷ ಮತ್ತು ನಾಗರಾಜು 25 ವರ್ಷ ಇವರು ಯಾರೂ ಕೂಡ ರಾಸ್ತಾ ರೋಕೋ ಚಳುವಳಿಯಲ್ಲಿ ಇನ್‌ವಾಲ್ವ್ ಇಲ್ಲ. ಅದಕ್ಕೆ ಸಂಬಂಧವೂ ಇಲ್ಲ ಅಂದರೆ ಎಷ್ಟರಮಟ್ಟಿಗೆ ಪೋಲಿಸರು ಈ ನೇರವಾಗಿ ಫೈರಿಂಗ್ ಮಾಡತಕ್ಕಂತಹ ಮತ್ತು ಕೊಲೆ ಮಾಡತಕ್ಕಂತಹ ಪ್ರಯತ್ನ ಮಾಡಿದ್ದಾರೆ, ಎನ್ನತಕ್ಕಂತಹ ಮಾತನ್ನು ನಾನು ಅಪಾದಿಸುತ್ತೇನೆ. ಅದಕ್ಕೆ ಮೊಟ್ಟ ಮೊದಲ ಕೆಲಸ ಸರ್ಕಾರ ಏನು ಮಾಡಬೇಕೆಂದರೆ ಇವತ್ತಿನ ದಿವಸ ಅಧ್ಯಕ್ಷರೇ, ತಾವು ಅವರಿಗೆ ಡೈರೆಕ್ಷನ್ ಕೊಡಬೇಕು. ಈ ಅಧಿಕಾರಿಗಳು ಯಾರು ನೇರವಾಗಿ ಫೈರಿಂಗ್ ಮಾಡಿದ್ದಾರೆ ಅವರ ಮೇಲೆ ಮೊದಲು ಸೆಕ್ಷನ್ 302ರ ಕೆಳಗೆ ಕೇಸ್ ರಿಜಿಸ್ಟರ್ ಮಾಡಬೇಕು ಮತ್ತು ಯಾರು ಇಂಜೂರ್ ಆಗಿದ್ದಾರೆ ಅವರಿಗೆ ತೊಂದರೆ ಆದ ಕಾರಣ ಸೆಕ್ಷನ್ 307ರ ಮೇಲೆ ಕೇಸ್ ಅವರ ಮೇಲೆ ಮಾಡಿ attempt to murder ಎಂದು ಕೇಸನ್ನು ರಿಜಿಸ್ಟರ್ ಮಾಡಿ

ಮೊದಲು ಅವರಿಗೆ ಒಳಗೆ ಹಾಕಬೇಕು. ಈ ಕೆಲಸ ಮಾಡದೇ ಹೋದರೆ ನೀವು ಇಲ್ಲಿರುವುದಕ್ಕೆ ಲಾಯಕ್ ಇಲ್ಲ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇವತ್ತು ನೀವು ಅವರು ಮಾಡಿದಂತಹ ಇಂತಹ ಕೆಟ್ಟ ಕೃತ್ಯಕ್ಕೆ ಸಪೋರ್ಟ್ ಮಾಡಿ ಮಾತನಾಡುತ್ತೀರಿ, ಹೇಳಿಕೆಗಳನ್ನು ಕೊಡುತ್ತೀರಿ ಎಂದರೆ ನಾನು ಏನು ಹೇಳಬೇಕು, ಇದು ನಿವ್ವಳವಾಗಿ ಅಲ್ಲಿನ ಚುನಾವಣೆ ಗೆಲ್ಲಬೇಕು ಎನ್ನುವ ದೃಷ್ಟಿಯಿಂದ ಈ ಫೈರಿಂಗ್ ಮಾಡಿಸಿದ್ದು ಎನ್ನತಕ್ಕಂತಹ ಮಾತನ್ನು ನಾನು ಹೇಳುತ್ತೇನೆ. ರಾಮನಗರ ಚುನಾವಣೆಯಲ್ಲಿ by hook or crook, ಯಾವುದೇ ರೀತಿ ಗೆಲ್ಲಬೇಕು ಎನ್ನತಕ್ಕಂತಹ ದೃಷ್ಟಿಯಿಂದ ಅಲ್ಲಿರತಕ್ಕಂತಹ ಪಾರ್ಲಿಮೆಂಟ್ ಸದಸ್ಯರು ಅವರ ಸಂಗಡಿಗರು ಅವರ ಒತ್ತಾಯದ ಮೇರೆ ಇವತ್ತಿನ ದಿವಸ ಪೋಲಿಸ್‌ನವರು ಈ ಕೆಲಸ ಮಾಡಿ ನೇರವಾಗಿ ಕೊಲೆ ಮಾಡತಕ್ಕಂತಹ ಪ್ರಯತ್ನ ಮಾಡಿದ್ದೀರಿ, ಈ ಆಪಾದನೆಯನ್ನು ನಾನು ಮಾಡುತ್ತಿದ್ದೇನೆ. ನಾನು ಬಹಳ ಜವಾಬ್ದಾರಿಯಿಂದ ಮಾಡುತ್ತಿದ್ದೇನೆ. ಎನ್ನುವ ಮಾತನ್ನು ನಾನು ಹೇಳುತ್ತೇನೆ. ಪಾರ್ಲಿಮೆಂಟ್ ಮೆಂಬರ್ ಇಲ್ಲ ಅದಕ್ಕಾಗಿ ಅವರ ಹೆಸರು ತೆಗೆದುಕೊಳ್ಳುವುದಕ್ಕಿಂತ ಏಕೆ ಹೇಳಬೇಕಾಯಿತು ಎಂದರೆ, ಅವರು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ, ಈ ಘಟನೆಗೆ ಸಂಬಂಧಪಟ್ಟಂತೆ ಅವರು ಒಂದು ಸ್ವತಃ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ನನ್ನ ಕೈವಾಡ ಇದರಲ್ಲಿ ಇಲ್ಲ, ಇದನ್ನು ಕಾಂಗ್ರೆಸ್‌ನವರು ಮಾಡಿಸಿದ್ದು ಇಂತಹ ಮೆಂಬರ್ ಮಾಡಿಸಿದ್ದು ಎನ್ನತಕ್ಕಂತಹ ಹೆಸರನ್ನೂ ಕೂಡ ಅವರು ಹೇಳಿದ್ದಾರೆ. ಈ ಘಟನೆಗೆ ನೇರವಾಗಿ ಅವರು ಸ್ಟೇಟ್‌ಮೆಂಟ್ ಕೊಟ್ಟ ಮೇಲೆ ನಾನು ಹೇಳಬೇಕಾಗುತ್ತದೆ. ಇವತ್ತಿನ ದಿವಸ ನಾನು ಹೀಗೆ ಹೇಳಲಿಲ್ಲ ಎಂದು ನೇರವಾಗಿ ಅವರೇ ಡಿಫೆಂಡ್ ಮಾಡಿಕೊಂಡಿದ್ದಾರೆ, ಕಾಂಗ್ರೆಸ್‌ನವರೇ ಈ ಚುನಾವಣೆ ಮುಂದಕ್ಕೆ ಹಾಕುವುದಕ್ಕೋಸ್ಕರ ಇದನ್ನು ಮಾಡಿಸಿದ್ದಾರೆ ಎನ್ನುವ ಮಾತು...

ಶ್ರೀ ಎಲ್.ಆರ್. ಶಿವರಾಮೇಗೌಡ:- ಸದಸ್ಯರು ಇಲ್ಲಿ ಇಲ್ಲದೆ ಇರತಕ್ಕಂತಹವರ ಹೆಸರು ಹೇಳುವ ಅಗತ್ಯವಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸದಸ್ಯರೇ ಹೋಗಿ ಖುದ್ದಾಗಿ ಕುಳಿತು ಅವರೇ ಪ್ರೆಸ್ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆಂದರೆ, ಇದೆಲ್ಲಾ ಸುಳ್ಳು ಎಂದು ಹೇಳುವುದೇ? ಯಾವುದೋ ಒಂದು ಪತ್ರಿಕೆಯಲ್ಲಿ ಬಂದರೆ ನಾನು ಸರಿ ಎಂದು ಹೇಳುತ್ತೇನೆ.

ಅಧ್ಯಕ್ಷರು:- ನೀವು ಹೇಳುವುದು ನಿಜ ಇರಬಹುದು, ನಾನು ಏನು ಹೇಳುತ್ತೇನೆ ಎಂದರೆ, ಇಲ್ಲಿ ಅವರು ಸದನದಲ್ಲಿ ಇಲ್ಲ ಅದಕ್ಕೋಸ್ಕರ ಹೇಳುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೆ, ಅವರು ಹೇಳಿಕೆ ಕೊಟ್ಟಿದ್ದು, ಇದೆಲ್ಲವೂ ಕೂಡ ಮುಖ್ಯಮಂತ್ರಿಗಳಿಗೂ ಗೊತ್ತಿದೆ, ಹೋಮ್ ಡಿಪಾರ್ಟ್‌ಮೆಂಟ್‌ನವರಿಗೂ ಕೂಡ ಗೊತ್ತಿದೆ. ಬಹುಶಃ ಅವರೆಲ್ಲಾ ಸಮರ್ಥನೆ ಮಾಡಿಕೊಳ್ಳುತ್ತಾರೆ. ಅದು ಯಾವ ರೀತಿಯಾಗಿ ಡಿಫೆಂಡ್ ಮಾಡುತ್ತಾರೆ ನೋಡೋಣ. ಏಕೆಂದರೆ ಯಾರ ಕೈಯಿಂದಲೋ ಮಾಡಿಸುವುದಕ್ಕೆ ನೀವು ಪ್ರೋತ್ಸಾಹ ಕೊಟ್ಟ ಮೇಲೆ....

ಶ್ರೀ ಹೆಚ್.ಎನ್. ನಂಜೇಗೌಡ:- ವಾಟಾಳ್‌ರವರಿಗೆ ಒಂದು ಸಂಶಯ, ಈ ಸದನದಲ್ಲಿ ಇಲ್ಲದೆ ಇರುವವರು ಹೊರಗಡೆ ಹಿಡಿದುಕೊಂಡು ನನಗೆ ಒದ್ದರೆ ಅವರ ಹೆಸರು ಹೇಳುವುದು ಬೇಡವೇ?

ಶ್ರೀ ವಾಟಾಳ್ ನಾಗರಾಜ್:- ಈ ಸದನದಲ್ಲಿ ಇದ್ದರೆ ಇರುವವರು ಹೆಸರು ಹೇಳಬಾರದು ಎನ್ನತಕ್ಕಂಥದ್ದನ್ನು ಮೊದಲಿನಿಂದಲೂ ಹೇಳುತ್ತಿದ್ದಾರೆ. ಬಾಗಿಲಿನಲ್ಲಿ ನಾನು ಮೆಟ್ಟಿಲು ಹತ್ತಿ ಬರುವಾಗ ನನಗೆ ಇಬ್ಬರು ಹಿಡಿದು ಹೊಡೆದರು. ಅವರು ಯಾರೂ ಈ ಸದನದಲ್ಲಿ ಇಲ್ಲ. ಅವರು ಯಾರು ಹೊಡೆಯಲಿಲ್ಲವೆಂದು ನಾನು ಸುಮ್ಮನೆ ಕುಳಿತುಕೊಳ್ಳಲೇ? ಅವರ ಹೆಸರು ಹೇಳಬಾರದೇ?

ಅಧ್ಯಕ್ಷರು:- ಅವರು ನಿಮಗೆ ಹೊಡೆದರೆ ನೀವು ಹಾಗೇ ಕೆಳಗೆ ಇಳಿದು ಪೋಲಿಸ್ ಸ್ಟೇಷನ್‌ನಲ್ಲಿ ಕಂಪ್ಲೇಂಟ್ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್:- ಕಂಪ್ಲೇಂಟ್ ಕೊಡುವುದು ಬೇರೆ; ಅವರ ಮೇಲೆ ನೀವು ಕಂಪ್ಲೇಂಟ್ ಕೊಡುವುದು ಬೇರೆ, ಆದರೆ ಒಬ್ಬ ಸದಸ್ಯನಿಗೆ ಅಪಾಯವಾಗಿದೆ, ಇಂತಹವರು ನನಗೆ ಹೊಡೆದಿದ್ದಾರೆಂದು ಯಾರ ಹೆಸರು ಹೇಳಬಾರದೇ?

ಶ್ರೀ ಸಿದ್ದರಾಮಯ್ಯ:- ಕಂಪ್ಲೇಂಟಿನಲ್ಲಿ ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್:- ಈ ಸಭೆಯನ್ನು ಇಷ್ಟು ಮಡಿವಂತಿಕೆ ಮಾಡಬೇಡಿ. ಮಡಿವಂತಿಕೆ ಮಾಡಿ ಈಗಾಗಲೆ ಇದರ ಹಣೆಬರಹ ಹೀಗಾಗಿದೆ. ನಿಯಮಾವಳಿಗಳನ್ನು ನಿಮಗೆ ಬೇಕಾದಾಗ ಬಿಚ್ಚುತ್ತೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈ ರೀತಿಯಾಗಿ ಅದಕ್ಕೆ ಪ್ರಚೋದನೆಯನ್ನು ನೀಡತಕ್ಕಂತಹವರು ಅವರೇ ಹೇಳಿಕೆಯನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಆ ಹೆಸರನ್ನು ಪ್ರಸ್ತಾಪ ಮಾಡಬೇಕಾಗಿದೆಯೇ ಹೊರತಾಗಿ ಅವರು ಹೇಳದೆ ಹೋಗಿದ್ದರೆ, ಈ ಪ್ರಶ್ನೆ ಬರುತ್ತಿರಲಿಲ್ಲ. ಆದರೂ ಕೂಡ ನಾನು ಕೇಳುತ್ತೇನೆ, ಈ ಮಾತುಗಳು ಅವರ ಬಾಯಿಂದ ಬಂದಿದ್ದು ಏಕೆ, ಒಂದು ವೇಳೆ ಅವರೇ ನೇರವಾಗಿ ಸಂಬಂಧ ಇಲ್ಲ ಅವರು ಚುನಾವಣೆಗೆ ನಿಂತಿಲ್ಲ, ಅಂದಾಗ ಇವೆಲ್ಲವೂ ಕೂಡ ಇತರೆಯವರು ಮಾಡಿಸುತ್ತಿದ್ದಾರೆ, ಕಾಂಗ್ರೆಸ್‌ನವರು ಮಾಡಿಸುತ್ತಿದ್ದಾರೆ, ಇಂತಹ ಸದಸ್ಯರು ಮಾಡಿಸುತ್ತಿದ್ದಾರೆ, ಎನ್ನತಕ್ಕಂತಹ ಮಾತನ್ನು ಹೇಳಿ, ಇವತ್ತಿನ ದಿವಸ ನೇರವಾಗಿ ಅವರೇ ಇದಕ್ಕೆ ಪ್ರಚೋದನೆ ನೀಡಿದ್ದಾರೆ ಎನ್ನತಕ್ಕಂತಹ ಮಾತನ್ನು ಕೂಡ ನಾನು ಸ್ಪಷ್ಟವಾಗಿ ಇವತ್ತು ಹೇಳಬೇಕಾಗುತ್ತದೆ. ಸರ್ಕಾರದ ಕುಮ್ಮಕ್ಕು ಇಲ್ಲದೇ ಹೋಗಿದ್ದರೆ, ಸರ್ಕಾರದ ಪ್ರೋತ್ಸಾಹ ಇಲ್ಲದೇ ಹೋಗಿದ್ದರೆ ಯಾವ ಪೋಲೀಸ್ ಅಧಿಕಾರಿಯೂ ಸಹ ಈ ರೀತಿಯಾಗಿ ವರ್ತನೆ ಮಾಡುತ್ತಿರಲಿಲ್ಲ. ಇಂತಹ ಇನ್ನೋಸೆಂಟ್ ಜನರ ಮೇಲೆ ಗೋಲಿಬಾರ್ ಮಾಡಿ ಅವರನ್ನು ಕೊಲೆ ಮಾಡುತ್ತಿರಲಿಲ್ಲ. ಇದಕ್ಕೆ ಸಂಪೂರ್ಣವಾಗಿ ಸರ್ಕಾರದವರು ಜವಾಬ್ದಾರಿ ಹೊತ್ತುಕೊಳ್ಳಬೇಕಾಗುತ್ತದೆ. ನಾನು ಈಗಾಗಲೇ ಹೇಳಿದೆ ಇದು ಬಹುಶಃ ಅಲ್ಲಿ ನಡೆದಂತಹ ಒಂದು ಚುನಾವಣೆ ವಾತಾವರಣ ಏನು ಇತ್ತು, ಆ ವಾತಾವರಣ ನೋಡಿಕೊಂಡೇ ಇವರಿಗೆ ಹೆದರಿಕೆ ಹುಟ್ಟಿ ಈ ರೀತಿಯಾಗಿ ಮಾಡಿಸಿದ್ದಾರೆ ಎನ್ನುವ ಮಾತನ್ನು ನಾನು ಹೇಳಬೇಕಾಗುತ್ತದೆ.

ಶ್ರೀ ಎಲ್.ಆರ್. ಶಿವರಾಮೇಗೌಡ:- ಈ ವಾತಾವರಣವನ್ನು ನೋಡಿದರೆ ಕಾಂಗ್ರೆಸ್‌ನವರೇ ಮೊದಲು ಸೋಲುತ್ತಾರೆಂಬ ಭಯದಿಂದ ಮಾಡಿಸಿದ್ದಾರೆಂದು ನನಗನ್ನಿಸುತ್ತದೆ.

ಶ್ರೀ ಸಿ.ಚನ್ನಿಗಪ್ಪ:- ಚುನಾವಣೆಯಲ್ಲಿ ಗೆಲ್ಲಬೇಕೆಂದು ಜನರನ್ನು ಏಕೆ ಪ್ರಚೋದಿಸಿರಬಾರದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾವು ಮಾಡಿದ್ದೋ, ಅಥವಾ ನೀವು ಮಾಡಿದ್ದೋ ಎಂಬುದು ಜನರಿಗೆ ಗೊತ್ತಿದೆ, ಆದರೆ ಯಾವ ರೀತಿಯಿಂದ ಈ ಘಟನೆ ನಡೆದಿದೆ ಅದರ ಹಿನ್ನೆಲೆ ನೋಡಿದಾಗ ಅದಕ್ಕೆ ಪ್ರೋತ್ಸಾಹ ಕೊಟ್ಟ ಜನ ನೋಡಿದಾಗ ನಾವು ನೇರವಾಗಿ ಹೇಳಬೇಕಾಗುತ್ತದೆ. ಸರ್ಕಾರ ಇದರಲ್ಲಿ ಪೋಲಿಸರನ್ನು ಉಪಯೋಗ ಮಾಡಿ ಆ ಚುನಾವಣೆಯಲ್ಲಿ ತಾವು ಗೆದ್ದು ಬರಬೇಕೆಂಬ ದೃಷ್ಟಿಯಿಂದ ಅಲ್ಲಿ ಜನರನ್ನು ಭಯಭೀತರನ್ನಾಗಿ ಮಾಡಿ ಯಾವುದೇ ರೀತಿಯಲ್ಲಿ ಆತಂಕ ಉಂಟು ಮಾಡಬೇಕೆಂಬ ದೃಷ್ಟಿಯಿಂದ ಇದು ಮಾಡಿದ್ದಾರೆ ಎನ್ನತಕ್ಕಂಥದ್ದು ನೇರವಾಗಿ ಅಪಾದನೆ ಕೂಡ ಮಾಡುತ್ತಿದ್ದೇನೆ. ತಮಗೆ ಆಶ್ಚರ್ಯ ಆಗಬಹುದು, ಸುಮಾರು ಕೇಸ್‌ಗಳಲ್ಲಿ ಎಫ್.ಐ.ಆರ್. ರಿಜಿಸ್ಟರ್ ಮಾಡಿದ್ದಾರೆ. ಎಷ್ಟು ಸೆಕ್ಷನ್‌ನಲ್ಲಿ ಮಾಡಬೇಕು. ಸೆಕ್ಷನ್ 143, 147 148, 341, 353, 332, 333, 427, 435, 337, 338 ಜೊತೆಗೆ 149 ಹೀಗೆ ಸುಮಾರು ಎರಡು ಸಾವಿರ ಜನರು, ಸುಮಾರು ಐವತ್ತರಿಂದ ನೂರು ಜನರು, ಅಂದರೆ ಐವತ್ತರಿಂದ ನೂರು ಜನರ ಹೆಸರನ್ನು ಕೊಟ್ಟು ಎರಡು ಸಾವಿರ ಜನ ಇನ್ವಾಲ್ ಆಗಿದ್ದಾರೆ ಎಂದು ಒಂದು ಎಫ್.ಐ.ಆರ್.ನಲ್ಲಿ ಅವರು ಹೇಳಿದ್ದಾರೆ. ಇಂತಹ ಹತ್ತೊಂಭತ್ತು ಎಫ್.ಐ.ಆರ್. ಹಾಕಿದ್ದಾರೆ. ಪ್ರತಿ ಎಫ್.ಐ.ಆರ್.ನಲ್ಲಿ ಕನಿಷ್ಟ ಐವತ್ತರಿಂದ ನೂರು ಜನರು. ಅಂದರೆ ಹತ್ತೊಂಭತ್ತು ಎಫ್.ಐ.ಆರ್.ನಲ್ಲಿ ಸುಮಾರು ಎರಡು ಸಾವಿರ ಜನ ಆಗುತ್ತಾರೆ. ಈ ರೀತಿಯಾಗಿ ಎರಡು ಸಾವಿರ ಜನ ಅಲ್ಲಿದ್ದಾರೆಂದು ಹೇಳಿ ಕೇಸ್ ಹಾಕಬೇಕಾದರೆ ಯಾವ ಆಧಾರದ ಮೇಲೆ ಹಾಕಿದ್ದೀರಿ? ಯಾರು ಅವರು? ಅವರ ಹೆಸರನ್ನೂ ಕೂಡ ಕೊಟ್ಟಿದ್ದೀರಿ; ಅದರಲ್ಲಿ ಅನೇಕರು ಪಂಚಾಯತ್ ಸದಸ್ಯರು, ತಾಲ್ಲೂಕು ಪಂಚಾಯತ್ ಸದಸ್ಯರು, ಮಾಜಿ ಸದಸ್ಯರುಗಳು, ಚೇರ್ಮನ್ನರು ಇದ್ದಾರೆ ಎಂದು ಹೇಳಿದ್ದೀರಿ. ಆದರೆ ಅವರು ಆ ಊರಿನವರೇ ಇಲ್ಲ, ಅದಕ್ಕೆ ಸಂಬಂಧವೂ ಇಲ್ಲ ಅವರು ಇರುವುದು ಇಪ್ಪತ್ತು ಕಿ.ಮೀ.ದೂರದಲ್ಲಿ. ಆದರೆ ಅವರ ಹೆಸರನ್ನು ಎಫ್.ಐ.ಆರ್.ನಲ್ಲಿ ಹಾಕಿ ಅವರು ಹೆಜ್ಜಾಲ ಗ್ರಾಮದಲ್ಲಿದ್ದರು ಎನ್ನತಕ್ಕಂಥ ಮಾತನ್ನು ಇವೊತ್ತು ಹೇಳಿದ್ದಾರೆ. ಇವರೆಲ್ಲರೂ ಕೂಡ ಬಸ್ಸಿಗೆ ಕಲ್ಲು ಹೊಡೆಯುವುದರಲ್ಲಿ, ಜನರಿಗೆ ಕಲ್ಲು ಹೊಡೆಯುವುದರಲ್ಲಿ ಅಮಾಯಕರನ್ನು ಕಲ್ಲು ಹೊಡೆದು ಇವೊತ್ತಿನದಿವಸ ಕಾನೂನನ್ನು ಮುರಿದಿದ್ದಾರೆ, ಕಾನೂನನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಕೊಲಿ ಮಾಡುವುದಕ್ಕೆ ಪ್ರಯತ್ನಪಟ್ಟಿದ್ದಾರೆ ಎಂದು ಇವರ ವಿರುದ್ಧ ಕೇಸ್ ರಿಜಿಸ್ಟರ್ ಮಾಡಿದ್ದಾರೆ. ಅಂದು ಅಲ್ಲಿ ಸುಮಾರು ನಲವತ್ತು ಜನ ಪೋಲಿಸ್ ಅಧಿಕಾರಿಗಳು ಹಾಜರಿದ್ದರು, ಆದರೆ ಅದರಲ್ಲಿ ಎಷ್ಟು ಜನ ಪೋಲಿಸರು ಆಸ್ಪತ್ರೆಗೆ ದಾಖಲು ಆಗಿದ್ದಾರೆಂದು ನಾನು ಕೇಳುತ್ತೇನೆ? ಮಾಗಡಿಯ ಸಬ್ ಇನ್‌ಸ್ಪೆಕ್ಟರ್, ಸರ್ಕಲ್ ಇನ್‌ಸ್ಪೆಕ್ಟರ್ ಕನಕಪುರ ಹಾಗೂ ಹಾರೋಹಳ್ಳಿಯ ಪೋಲಿಸ್ ಸ್ಟೇಷನ್‌ನವರು ಈ ರೀತಿಯಾಗಿ ಬೆಂಗಳೂರು ಗ್ರಾಮಾಂತರದಲ್ಲಿದ್ದ ಕೆಲವು ಸಬ್ ಇನ್‌ಸ್ಪೆಕ್ಟರ್ ಹಾಗೂ ಸರ್ಕಲ್ ಇನ್‌ಸ್ಪೆಕ್ಟರ್‌ಸ್ ಹೀಗೆ ನಲವತ್ತು ಐವತ್ತು ಪೋಲಿಸರ ಹೆಸರನ್ನು ನೀವೇ ಕೊಟ್ಟಿದ್ದೀರಿ. ಅದೂ ಅಲ್ಲದೆ ರಿಸರ್ವ್ ಪೋಲಿಸ್

ಹಾಗೂ ಸ್ಪೆಷಲ್ ರಿಸರ್ವ್ ಪೋಲೀಸರನ್ನೂ ಕೂಡ ಅಲ್ಲಿ ಕರೆಸಿದ್ದೆವು ಎನ್ನತಕ್ಕಂತಹ ಮಾತನ್ನು ಸ್ಪಷ್ಟವಾಗಿ ತಾವು ಎಫ್.ಐ.ಆರ್.ನಲ್ಲಿ ತಿಳಿಸಿದ್ದೀರಿ. ಆದರೆ ಅಲ್ಲಿದ್ದ ಸ್ಪೆಷಲ್ ಪೋಲಿಸ್ ಫೋರ್ಸ್ ಹಾಗೂ ಪೋಲಿಸ್ ಅಧಿಕಾರಿಗಳು ಯಾರಿಗೂ ಕೂಡ ಒಂದೂ ಗಾಯ ಆಗಿಲ್ಲ. ಎಲ್ಲಿಯಾದರೂ ಪೋಲಿಸರ ಒಂದು ಹನಿ ರಕ್ತ ಬಿದ್ದಿದೆ ಅಥವಾ ಪೋಲಿಸರಿಗೆ ವಿಕ್ಟೋರಿಯಾ ಆಸ್ಪತ್ರೆ ಅಥವಾ ಬೋರಿಂಗ್ ಆಸ್ಪತ್ರೆ ಅಥವಾ ಸರ್ಕಾರಿ ಆಸ್ಪತ್ರೆ ಹೀಗೆ ಯಾವುದಾದರೊಂದು ಆಸ್ಪತ್ರೆಯಲ್ಲಿ ಪೆಟ್ಟಾಗಿದ್ದಕ್ಕಾಗಿ ದಾಖಲಾಗಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳಿ. ಅಥವಾ ಪೋಲಿಸರ ಮೇಲೆ ಅವರು ಅನ್ಯಾಯ ಮಾಡಿದ್ದಾರೆ, ಪೋಲಿಸರ ಮೇಲೆ ಅವರು ದಬ್ಬಾಳಿಕೆ ಮಾಡಿದ್ದಾರೆ, ಪೋಲಿಸರಿಗೆ ಅವರು ಹೊಡೆದರು ಪೋಲಿಸರ ಕೊಲೆಯಾಯಿತು ಅದಕ್ಕಾಗಿ ನಾವು ಕಾನೂನು ವ್ಯವಸ್ಥೆಯನ್ನು ಸುವ್ಯವಸ್ಥೆಯಲ್ಲಿ ಇಡುವುದಕ್ಕೋಸ್ಕರ ಫೈರ್ ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ನೀವು ಹೇಳಿದ್ದರೆ ಜನ ಒಪ್ಪಬಹುದು. ಆದರೆ ಒಬ್ಬ ಪೋಲಿಸರಿಗೂ ತೊಂದರೆ ಇಲ್ಲ, ಒಬ್ಬ ಸಬ್ ಇನ್‌ಸ್ಪೆಕ್ಟರ್‌ಗೆ ತೊಂದರೆ ಇಲ್ಲ, ನಗು ನಗುತ್ತಾ ಅವರು ಶೂಟ್ ಮಾಡುತ್ತಿದ್ದಾರೆ, ಬೇಟೆ ಆಡಿದ ಹಾಗೆ ಅವರು ಅವರು ಬೇಟೆಯಾಡುತ್ತಿದ್ದಾರೆ. ಅಂತಹವರ ಮೇಲೆ ಹಲ್ಲೆ ಮಾಡುವುದಕ್ಕೆ ಅಲ್ಲಿಯ ವರ್ಕರ್ಸ್ ಹಾಗೂ ಅಕ್ಕಪಕ್ಕದ ಹಳ್ಳಿಯ ಜನ ಹೋಗಿದ್ದರು. ಅದಕ್ಕಾಗಿ ಈ ಗುಂಡನ್ನು ಹಾಕತಕ್ಕಂತ ಪ್ರಮೇಯ ಬಂತು ಎನ್ನತಕ್ಕಂಥ ಮಾತನ್ನು ನಮ್ಮಲ್ಲಿ ಹೇಳುತ್ತಿದ್ದೀರಿ, ಇದು ಯಾರಿಗೆ? ಯಾವ ಪುರುಷಾರ್ಥಕ್ಕಾಗಿ ಇಂತಹ ಎಫ್.ಐ.ಆರ್. ಹಾಕಿಸಿದ್ದೀರಿ? ಅಂದರೆ ಕೇವಲ ಈ ಚುನಾವಣೆಯಲ್ಲಿ ಈ ಜನ ಪ್ರಚಾರಕ್ಕೆ ಹೋಗಬಾರದು, ಅವರು ಮನೆಯ ಹೊರಗೆ ಬರಬಾರದು, ಹೆದರಿಕೆಯಿಂದ ಮನೆಯೊಳಗೇ ಇರಬೇಕು, ಸರ್ಕಾರದವರು ಹಾಗೂ ಪೋಲೀಸ್‌ನವರು ಎಷ್ಟು ಕೇಸ್ ಹಾಕಿದ್ದಾರೆ, ನಾಳೆ ನಾವು ಏನಾದರೂ ನಿರ್ಭೀತಿಯಿಂದ ಪ್ರಜಾಪ್ರಭುತ್ವದಲ್ಲಿ ಪ್ರಚಾರಕ್ಕೆ ನಾವು ಹೋದರೆ ನಮಗೆ ರಕ್ಷಣೆ ಇಲ್ಲ ಎನ್ನತಕ್ಕಂಥ ಒಂದು ಭಯದ ವಾತಾವರಣವನ್ನು ಸೃಷ್ಟಿ ಮಾಡತಕ್ಕಂಥದ್ದು ಯಾರು ಮಾಡಿದ್ದಾರೆ ಎಂದರೆ ಅದು ನಿಮ್ಮ ಸರ್ಕಾರ ಮಾಡಿದೆ, ನೀವು ಅದಕ್ಕೆ ಸಹಕಾರ ನೀಡಿದ್ದೀರಿ ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇಲ್ಲದಿದ್ದರೆ ಈ ಹತ್ತೊಂಭತ್ತು ಎಫ್.ಐ.ಆರ್.ಗಳು, ಎರಡು ಸಾವಿರ ಜನರ ಮೇಲೆ ಕೇಸ್ ಹಾಕತಕ್ಕಂಥದ್ದು, ಪ್ರತಿಯೊಂದು ಎಫ್.ಐ.ಆರ್.ನಲ್ಲಿ ನೂರು ಜನಕ್ಕಿಂತ ಹೆಚ್ಚಾಗಿ ಜನರ ಹೆಸರು ನಮೂದು ಮಾಡತಕ್ಕಂಥ ಪ್ರಮೇಯ ಉದ್ಭವಿಸುತ್ತಿರಲಿಲ್ಲ. ನಾನು ಕೇಳುತ್ತೇನೆ ಯಾರು ಗುರುತು ಹಿಡಿದರು ಎರಡು ಸಾವಿರ ಜನ ಎಂದು, ನಿಮ್ಮ ವರ್ಕರ್ಸ್ ಹೇಳಿದರೇ, ಅದು ಗೊತ್ತಾಗಬೇಕಲ್ಲಾ ಅಂದಾಗ ಇದು ರಾಜಕೀಯ ದುರುದ್ದೇಶದಿಂದ ಮತ್ತು ಒಂದು ಭಯದ ವಾತಾವರಣವನ್ನು ಅಲ್ಲಿ ನಿರ್ಮಾಣ ಮಾಡಬೇಕು ಎನ್ನತಕ್ಕಂಥ ಏಕೈಕ ದೃಷ್ಟಿಯಿಂದ ಈ ಒಂದು ಫೈರಿಂಗ್ ನಡೆದಿದೆ ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟಪಡಿಸಬೇಕಾಗುತ್ತದೆ. ಇದು ಇಷ್ಟಕ್ಕೆ ನಿಂತಿಲ್ಲ, ಅನೇಕ ಕಾರ್ಯಕರ್ತರ ಮನೆಗೆ ನಮ್ಮ ಕಾಂಗ್ರೆಸ್ ಪಕ್ಷದ ಕೆಲವು ಕಾರ್ಯಕರ್ತರ ಮನೆಗಳಿಗೆ ಪೋಲಿಸ್ ಸಬ್ ಇನ್‌ಸ್ಪೆಕ್ಟರ್ ಹೋಗಿ ನಿಮ್ಮ ಯಜಮಾನರು ಎಲ್ಲಿ ಎಂದು ಕೇಳಿದಾಗ ಅವರು ಮನೆಯಲ್ಲಿ ಇಲ್ಲ ಎಂದು ಹೇಳಿದ ಮೇಲೆ, ನೋಡಿ ಅವರಿಗೆ ಹೇಳಿ ಅವರು ಏನಾದರೂ ಇಂಥ ಪಕ್ಷಕ್ಕೆ ಕೆಲಸ ಮಾಡಿದರೆ ಇಂಥ ಉಮೇದುವಾರರಿಗೆ ಕೆಲಸ ಮಾಡಿದರೆ ಅಥವಾ ಇಂಥವರಿಗೆ ಭೇಟಿ ಆದರೆ ಅವರಿಗೆ ಪೋಲಿಸ್ ಸ್ಟೇಷನ್‌ನಲ್ಲಿ ಲಾಕಪ್‌ನಲ್ಲಿ ಹಾಕುತ್ತೇವೆ; ಎನ್ನತಕ್ಕಂಥ ವಾರ್ನಿಂಗ್ ಕೂಡ

ಶ್ರೀ ಅಶೋಕ್‌ಕುಮಾರ್ ಎನ್ನತಕ್ಕಂಥ ಸಬ್ ಇನ್‌ಸ್ಪೆಕ್ಟರ್ ಕೊಟ್ಟು ಬಂದಿದ್ದಾರೆ. ಅವರಿಗೆ ಕೆಲಸ ಪಾವಗಡದಲ್ಲಿ ಇದೆ. ಆದರೆ ಓ.ಓ.ಡಿ ಮೇಲೆ ಇಲ್ಲಿ ಎಲೆಕ್ಷನ್‌ಗೋಸ್ಕರ ಡೆಪ್ಯೂಟೇಷನ್ ಮೇಲೆ ಇರಿಸಿಕೊಂಡಿದ್ದಾರೆ. ಬಂದೋಬಸ್ತ್‌ಗೋಸ್ಕರ ತಮಗೆ ಬೇಕಾದಂಥ ಪೋಲಿಸ್ ಆಫೀಸರ್ಸ್‌ನ್ನು ಅವರು ಹಾಕಿಸಿಕೊಂಡಿದ್ದಾರೆ. ಅಲ್ಲಿನ ಎಸ್‌ಪಿಯವರಾದ ಶ್ರೀ ನಾರಾಯಣಗೌಡರು ಅವರಿಗೆ ಬೇಕಾಗಿತ್ತು. ಅವರನ್ನು ಹಾಕಿಸಿಕೊಂಡಿದ್ದಾರೆ ಪರವಾಗಿಲ್ಲ. ಇನ್ನೊಬ್ಬರು ಅವರ ಸಂಬಂಧಿಕರು ಎಂದು ನನಗೆ ಗೊತ್ತಾಗಿದೆ. ಅವರೆಂದರೆ ಶ್ರೀ ಬೆಟ್ಟೇಗೌಡರು, ಅವರೂ ಕೂಡ ಅಲ್ಲಿ ಸರ್ಕಲ್ ಇನ್‌ಸ್ಪೆಕ್ಟರ್.

ಶ್ರೀ ಎಲ್.ಆರ್. ಶಿವರಾಮೇಗೌಡ:- ಬೆಟ್ಟೇಗೌಡರು ಎಲ್ಲರಿಗೂ ಸಂಬಂಧಿಕರೇ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸ್ವಲ್ಪ ಇರಿ. ನಿಮಗೂ ಸಂಬಂಧಿಕರು ಎಂದು ನನಗೆ ಗೊತ್ತಿರಲಿಲ್ಲ. ಆದರೆ ಅಲ್ಲಿ ಹೇಳಿದ್ದುದು ನಾನು ಹೇಳುತ್ತಿದ್ದೇನೆ. ನನ್ನದೇನೂ ಇಲ್ಲ. ಅವರು ನಿಮಗೂ ಸಂಬಂಧಿಕರು ಎಂದರೆ ಒಳ್ಳೆಯದೇ ಆಯಿತು ಮುಂದೆ ಯಾವಾಗಲಾದರೂ ನಿಮ್ಮ ಕೆಲಸಕ್ಕೆ ಬರುತ್ತಾರೆ.

ಅಧ್ಯಕ್ಷರು:- ತೊಂದರೆ ಏನು ಎಂದರೆ ಕೆಲವು ಆಫೀಸರ್ಸ್, ಸಬ್ ಇನ್‌ಸ್ಪೆಕ್ಟರ್ಸ್ ಯಾವ ಸರ್ಕಾರ ಇರುತ್ತದೆ ಅವರ ಆಶೀರ್ವಾದ ಪಡೆದುಕೊಳ್ಳುವುದು, ಈಗ ಯಾರು ವಿರೋಧ ಪಕ್ಷದಲ್ಲಿ ಇರುತ್ತಾರೆ ಅವರ ಮೇಲೆ ಬೀಳೋದು, ಅವರ ಮನೆಗಳಿಗೆ ನುಗ್ಗುವುದು, ಈಗ ನೀವು ವಿರೋಧ ಪಕ್ಷದಲ್ಲಿದ್ದೀರಿ ನಿಮ್ಮ ಕಾರ್ಯಕರ್ತರ ಮನೆಗಳಿಗೆ ನುಗ್ಗುವುದು; ಅವರು ವಿರೋಧ ಪಕ್ಷದಲ್ಲಿದ್ದಾಗ ಅವರ ಕಾರ್ಯಕರ್ತರ ಮೇಲೆ ನುಗ್ಗುವುದು. ಈ ರೀತಿಯಾಗಿ ಅವರಿಗೆ ರೆಗ್ಯೂಲರ್ ಟ್ರೇನಿಂಗ್ ಬಿಟ್ಟು ಈ ಟ್ರೇನಿಂಗೇ ಆಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಆದರೆ ಇವರ ಟ್ರೈನಿಂಗ್ ಅತಿಯಾದ ಟ್ರೈನಿಂಗ್ ಆಗಿದೆ.

MR. SPEAKER:- They have improved over you...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಯಾವ ಕಾಲದಲ್ಲಿಯೂ ಕೂಡ ಪೋಲಿಸರು ನೇರವಾಗಿ ಶೂಟ್ ಮಾಡತಕ್ಕಂಥ ಅಥವಾ ಅನಾವಶ್ಯಕವಾಗಿ ಮಾಡತಕ್ಕಂಥದ್ದಿಲ್ಲ. ನಿಮ್ಮ ಕಣ್ಣು ಎದುರುಗಡೆ ಅಂದರೆ ಹೆದ್ದಾರಿಯಲ್ಲಿ ಪೋಲಿಸರು ಇದ್ದರೆ ಎರಡು ಮೂರು ಕಿ.ಮೀ. ಮೇಲೆ ನೀವು ನಿಂತಿದ್ದೀರಿ, ಬಹಳ ಮಹತ್ವವಾದಂಥ ಕ್ಷೇತ್ರದಲ್ಲಿ ಅದು ನಡೆಯುತ್ತಿದೆ, ಅದು ಜನಸಾಮಾನ್ಯ ಮತಕ್ಷೇತ್ರವಲ್ಲ, ಮಾನ್ಯ ಪ್ರಧಾನಿಯವರು ಬಿಟ್ಟು ಹೋದಂಥ ಮತಕ್ಷೇತ್ರವದು, ಇಂತಹ ಒಂದು ಮತಕ್ಷೇತ್ರದಲ್ಲಿ ಈ ಘಟನೆ ನಡೆಯುತ್ತಿದೆ ಎಂದರೆ ನಾವು ಏನು ಹೇಳಬೇಕೋ ಏನೋ? ಬೇರೆಯವರ ಕ್ಷೇತ್ರದಲ್ಲಿ ಅಥವಾ ಯಾವುದೋ ಒಂದು ಮತಕ್ಷೇತ್ರದಲ್ಲಿ ಇದು ನಡೆದಿದೆ ಅಥವಾ ಪೋಲಿಸ್ ಫೋರ್ಸ್ ಹೋಗುವುದಕ್ಕೆ ಅವಕಾಶ ಇರಲಿಲ್ಲ ಎಂದು ಹೇಳಿದರೆ ಒಪ್ಪಬಹುದು. ಆದರೆ ಇದು ನಡೆದ ಘಟನೆಯಿಂದ ಮೂವತ್ತು ಕಿ.ಮೀ. ದೂರದಲ್ಲಿ ರಾಜಧಾನಿ ಇದೆ, ಅಲ್ಲಿ ಮುಖ್ಯಮಂತ್ರಿಗಳು ಇರುತ್ತಾರೆ ಗೃಹ ಇಲಾಖೆಯ ಕಾರ್ಯದರ್ಶಿಗಳು ಇರುತ್ತಾರೆ, ಡೈರೆಕ್ಟರ್ ಜನರಲ್ ಆಫ್ ಪೋಲಿಸ್,

ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೋಲಿಸ್ ಎಲ್ಲರೂ ಇರುತ್ತಾರೆ, ಒಂದು ವೇಳೆ ವಾತಾವರಣ ಶಾಂತವಾಗಿದ್ದರೆ ಬರೀ ಒಂದು ಕೂಗು ಹಾಕಿದರೆ ಇಲ್ಲಿ ಕೇಳಿ ಬರುತ್ತದೆ. ಇಂತಹ ಒಂದು ಪರಿಸ್ಥಿತಿ ಇದ್ದಾಗ ಎಲ್ಲಾ ಕಡೆ ಮಾಡುವ ಹಾಗೆ ಇಲ್ಲೂ ಕೂಡ ಮಾಡುತ್ತೀರಿ ಎಂದರೆ ಹೇಗೆ ಇದು ಸೂಕ್ಷ್ಮವಾದಂಥ ಸ್ಥಳ ಎಂದಮೇಲೆ, ಮಾನ್ಯ ಪ್ರಧಾನಿಯವರ ಮತಕ್ಷೇತ್ರ ಎಂದಮೇಲೆ ನೀವು ಸ್ವಲ್ಪ ಹೆಚ್ಚು ಜಾಗ್ರತೆ ವಹಿಸಬೇಕಾಗಿತ್ತು. ಮಾನ್ಯ ಪ್ರಧಾನಿಯವರು ಬಿಟ್ಟು ಹೋದಂಥ ಮತಕ್ಷೇತ್ರದಲ್ಲಿ ಚುನಾವಣೆ ನಡೆಯುತ್ತಿದೆ ಅಂದಮೇಲೆ ಪೋಲೀಸ್ ಮತ್ತು ಸರ್ಕಾರ ಸ್ವಲ್ಪ ಹೆಚ್ಚು ಜಾಗೃತೆ ವಹಿಸಿ ಕೆಲಸ ಮಾಡುವಂಥದ್ದು ಬಿಟ್ಟು ಯಾರೋ ಹೇಳಿದರು ಗುಂಡು ಹಾಕಿ ಎಂದು, ತಕ್ಷಣ ಸಿಕ್ಕವರಿಗೆ, ಅಡಿಯಲ್ಲಿದ್ದವವರಿಗೆ ಮರಿಗಳಿಗೆ, ಎಲ್ಲರಿಗೂ ಇವೊತ್ತು ಗುಂಡು ಹಾಕಿ ಕೊಲೆ ಮಾಡುವಂಥ ಒಂದು ಅಮಾನುಷ ಕೃತ್ಯವನ್ನು ಮಾಡಿರಬೇಕಾಗಿದ್ದರೆ ನಾವು ಏನು ಹೇಳಬೇಕು? ಇದು ಹಿಂದಿನಿಂದ ನಡೆದುಕೊಂಡು ಬಂದಿದೆ ಎಂದು ಸಮರ್ಥನೆ ಮಾಡಿಕೊಂಡು ಹೋದರೆ ನೀವು ಬಹಳ ಹಗುರವಾಗಿ ತೆಗೆದುಕೊಂಡ ಹಾಗಾಗುತ್ತದೆ. ಇದಕ್ಕೆ ಸರ್ಕಾರದ ಪ್ರೋತ್ಸಾಹ ಇದೆ ಎಂದು ನಾನು ಪದೇ ಪದೇ ಏತಕ್ಕೆ ಹೇಳುತ್ತಿದ್ದೇನೆಂದರೆ ಇದಕ್ಕೆ ಹೇಳಿಕೆಗಳೂ ಕೂಡ ಪೂರಕವಾಗಿ ಬಂದಿದೆ. ಇದಕ್ಕೆ ಸಪೋರ್ಟ್ ಮಾಡಿ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಒಂದು ಹೇಳಿಕೆ ಕೊಟ್ಟಿದ್ದಾರೆ, ಇದಕ್ಕೆ ಸಪೋರ್ಟ್ ಮಾಡಿ ಲೋಕಸಭಾ ಸದಸ್ಯರೂ ಕೂಡ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಇದು ಇಷ್ಟಕ್ಕೆ ನಿಂತಿಲ್ಲ, ಅಧಿಕಾರಿಗಳು ಕೂಡ ಅವರ ಆಜ್ಞೆಯನ್ನು ಶಿರಸಾವಹಿಸಿ ಪಾಲನೆ ಮಾಡಿಕೊಂಡು ಎಲ್ಲೆಲ್ಲಿ ಕಾರ್ಯಕರ್ತರಿದ್ದಾರೆ ಅವರ ಮನೆಗಳಿಗೆ ಹೋಗಿ ಅವರನ್ನು ಹೆದರಿಸತಕ್ಕಂಥ ಪ್ರಯತ್ನ ಮಾಡಿದ್ದಾರೆ. ಅವರ ಮನೆಗಳಿಗೆ ನುಗ್ಗತಕ್ಕಂಥ ಪ್ರಯತ್ನ ಮಾಡಿದ್ದಾರೆ. ಕಾರ್ಯಕರ್ತರ ಮನೆಗಳಿಗೆ ಹೋಗಿ ನಿಮ್ಮ ಯಜಮಾನರು ಒಂದು ವೇಳೆ ನಮಗೆ ಬಂದು ಭೇಟಿಯಾಗಲಿಲ್ಲ ಅಂದರೆ ಅವರಿಗೆ ಒಳಗೆ ಹಾಕುತ್ತೇವೆ ಎನ್ನತಕ್ಕಂಥ ಮಾತನ್ನು ಕೂಡ ಹೇಳಿದ್ದಾರೆ. ನೀವು ಅಂತಹ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದು ಬಿಟ್ಟು, ಅವರನ್ನು ಕೆಲಸದಿಂದ ವಜಾ ಮಾಡುವುದು ಬಿಟ್ಟು ಅಂತಹವರಿಗೆ ಶಭಾಸ್‌ಗಿರಿ ಕೊಟ್ಟು ನಮ್ಮ ಪೋಲಿಸರು ಒಳ್ಳೆಯ ಕೆಲಸ ಮಾಡಿದ್ದಾರೆ, ಮೂರು ಜನರನ್ನು ಹೊಡೆದಿದ್ದಾರೆ ಇನ್ನೂ ಕೆಲವು ಹೆಣ ಬೀಳಬೇಕಾಗಿತ್ತು ಎನ್ನತಕ್ಕಂಥ ಮಾತನ್ನು....

ಅಧ್ಯಕ್ಷರು:- ಮಾನ್ಯ ಪುಟ್ಟಣ್ಣಯ್ಯನವರು ಒಂದು ಚೀಟಿಯನ್ನು ಕಳುಹಿಸಿದ್ದಾರೆ, ಎಲ್ಲರ ಮಾತನ್ನು ನಾವು ಕೇಳಬೇಕು ಎಂದು ಮಾಡಿದ್ದೇವೆ ಆದರೆ ಮುಕ್ಕಾಲು ಗಂಟೆ ಊಟಕ್ಕೆ ಬಿಡಿ ಎಂದು ಕೇಳಿದ್ದಾರೆ. ಆದರೆ ನಾವು ಬಹಳ ಗಂಭೀರವಾದಂಥ ವಿಷಯವನ್ನು ಇಲ್ಲಿ ಚರ್ಚೆ ಮಾಡುತ್ತಿದ್ದೇವೆ ಆದಕಾರಣ ಊಟಕ್ಕೆ ಅವಕಾಶ ಇಲ್ಲ ಎಂದು ನಾನು ಹೇಳಿದ್ದೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾತನಾಡಬೇಕಾದರೆ ಸ್ವಲ್ಪ ಶಕ್ತಿ ಬೇಕಲ್ಲಾ. ಅದರಲ್ಲೂ ಪೋಲೀಸರ ವಿಷಯ ಮಾತನಾಡಬೇಕಾದರೆ ಬಹಳ ಜಾಸ್ತಿ ಶಕ್ತಿಯಿಂದ ಮಾತನಾಡಬೇಕಾಗುತ್ತದೆ.

ಶ್ರೀ ಹೆಚ್.ಡಿ. ಬಸವರಾಜು:- ಗಂಭೀರವಾಗಿ ಮಾತನ್ನು ಕೇಳಬಹುದು. ಆದರೆ ಹೊಟ್ಟೆ ಹಸಿದಿದೆಯಲ್ಲಾ. ಸ್ವಲ್ಪ ಊಟ ಮಾಡಿ ಬಂದರೆ ಇನ್ನೂ ಹೆಚ್ಚು ಗಂಭೀರವಾಗಿ ಕೇಳಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನನ್ನದೇನೂ ಅಭ್ಯಂತರ ಇಲ್ಲ, ನಾನು ತಯಾರಿದ್ದೇನೆ ಆದರೆ ಅಧ್ಯಕ್ಷರು ಇಲ್ಲ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು:- ತಾವು ಮಾತನಾಡಿ ಆಮೇಲೆ ನೋಡೋಣ.

ಶ್ರೀ ವಾಟಾಳ್ ನಾಗರಾಜ್:- ಇಷ್ಟು ಹೊತ್ತಿಗೆ ಊಟಕ್ಕೆ ಸಭೆಯನ್ನು ಮುಂದೂಡಬೇಕಾಗಿತ್ತು. ಇನ್ನೂ ಮುಂದೂಡದಿರುವುದನ್ನು ನೋಡಿದರೆ ಬಹುಶಃ ನಿಮ್ಮದು ಊಟ ಮುಗಿದಿರಬಹುದು. ಆದ್ದರಿಂದ ಶಿಸ್ತಿನಿಂದ ಕುಳಿತಿರುವುದನ್ನು ನೋಡಿದರೆ ನಮಗೆ ಸ್ವಲ್ಪ ಅನುಮಾನ ಬರುತ್ತಿದೆ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು):- ಊಟ ಮಾಡದೇ ಕುಳಿತುಕೊಳ್ಳುವುದು ಒಂದು ಶಿಸ್ತೇ?

ಶ್ರೀ ಹೆಚ್.ಡಿ. ಬಸವರಾಜು:- ಊಟಕ್ಕೆ ಅಡ್ಜರ್ನ್ ಮಾಡಿ. ಊಟದ ನಂತರ ಮಾನ್ಯ ಖರ್ಗೆಯವರು ವಿಷಯವನ್ನು ಮುಂದುವರೆಸಲಿ.

ಅಧ್ಯಕ್ಷರು:- ಎಲ್ಲರ ಅಭಿಪ್ರಾಯವೂ ಒಂದೇ ಆಗಿರುವುದರಿಂದ ಈಗ ಸಭೆಯನ್ನು ಮುಂದೂಡುತ್ತಿದ್ದೇನೆ. ಸದನವು ಮತ್ತೆ ಮಧ್ಯಾಹ್ನ 2-30ಕ್ಕೆ ಸೇರುವುದು.

(ಸದನವು ಮಧ್ಯಾಹ್ನ 1-51ಕ್ಕೆ ಮುಂದೂಡಿ ಪುನಃ ಮಧ್ಯಾಹ್ನ 2 ಗಂಟೆ 30 ನಿಮಿಷಕ್ಕೆ ಸೇರಲು ನಿರ್ಧರಿಸಿತು).

(ಸದನವು ಮಧ್ಯಾಹ್ನ 2-50 ಗಂಟೆಗೆ ಸಮಾವೇಶಗೊಂಡಿತು)

ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿ) ಅವರು ಪೀಠವನ್ನಲಂಕರಿಸಿದ್ದರು)

ವಿಷಯ:- ಹೆಜ್ಜಾಲದಲ್ಲಿ ನಡೆದ ಗೋಲಿಬಾರ್ ಬಗ್ಗೆ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಬೇಜಾರು ಆಗಿ ಹೋಗಿದ್ದಾರೆಯೋ ಅಥವಾ ಪುರುಸೊತ್ತು ಇಲ್ಲವೆಂದು ಹೋದರೋ ಏನೋ ಗೊತ್ತಾಗಿಲ್ಲ. ಈಗ ಸದನದಲ್ಲಿ ಗೃಹರಕ್ಷಕ ದಳದ ರಾಜ್ಯ ಸಚಿವರು ಇದ್ದಾರೆ. ಆದರೆ ಈಗ ಏನಾಗಿದೆಯೆಂದರೆ ಅವರಿಗೆ ಯಾವ ಅಧಿಕಾರವನ್ನೂ ಕೂಡ ಕೊಟ್ಟಿಲ್ಲ. ಅಂದರೆ ತಪ್ಪು ಮಾಡಿದ ಅಧಿಕಾರಿ ಮೇಲೆ ಡಿಸಿಪ್ಲಿನರಿ ಆ್ಯಕ್ಷನ್ ತೆಗೆದುಕೊಳ್ಳತಕ್ಕಂಥ ಅಧಿಕಾರವೂ ಅವರ ಹತ್ತಿರ ಇಲ್ಲ. ಈ ಗೃಹರಕ್ಷಕದಳ ರಾಜ್ಯ ಸಚಿವರಿಂದ ಹೆಚ್ಚು ಎಂದರೆ ಇಲ್ಲಿಂದ ಬರೆದುಕೊಂಡು ಹೋಗಿ ಪುನಃ ಗೃಹ ಸಚಿವರಿಗೆ ಹೇಳಬೇಕು. ಇದರಿಂದೇನಾಗುತ್ತದೆ ಎಂದರೆ ಈ ವಿಷಯದ ಮಹತ್ವವನ್ನು ನಾವು ಕಳೆದುಕೊಂಡ ಹಾಗೆ ಆಗುತ್ತದೆ. ಮತ್ತು ಇಂತಹ ಒಂದು ಪ್ರಾಮುಖ್ಯವಾದಂಥ ವಿಷಯವನ್ನು ನಾವು ಪ್ರಸ್ತಾಪ ಮಾಡುವಾಗ ಮಾನ್ಯ ಮುಖ್ಯಮಂತ್ರಿಗಳು

ಇಲ್ಲ, ಉಪ ಮುಖ್ಯಮಂತ್ರಿಗಳು ಇಲ್ಲ, ಹಾಗೆಯೇ ಹಿಂದಿನ ಸಾಲಿನಲ್ಲೂ ಸಹ ಯಾರೂ ಕೂಡ ಮಂತ್ರಿಗಳೂ ಇಲ್ಲ. ಇವತ್ತು ಅಧಿವೇಶನದ ಮೊದಲನೇ ದಿವಸವಾಗಿದೆ. ಇದನ್ನು ನೋಡಿ ನಮಗೆ ನಾವೇ ನಾಚಿಕೆಪಟ್ಟುಕೊಳ್ಳಬೇಕು. ಈ ರೀತಿಯಾದರೆ ಏಕೆ ನಾವೆಲ್ಲರೂ ಕೂಡ ಇಲ್ಲಿಗೆ ಬರಬೇಕು? ಮೊದಲನೇ ದಿವಸವೇ ಮುಂದಿನ ಸಾಲಿನಲ್ಲಿ ಯಾರೂ ಮಂತ್ರಿಗಳು ಇಲ್ಲವೆಂದರೆ ಇಲ್ಲಿ ಸರ್ಕಾರ ಇದೆಯೋ ಅಥವಾ ಇಲ್ಲವೋ?... ನಾನು ಇಲ್ಲಿ ನಿಜ ಹೇಳುತ್ತಿದ್ದೇನೆ, ಅದು ಏನೆಂದರೆ ಈ ಮಂತ್ರಿಗಳು ಕೇವಲ ಅಧಿಕಾವರನ್ನು ಎಂಜಾಯ್ ಮಾಡುವುದಕ್ಕೆ ಇದ್ದಾರೆಯೇ ಹೊರತು ತಮ್ಮ ಕರ್ತವ್ಯವನ್ನು ನಿರ್ವಹಣೆ ಮಾಡಬೇಕು ಎನ್ನತಕ್ಕಂಥದ್ದು ಅವರಿಗೆ ಇಲ್ಲ. ತಾವು ಬಿಸಿನೆಸ್ ಅಡ್‌ವೈಸರಿ ಕಮಿಟಿಯಲ್ಲಿ ಹೇಳಿದಿರಿ: **ಉಗುಳಿದಿರಿ,** ಆದರೂ ಇವರು ಸದನಕ್ಕೆ ಬಾರದೆ ಕುಳಿತುಕೊಳ್ಳುತ್ತಾರೆ, ಇವರಿಗೆ ಏನು ಮಾಡಬೇಕು? **ಉಗುಳಿದರೂ** ಕೂಡ ಅದನ್ನು ಒರಸಿಕೊಂಡು ಮುಂದೆ ಹೋಗುತ್ತಾರೆ....

ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ):- ಮಾನ್ಯ ಉಪಾಧ್ಯಕ್ಷರೆ, **ಉಗುಳುವುದು ಎನ್ನುವ ಪದವನ್ನು ಕಡತದಿಂದ ತೆಗೆಯಬೇಕು.** ಈ ಪದವನ್ನು ಪಾರ್ಲಿಮೆಂಟರಿ ನಡವಳಿಕೆಯಲ್ಲಿ ಉಪಯೋಗಿಸುವ ಪದವಲ್ಲವೆಂದು ತೆಗೆಯಬೇಕು....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಉಪಾಧ್ಯಕ್ಷರೆ, ಇದರ ಅರ್ಥ ಏನೆಂದರೆ ವಿಷಯವನ್ನು ಗಂಭೀರವಾಗಿ ಸರ್ಕಾರ ತೆಗೆದುಕೊಳ್ಳುತ್ತಿಲ್ಲ. ಈಗ ಪ್ರಜಾಪ್ರಭುತ್ವದಲ್ಲಿ ಏನು ಮಾಡಬಹುದು ಎಂದರೆ ಆರ್ಗ್ಯುಮೆಂಟ್ ಮಾಡಬಹುದು, ನಮ್ಮ ಹೇಳಿಕೆಗಳನ್ನು ಹೇಳಬಹುದು, ಇದಕ್ಕೆ ಸ್ಪಂದಿಸಿ ಮುಖ್ಯಮಂತ್ರಿಗಳು, ಮಂತ್ರಿಗಳು ಇಲ್ಲಿ ಇರುತ್ತಾರೆ ಎನ್ನತಕ್ಕಂಥದ್ದು ಇರುತ್ತದೆ. ಆದರೆ ಇಲ್ಲಿ ಮಂತ್ರಿಗಳೇ ಇಲ್ಲದಿದ್ದರೆ ಇದರ ಅರ್ಥ ಏನು?

ಉಪಾಧ್ಯಕ್ಷರು:- ನೀವು ಏನು ಭಾಷಣ ಮಾಡಬೇಕೆಂದು ಎದ್ದು ನಿಂತಿದ್ದೀರಿ ಅದನ್ನು ಪ್ರಾರಂಭ ಮಾಡಿ. ನಾನು ಸಚಿವರುಗಳನ್ನು ಕರೆಸುತ್ತೇನೆ. ಇಲ್ಲಿ ಗೃಹರಕ್ಷಕ ದಳದ ರಾಜ್ಯಸಚಿವರು ಇದ್ದಾರೆ....

ಶ್ರೀ ವೈ.ರಾಮಕೃಷ್ಣ (ಆನೇಕಲ್):- ಮಾನ್ಯ ಉಪಾಧ್ಯಕ್ಷರೆ, ಚುನಾವಣೆ ಫಲಿತಾಂಶ ಬಂದಮೇಲೆ ಈ ಸರ್ಕಾರ ಡೀಮಾರಲೈಸ್ ಆದ ಹಾಗೆ ಕಾಣಿಸುತ್ತದೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಧಿವೇಶನ ಪ್ರಾರಂಭವಾದ ಮೇಲೆ ಈ ಸ್ಥಿತಿಯಲ್ಲಿ ಡೀಮಾರಲೈಸ್ ಆಗುವುದು ಅವಶ್ಯಕತೆಯಿಲ್ಲ. ಮುಖ ಮುಚ್ಚಿಕೊಂಡು 3ನೇ ಮಹಡಿಯಲ್ಲಿ ಕುಳಿತುಕೊಂಡರೆ ಏನೂ ಪ್ರಯೋಜನವಾಗುವುದಿಲ್ಲ. He has to face it. ಮೊನ್ನೆ ನಡೆದ ಚುನಾವಣೆ ಸಂದರ್ಭದಲ್ಲಿ ನಿಮ್ಮ ಪಕ್ಷ ಗೆಲ್ಲಬಹುದೆಂದು ಹೇಳಿ ಗೋಲಿಬಾರ್‌ನ್ನು ನೀವು ಮಾಡಿಸಿದಿರಿ. ಆದರಲ್ಲಿ ನೀವು ವಿಫಲರಾದಿರಿ. ಜನರು ಮ್ಯಾನ್ಡೇಟ್ ಕೊಟ್ಟರು. ಜನರು ಮ್ಯಾನ್ಡೇಟ್ ಕೊಟ್ಟಮೇಲೆ ಆ ಮ್ಯಾನ್ಡೇಟ್‌ಗೆ ತಲೆಬಾಗಿ ನೀವು ಆಡಳಿತದಲ್ಲಿ ಏನು ಸುಧಾರಣೆ ಮಾಡಬೇಕೋ ಅದನ್ನು ಮಾಡಬೇಕಾಗುತ್ತದೆ. ಇನ್ನು ಮುಂದಾದರೂ ಈ ರೀತಿಯಾದಂಥ ವರ್ತನೆಯನ್ನು ತಾವು ಮಾಡಬಾರದು ಎನ್ನತಕ್ಕಂಥದ್ದರ ಬಗ್ಗೆ ಯೋಚನೆ ಮಾಡಬೇಕು.

ಉಪಾಧ್ಯಕ್ಷರು:- ತಾವೆಲ್ಲಾ ಹಿರಿಯ ಸದಸ್ಯರಿದ್ದೀರಿ. ವಿರೋಧ ಪಕ್ಷದ ನಾಯಕರು ಮಾತನಾಡಲಿ. ತಾವೆಲ್ಲಾ ದಯಮಾಡಿ ಕುಳಿತುಕೊಳ್ಳಿ. ಹೇಳಿ ಕಳುಹಿಸಿದ್ದೇನೆ ಮಂತ್ರಿಗಳು ಬರುತ್ತಾರೆ.

ಶ್ರೀ ವೈ. ರಾಮಕೃಷ್ಣ:- ಇದು ಸದನವೇ ಅಥವಾ ಏನು? ಅಧಿವೇಶನ ನಡೆಯುವಾಗ ಆಡಳಿತ ಪಕ್ಷದವರು ಯಾರೂ ಇಲ್ಲ. ನಮಗೆ ಕೇಳುವ ಹಕ್ಕು ಇದೆ. ಅದನ್ನು ತಡೆಯುವ ಹಕ್ಕು ಇಲ್ಲ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾನು ಇಲ್ಲಿಗೆ ಬಂದು ಸುಮಾರು 20-25 ವರ್ಷ ಮುಗಿಯುತ್ತಾ ಇದೆ. ಈ ರೀತಿಯಾಗಿ ಯಾವ ಸರ್ಕಾರವೂ ಕೂಡ ನಡೆದುಕೊಂಡಿಲ್ಲ. ಇದು ಅನ್ಯಾಯದ ಪರಮಾವಧಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಮಾನ್ಯ ಉಪಾಧ್ಯಕ್ಷರೆ, ಈಗ ಪೋಲಿಸ್ ಇಲಾಖೆಯ ಡಿಸಿಪಿಯವರು ಇಲ್ಲ. ಪೋಲಿಸ್ ಇಲಾಖೆಯವರು ಯಾರೂ ಇಲ್ಲ. ಪೋಲಿಸ್ ಇಲಾಖೆಯ ಬಗ್ಗೆ ಚರ್ಚೆ ಆಗುತ್ತಿರುವಾಗ, ಆ ಇಲಾಖೆಯವರು ಇರಬೇಕು.

ಉಪಾಧ್ಯಕ್ಷರು:- ಮಂತ್ರಿಗಳನ್ನು ಕರೆಯುವುದಕ್ಕೆ ಕಳುಹಿಸಿದ್ದೇನೆ. ಅವರು ಬರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನೀವು ಅವರಿಗೆ ಛೀಮಾರಿ ಹಾಕಬೇಕು. ಕೊನೆಯ ಪಕ್ಷ ಮೊದಲನೆ ದಿವಸವಾದರೂ ಕೂಡ ಅವರ ಕರ್ತವ್ಯವನ್ನು ಅವರು ನಿರ್ವಹಣೆ ಮಾಡುತ್ತಿದ್ದಾರೆಯೇ? ಇಲ್ಲಿ ಮುಖ್ಯಮಂತ್ರಿಗಳೂ ಇಲ್ಲ.

ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ):- ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಮಹತ್ತರವಾದಂಥ ವಿಚಾರ ಪ್ರಸ್ತಾವ ಆಗುತ್ತಿದೆ. ಇಂತಹ ಸಂದರ್ಭದಲ್ಲಿ ಆಡಳಿತ ಪಕ್ಷದ ಆಸನಗಳಲ್ಲಿ ಯಾರೂ ಸಹ ಇಲ್ಲವೆಂದರೆ ಇಂತಹ ಗಂಭೀರವಾದಂಥ ವಿಷಯಕ್ಕೆ ಅವರು ಯಾವ ರೀತಿ ಆದ್ಯತೆ ಕೊಡುತ್ತಿದ್ದಾರೆ ಎಂದು ಗೊತ್ತಾಗುತ್ತದೆ. ಅವರು ಯಾವ ರೀತಿ ಇದಕ್ಕೆ ಮಾನ್ಯತೆ ಕೊಡುತ್ತಾರೆ ಎಂಬುದನ್ನು ನೋಡಬಹುದು. ಆಡಳಿತ ಪಕ್ಷದವರು ಇಂತಹ ಗಂಭೀರವಾದ ವಿಷಯಕ್ಕೆ ಏಕೆ ಮಾನ್ಯತೆ ಕೊಡುತ್ತಿಲ್ಲ? ದಯಮಾಡಿ ತಾವುಗಳು ಯೋಚನೆ ಮಾಡಬೇಕು. ಇದು ಗಂಭೀರವಾದ ವಿಷಯವಲ್ಲವೇ? ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾವನೆ ಮಾಡುತ್ತಿದ್ದಾರೆ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಮತ್ತು ನಾವು ಹೇಳುವುದು ಇದ್ದೇ ಇದೆ. ಆದ್ದರಿಂದ ವಿರೋಧ ಪಕ್ಷದ ನಾಯಕರು ಹೇಳಿದ್ದನ್ನು ಕೇಳುವುದಕ್ಕೆ ಇರಬೇಕಾದವರೇ ಇಲ್ಲಿ ಇಲ್ಲ.

(ಗೊಂದಲ)

ಉಪಾಧ್ಯಕ್ಷರು:- ತಿಮ್ಮಪ್ಪನವರೇ ತಾವು ಕುಳಿತುಕೊಳ್ಳಿ, ಮುಖ್ಯಮಂತ್ರಿಗಳು ಮಾತನಾಡುವಾಗ, ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಮಧ್ಯದಲ್ಲಿ ಮಾತನಾಡಬಾರದು. ನಿಮ್ಮ ಪಕ್ಷದವರೇ ಮಾತನಾಡುವಾಗ ನೀವು ಹೀಗೆ ಮಾಡಿದರೆ ಹೇಗೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಉಪಾಧ್ಯಕ್ಷರೆ, ನನಗೆ ಏನು ಅನಿಸುತ್ತಿದೆಯೆಂದರೆ ಟರ್ಮ್ಸ್ ಆಫ್ ರೆಫರೆನ್ಸ್‌ನ್ನು ಏನಾದರೂ ಬದಲಾವಣೆ ಮಾಡಬೇಕೆಂದಾದರೆ ಇಲ್ಲಿ ಒಬ್ಬರೂ ಸಹ ಕ್ಯಾಬಿನೆಟ್ ದರ್ಜೆಯ ಸಚಿವರು ಇಲ್ಲ. ಆಡಳಿತ ಪಕ್ಷದ ಸಾಲಿನಲ್ಲಿ ಮಾತನಾಡಿಕೊಂಡು ಇರುವ ಇಬ್ಬರು ಸಚಿವರು ಸೇರಿ ಒಂದು ಮತ್ತು ಇನ್ನೊಬ್ಬ ಸಚಿವರು ಅರ್ಧ ಒಟ್ಟು ಒಂದೂವರೆ ಇದ್ದಾರೆ...

ಶ್ರೀ ವಿ. ಸೋಮಣ್ಣ (ಬಂಧಿಖಾನೆ ಮತ್ತು ಗೃಹ ರಕ್ಷಕದಳ ರಾಜ್ಯ ಸಚಿವರು):- ವಿರೋಧ ಪಕ್ಷದ ನಾಯಕರು ನನ್ನನ್ನು ಏಕೆ ಅರ್ಧ ಮಾಡುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅರ್ಧ ಅಂದರೆ ಆ ದೃಷ್ಟಿಯಿಂದ ಹೇಳಲಿಲ್ಲ. ಮಾನ್ಯ ಸೋಮಣ್ಣನವರನ್ನು ಅವರ ಸಬ್ಜೆಕ್ಟ್ ಇದ್ದಾಗ ಮಾತ್ರ ಕ್ಯಾಬಿನೆಟ್‌ಗೆ ಕರೆಯುತ್ತಾರೆಯೇ ವಿನಃ ಬೇರೆ ಸಮಯದಲ್ಲಿ ಅವರನ್ನು ಕರೆಯುವುದಿಲ್ಲ. ಈ ವಿಷಯಕ್ಕೆ ಸಂಬಂಧಪಟ್ಟಹಾಗೆ ನಾಳೆ ಟರ್ಮ್ಸ್ ಆಫ್ ರೆಫರೆನ್ಸ್‌ಗೆ ಅಮೆಂಡ್ ಮಾಡಬಹುದು. ಇದು ನೇರವಾಗಿ ಗೃಹ ಸಚಿವರಿಗೆ ಸಂಬಂಧಿಸಿದ ವಿಷಯವಾದ್ದರಿಂದ ಮತ್ತು ಕ್ಯಾಬಿನೆಟ್‌ಗೆ ಸಂಬಂಧಿಸಿದ ಕಾರಣ ಕ್ಯಾಬಿನೆಟ್ ಸಚಿವರು ಇರಬೇಕಾಗಿತ್ತು. ಮಾನ್ಯ ಉದಾಸಿಯವರನ್ನು ಸ್ವಾಭಾವಿಕವಾಗಿ ಕ್ಯಾಬಿನೆಟ್ ಕಮಿಟಿಗೆ ಕರೆಯುತ್ತಾರೆ. ಆದರೆ ಅವರು ಹೊರಗೆ ಹೋಗಿದ್ದರು. ಈಗತಾನೇ ಅವರು ಸದನದ ಒಳಗೆ ಬಂದಿದ್ದಾರೆ.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ):- ಮಾನ್ಯ ಉಪಾಧ್ಯಕ್ಷರೆ, ಈ ಸದನವನ್ನು ಈಗ ಮುಂದೂಡಿ. ಮಂತ್ರಿಗಳಿಗೆ ಪುರಸೊತ್ತು ಆದಾಗ ಈ ಸದನವನ್ನು ಕರೆಯಿರಿ. ಏಕೆಂದರೆ ಇಂತಹ ಮುಖ್ಯವಾದ ವಿಷಯವನ್ನು ಚರ್ಚಿಸುತ್ತಿರುವಾಗ ಮಂತ್ರಿಗಳೇ ಇಲ್ಲದಿದ್ದರೆ ಹೇಗೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಂತ್ರಿಗಳನ್ನು ನಾವು ಅತ್ತು ಕರೆದು ಕರೆಸಿಕೊಳ್ಳಬೇಕಾಗಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ):- ಮಾನ್ಯ ಉಪಾಧ್ಯಕ್ಷರೆ, ಮಂತ್ರಿಗಳು ಇಲ್ಲದಿದ್ದ ಮೇಲೆ ನಾವು ಚರ್ಚೆ ಮಾಡುವುದಾದರೂ ಯಾರ ಜೊತೆಗೆ? ಆದ್ದರಿಂದ ಸದನವನ್ನು ಮುಂದಕ್ಕೆ ಹಾಕಿ.

ಉಪಾಧ್ಯಕ್ಷರು:- ನಾಯಕರು ಮಾತನಾಡುವಾಗ ನೀವು ಎದ್ದುನಿಂತುಕೊಂಡು ಮಾತನಾಡುವುದು ಬೇಡ. ತಿಮ್ಮಪ್ಪನವರೇ, ತಾವು ಕುಳಿತುಕೊಳ್ಳಿ.

ಶ್ರೀ ಟಿ.ಎಂ. ಚಂದ್ರಶೇಖರಯ್ಯ (ಸಿರಗುಪ್ಪ):- ಮಾನ್ಯ ಉಪಾಧ್ಯಕ್ಷರೆ, ಸಂಬಂಧಪಟ್ಟ ಇಲಾಖೆಯ ಮಂತ್ರಿಗಳು ಇದ್ದಾರೆ. ಆಯಾಯ ಇಲಾಖೆಯ ಮಂತ್ರಿಗಳಿಗೆ ಅವರವರ ಪವರನ್ನು ಅವರಿಗೆ ಕೊಟ್ಟಿದ್ದೇವೆ. ನಮ್ಮ ಸರ್ಕಾರದಲ್ಲಿ ನಿಮ್ಮ ಕಾಂಗ್ರೆಸ್ ಸರ್ಕಾರದಲ್ಲಿ ಇದ್ದ ಹಾಗೆ ಮುಖ್ಯಮಂತ್ರಿಗಳೇ ಆಡಳಿತ ಮಾಡುವುದಿಲ್ಲ. ಕಾಂಗ್ರೆಸ್‌ನವರು ನಮಗೆ ಹೇಳುವ ಅವಶ್ಯಕತೆಯೇನೂ ಇಲ್ಲ. ಸಭೆಯನ್ನು ಮುಂದೂಡುವ ಅವಶ್ಯಕತೆಯಿಲ್ಲ.

ಶ್ರೀ ಟಿ.ಬಿ. ಜಯಚಂದ್ರ:- ಚರ್ಚೆಗಳು ಇನ್ನೂ ಪ್ರಾರಂಭವಾಗಿಲ್ಲ. ಉಪ ಚುನಾವಣೆಯೊಂದಿಗೆ ಎಲ್ಲರೂ ಆ ತೀರ್ಮಾನಕ್ಕೆ ಹೋದರೆ ಹೇಗೆ?

ಉಪಾಧ್ಯಕ್ಷರು:- ಈಗ ಸಂಬಂಧಪಟ್ಟ ಗೃಹ ಸಚಿವರು ಇದ್ದಾರೆ, ಅವರು ಎಲ್ಲವನ್ನೂ ನೋಟ್ ಮಾಡಿಕೊಳ್ಳುತ್ತಾರೆ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ಎಲ್ಲವನ್ನೂ ಹೇಳುತ್ತಾರೆ. ಆದ್ದರಿಂದ ತಾವು ದಯವಿಟ್ಟು ಪ್ರಾರಂಭಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಆ ಕಡೆ ಯಾರಾದರೂ ಇದ್ದರೆ ಮಾತನಾಡಬಹುದು. ಅವರು ನೋಟ್ ಮಾಡಿಕೊಳ್ಳುತ್ತಾರೆ ಎನ್ನುವುದಕ್ಕೆ ಇದು ಏನೂ ಜನರಲ್ ಡಿಸ್ಕ್ಕಷನ್ ಅಲ್ಲ.

ಉಪಾಧ್ಯಕ್ಷರು:- ಈಗ ಮಾನ್ಯ ಎಂ. ಎಸ್. ಪಾಟೀಲರು ಇದ್ದಾರೆ, ಗೃಹ ಸಚಿವರು ಇದ್ದಾರೆ, ಸಂಬಂಧಪಟ್ಟ ಮಂತ್ರಿಗಳು ಇದ್ದಾರೆ ಅವರು ನೋಟ್ ಮಾಡಿಕೊಳ್ಳುತ್ತಾರೆ. ತಾವು ಪ್ರಾರಂಭಮಾಡಿ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಸನ್ಮಾನ್ಯ ಉಪಾಧ್ಯಕ್ಷರೇ...

ಶ್ರೀ ವಿ.ಸೋಮಣ್ಣ:- ಸಗೀರ್ ಅಹಮದ್ ಅವರೇ, ತಾವು ಬರೀ ರಾಮನಗರದ್ದೇ ಹೇಳುತ್ತೀರಿ. ಪಂಜಾಬಿನದ್ದು ಸ್ವಲ್ಪ ತೆಗೆದುಕೊಳ್ಳಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ನಾನು ನನ್ನ ವಾದವನ್ನು ಮುಂದುವರಿಸುತ್ತಿದ್ದೇನೆ, ಆದರೆ ಒಂದು ಮಾತನ್ನು ಕಠೋರವಾಗಿ ಹೇಳಬೇಕಾಗುತ್ತದೆ. ಏಕೆಂದರೆ ಹಿಂದೆಂದೂ ಕೂಡ ಯಾವುದೇ ಒಂದು ವಿಷಯವನ್ನು ವಿರೋಧ ಪಕ್ಷದವರು ಪ್ರಸ್ತಾಪ ಮಾಡಿದಾಗ, ಅದರಲ್ಲೂ ವಿರೋಧ ಪಕ್ಷದ ನಾಯಕರಾಗಲಿ, ಅಥವಾ ಪ್ರಮುಖವಾದಂತಹ ಈ ಕಡೆ ವಿರೋಧ ಪಕ್ಷದವರು ಯಾರಾದರೂ ಮಾತನಾಡಿದಾಗ ಅದನ್ನು ಗಂಭೀರವಾಗಿ ತೆಗೆದುಕೊಂಡು, ಅದಕ್ಕೆ ಉತ್ತರ ಕೊಡತಕ್ಕದ್ದು ಅಥವಾ ಅದಕ್ಕೆ ಪರಿಹಾರ ಕಂಡುಹಿಡಿಯತಕ್ಕದ್ದು ಅಥವಾ ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳತಕ್ಕ ಶಕ್ತಿ ಇರತಕ್ಕ ಮಂತ್ರಿಗಳೂ ಕೂಡ ಇಲ್ಲಿರಬೇಕಾಗುತ್ತದೆ. ಇದು ಜನರಲ್ ಡಿಸ್ಕಷನ್ ಆಗಿದ್ದರೆ ಏನಾದರೂ ಬರೆದುಕೊಂಡು ಉತ್ತರ ಕೊಡುವುದಕ್ಕೆ ಬರುತ್ತಿತ್ತು.

ಉಪಾಧ್ಯಕ್ಷರು:- ಸಂಬಂಧಪಟ್ಟ ಮಂತ್ರಿಗಳು ಇದ್ದಾರಲ್ಲಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾನು ಒಪ್ಪಿಕೊಂಡೆ. ತಾವು ಅವರಿಗೆ ಏನೂ ಅಧಿಕಾರ ಕೊಟ್ಟಿಲ್ಲ, ಅವರು ಏನಿದ್ದರೂ ಮಸೀದಿಗೆ ಇಷ್ಟು, ರಂಜಾನಿಗೆ ಇಷ್ಟು ಎಂದು ಹತ್ತು ರೂಪಾಯಿ, ನೂರು ರೂಪಾಯಿ, ಇನ್ನೂರು ರೂಪಾಯಿ ಕೊಡಬಹುದೇ ಹೊರತು ಆ ದುಡ್ಡನ್ನು ಕಾಡಿ-ಬೇಡಿ ಸಿದ್ಧರಾಮಯ್ಯನವರು ಕೊಟ್ಟರೆ ಹಂಚಬೇಕು. ಇಲ್ಲದಿದ್ದರೆ ಇಲ್ಲ. ಅದಕ್ಕಾಗಿ ನನಗೆ ಅವರ ಬಗ್ಗೆ ಗೌರವ ಇದೆ. ಅವರು ಇದ್ದರೆ ನಾವು ಮಾತನಾಡಬಾರದು ಎಂದು ಅಲ್ಲ. ಆ ಒಂದು ಪಾಯಿಂಟ್ ಆಫ್ ರೆಫರೆನ್ಸ್ ಬಗ್ಗೆ ನಿರ್ಣಯ ತೆಗೆದುಕೊಳ್ಳ ತಕ್ಕ ಕೆಲಸ ಆಗಬೇಕು. ಎಲ್ಲಾ ಪೋಲಿಸ್ ಅಧಿಕಾರಿಗಳು ಇದ್ದಾರಲ್ಲಾ ಆದರಲ್ಲಿ ಒಂದು ಬದಲಾವಣೆ ಮಾಡಿಕೊಡತಕ್ಕ ಮಾತು ಕೊಟ್ಟರೆ ನಾನು ಕುಳಿತುಕೊಳ್ಳುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ರಾಮನಗರದಲ್ಲಿ ದಬ್ಬಾಳಿಕೆ ಮಾಡುವುದಕ್ಕೆ ಹೋಗಿ ಹಗಲೂ ರಾತ್ರಿ ಬೀದಿ ಬೀದಿ ಅಲೆದು ಧೂಳೆಬ್ಬಿಸಿ ಪಜೀತಿಯಾಗಿ ಬಂದು ಕುಳಿತಿದ್ದಾರೆ. ಆದ್ದರಿಂದ ನಾನು ಅವರ ಬಗ್ಗೆ ತಲೆ ಕೆಡಿಸಿಕೊಳ್ಳಬೇಕಾಗಿಲ್ಲ. ನಾನು ಒಂದು ಅತ್ಯಂತ ಗಂಭೀರವಾದ ಪ್ರಶ್ನೆಯನ್ನು ಈಗಾಗಲೇ ಸದನದಲ್ಲಿ ಎತ್ತಿದ್ದೇನೆ. ಇಷ್ಟು ಪ್ರಮುಖವಾದ ವಿಚಾರ ಚರ್ಚೆ ಆಗುವಾಗ ಇಬ್ಬರು ಅರ್ಧ ಮಂತ್ರಿಗಳು ಕುಳಿತಿದ್ದಾರಲ್ಲಾ. ಒಮ್ಮೆ ಚರ್ಚೆ ಆದದ್ದು ಮತ್ತೆ ಆಗಬಾರದೆಂದು ಇಲ್ಲ. ಮಾನ್ಯ ಬಂಧೀಖಾನೆ ಸಚೀವರಾಗಲಿ, ಗೃಹ ಸಚಿವರಾಗಲಿ ಈ ಬಗ್ಗೆ ಉತ್ತರ ಕೊಡತಕ್ಕ ಒಂದು ಹೆಚ್ಚಿನ ಜವಾಬ್ದಾರಿ ಅವರಿಗೆ ಇದೆ ಎಂದು ನಾನು ಅಂದುಕೊಂಡಿದ್ದೇನೆ. ಅವರಿಗೆ ಅಗೌರವ ಮಾಡಬೇಕೆಂಬ ಉದ್ದೇಶ ನನಗೆ ಇಲ್ಲ. ಪ್ರಾಮಾಣಿಕವಾಗಿ ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಇರಬೇಕಾದುದು ಅತ್ಯಂತ ಪ್ರಾಮುಖ್ಯ. ಇದು ಬಹಳ ಗಂಭೀರವಾದ ವಿಚಾರ. ಇವತ್ತು ಪ್ರಪ್ರಥಮವಾಗಿ ಈ ಸದನ ಆರಂಭವಾಗಿದೆ. ಸದನದ ಆರಂಭದ ದಿನ ಇಷ್ಟೊಂದು ಖಾಲಿ ಕುರ್ಚಿಗಳು ಇರುವುದು ನೋಡಿದರೆ ಬಹುಶಃ ನನಗೆ ಅನಿಸುತ್ತದೆ ರಾಮನಗರ ಚುನಾವಣೆ ನಂತರ ಇವರಲ್ಲಿ ಏನಾದರೂ ಎರಡು ಭಾಗವಾಗಿ, ಒಡಕು ಉಂಟಾಗಿ ಪರಿಸ್ಥಿತಿ ಏನಾದರೂ ಬೇರೆ ದಿಕ್ಕಿಗೆ ತಿರುಗಿದೆಯೇ ಎಂದು ಏಕೆಂದರೆ ಡೆಲ್ಲಿಯಿಂದ ಏನಾದರೂ ಹುಕುಂ ಬಂದು ಏನಾದರೂ ದೊಡ್ಡ ಅಪಾಯದ ಅಂಚಿನಲ್ಲಿ ಇದೆಯೇ ಎಂಬುದು ಬಹಳ ದೊಡ್ಡ ಸಮಸ್ಯೆಯಾಗಿದೆ. ಏಕೆಂದರೆ ಇಲ್ಲಿ ಮಂತ್ರಿಗಳು ಬಹಳ ಕಡಿಮೆ ಜನ ಇದ್ದಾರೆ. ಆ ಕಡೆ ಮಂತ್ರಿಗಳೂ ಇಲ್ಲ, ಶಾಸಕರೂ ಇಲ್ಲ, ಇದು ಬಹಳ ಗುರುತರವಾದುದು. ನಾನು ಲಘುವಾಗಿ ಮಾತನಾಡುತ್ತಿಲ್ಲ. ಇದಕ್ಕೆ ನೀವು ಏನು ಕಾರಣ ಕೊಡುತ್ತೀರಿ? ಯಾರು ಕಾರಣ ಕೊಡತಕ್ಕವರು; ನೀವು ಕಾರಣ ಕೊಡುವುದಕ್ಕೆ ಸಾಧ್ಯವಿಲ್ಲ. ಪಾಪ. ನಿಜವಾಗಿ ನಿಮ್ಮ ಬಗ್ಗೆ ನನಗೆ ಅಗೌರವ ಇಲ್ಲ ಇವತ್ತು ಇಡೀ ನೀವು ಕುಳಿತುಕೊಳ್ಳತಕ್ಕ ಎಲ್ಲಾ ಪೀಠಗಳು ಪ್ರೇತ ಕಳೆಯಲ್ಲಿ ಇವೆ, ಇದರ ಉದ್ದೇಶ ಏನು? ಕಾರಣ ಏನು? ರಾಮನಗರ ಚುನಾವಣೆ ಫಲಿತಾಂಶ ಇವತ್ತು ನಿಮ್ಮನ್ನು ಅಲುಗಾಡಿಸಿದೆ ಹೀಗೆ ಅಲುಗಾಡಿಸಿರುವುದರಿಂದ ರಾಜಕೀಯ ಮಿಂಚು ಹೊಡೆದು ಕೇಂದ್ರದಿಂದ ಏನಾದರೂ ಆದೇಶ ಬಂದು ಅದಕ್ಕೆ ಸಭೆ ಸೇರಿದ್ದೀರಾ? ಏನು ನಡೆಯುತ್ತಿದೆ? ಏನು ವಿಚಾರ ಎಂಬುದು ನಮಗೆ ಈಗ ಗೊತ್ತಾಗಬೇಕು. ಇದು ಮೊದಲ ದಿವಸ ಸದನ ಸೇರುತ್ತಿರುವುದು. ಮೊದಲ ದಿವಸವೇ ಸರ್ಕಾರ ಈ ಪರಿಸ್ಥಿತಿ ಆದರೆ ಮುಂದೆ ಏನು? ಆರು ತಿಂಗಳಾದ ಮೇಲೆ ಸೇರಿದೆ. ಈ ಸದನ ಇದಕ್ಕೆ ಉತ್ತರ ಕೊಡತಕ್ಕವರು ಯಾರು? ಸಂಸದೀಯ ಸಚಿವರು ಇದ್ದಾರೆಯೇ ಇಲ್ಲಿ? ಈ ಸದನದ ಹೊಣೆಗಾರಿಕೆ ಹೊತ್ತಿರತಕ್ಕ ಸಂಸದೀಯ ಸಚಿವರು ಬೇಡವೇ? ಸಂಸದೀಯ ಸಚಿವರು ಇಲ್ಲ, ಮುಖ್ಯಮಂತ್ರಿಗಳೂ ಇಲ್ಲ, ಉಪಮುಖ್ಯಮಂತ್ರಿಗಳೂ ಇಲ್ಲ. ಹೋಗಲಿ, ಅರಣ್ಯ ರೋಧನ ಎನ್ನೋಣ ಅಂದರೆ ಅರಣ್ಯ ಮಂತ್ರಿಗಳು ಇಲ್ಲ. ನಾವು ಇನ್ನು ಯಾರ ಮುಂದೆ ಹೇಳೋಣ.

(ಗೊಂದಲ)

ಉಪಾಧ್ಯಕ್ಷರು:- ಗೃಹ ಸಚಿವರು ಇದ್ದಾರೆ, ಮೂರು ಜನ ಕ್ಯಾಬಿನೆಟ್ ಮಂತ್ರಿಗಳು ಇದ್ದಾರೆ ಬೇರೆ ಮಂತ್ರಿಗಳಿಗೆ ಹೇಳಿ ಕಳುಹಿಸಿದ್ದೇವೆ; ಅವರು ಬರುತ್ತಾರೆ ದಯಮಾಡಿ ಅವರು ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿ ಕೊಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಮಂತ್ರಿಗಳು ಬರುವವರೆಗೆ ಸಭೆಯನ್ನು ಮುಂದೂಡಿ.

ಶ್ರೀ ವಾಟಾಳ್ ನಾಗರಾಜ್:- ಮಂತ್ರಿಗಳು ವಿಧಾನ ಪರಿಷತ್ತಿನಲ್ಲಿ ಇದ್ದಾರೆಂದು ಕೆಲವರು ಹೇಳುತ್ತಿದ್ದಾರೆ. ನಲವತ್ತೈದು ಜನ ಮಂತ್ರಿಗಳು ವಿಧಾನ ಪರಿಷತ್ತಿನಲ್ಲಿ ಕುಳಿತುಕೊಳ್ಳುವುದಕ್ಕೆ ಸ್ಥಳಾವಕಾಶ ಇಲ್ಲ. ಈಗ ಸಭೆಯನ್ನು ಮುಂದೂಡಿ ಐದು ನಿಮಿಷದಲ್ಲಿ ಹೋಗಿ ಬರಬಹುದು. ನಾವೆಲ್ಲಾ ಅಲ್ಲಿ ಹೋಗಿ ಎಷ್ಟು ಜನ ಮಂತ್ರಿಗಳು ಇದ್ದಾರೆ ಎಂಬುದನ್ನು ನೋಡೋಣ.

ಶ್ರೀ ವಿ. ಸೋಮಣ್ಣ:- ಈಗ ವಿರೋಧ ಪಕ್ಷದ ನಾಯಕರು ಪ್ರಾರಂಭ ಮಾಡಿದ್ದಾರೆ. ಅವರು ಮಾತನಾಡತಕ್ಕ ವಿಚಾರಗಳನ್ನು ಸಂಬಂಧಪಟ್ಟ ಗೃಹ ಸಚಿವರು ನೋಟ್ ಮಾಡಿ ಕೊಳ್ಳುತ್ತಾರೆ. ಈ ಸಭೆಯಲ್ಲಿ ಮಾತನಾಡುವಾಗ ಯಾವುದು ತುಂಬಾ ಉಪಯುಕ್ತವಾದ ಸಲಹೆ ಆಗಿರುತ್ತದೆ ಅದನ್ನು ನಮ್ಮ ನಾಯಕರ ಗಮನಕ್ಕೆ ತಂದು, ಅವರು ಮಾತನಾಡತಕ್ಕ ಸಂದರ್ಭದಲ್ಲಿ ಅದಕ್ಕೆ ಉತ್ತರ ಕೊಡುತ್ತಾರೆ.

(ಗೊಂದಲ)

ಶ್ರೀ ಯು.ಆರ್. ಸಭಾಪತಿ:- ನಮಗೆ ಗೃಹ ಸಚಿವರ ಅಗತ್ಯ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಉಪ ಮುಖ್ಯಮಂತ್ರಿಗಳು ಬರಬೇಕು, ಏಕೆಂದರೆ ಇಲ್ಲಿ ಬೇರೆ ಯಾರೂ ಮಾತನಾಡುತ್ತಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್:- ಅವರು ಉತ್ತರ ಕೊಡಬಾರದು, ಸಮರ್ಥರು ಅಲ್ಲವೆಂದು ನಾನು ಹೇಳುತ್ತಿಲ್ಲ ಇದೊಂದು ಗಂಭೀರವಾದ ಪ್ರಶ್ನೆ. ಆದ್ದರಿಂದ ಸ್ವಲ್ಪ ಸಮಯ ಸಭೆಯನ್ನು ಮುಂದೂಡಿದರೆ ಒಳ್ಳೆಯದೆಂದು ನಾನು ತಮ್ಮಲ್ಲಿ ಸಲಹೆ ಮಾಡುತ್ತೇನೆ.

ಉಪಾಧ್ಯಕ್ಷರು:- ಬೇಡ, ಈಗ ಅವರು ಪ್ರಾರಂಭ ಮಾಡಲಿ, ಮಂತ್ರಿಗಳನ್ನು ಕರೆಯುವುದಕ್ಕೆ ಕಳುಹಿಸಿದ್ದಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಎಲ್ಲರೂ ಬಳ್ಳಾರಿ ರಸ್ತೆಯಲ್ಲಿ ಸೇರಿ ಕೊಂಡಿದ್ದಾರೆಂದು ಸುದ್ದಿ ಇದೆ. ಅವರು ಬರುವವರೆಗೆ ಸಭೆಯನ್ನು ಮುಂದೂಡಿದರೆ ಉತ್ತಮ ಎನ್ನಿಸುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನನಗೆ ಮಾತನಾಡುವುದಕ್ಕೆ ಏನೂ ತೊಂದರೆ ಇಲ್ಲ. ಆದರೆ ಯಾರಿಗೆ ಹೇಳುತ್ತಿರುವುದು?

ಉಪಾಧ್ಯಕ್ಷರು:- ಸರ್ಕಾರ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಎಲ್ಲಿದೆ ಸರ್ಕಾರ? ಸತ್ತ ಸರ್ಕಾರ. ಹೆಣಕ್ಕೆ ಹೇಳಬೇಕಾ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಯಾರಿಗೆ ಹೇಳಿಕಳುಹಿಸಿದ್ದಾರೆ? ಯಾರು ಹೇಳುವುದಕ್ಕೆ ಹೋಗಿದ್ದಾರೆ? ಉದಾಸಿಯವರು ಬಾಗಿಲವರೆಗೆ ಹೋಗಿ ವಾಪಸ್ ಬಂದರು.

ಉಪಾಧ್ಯಕ್ಷರು:- ಇಲ್ಲ, ಇಲ್ಲ. ಹೇಳಿ ಬಂದಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಹೋದವರು ಯಾರು? ಹೇಳಲಿಕ್ಕೆ ಹೋದವರು ಯಾರು? ಯಾರಿಗೆ ಹೇಳಿದ್ದಾರೆ? ಅವರು ಎಲ್ಲಿದ್ದಾರೆ ಎಂಬುದೇ ಗೊತ್ತಿಲ್ಲ ಉದಾಸಿಯವರಿಗೆ.

ಉಪಾಧ್ಯಕ್ಷರು:- ಶ್ರೀರಾಮರೆಡ್ಡಿಯವರೇ, ತಾವು ದಯಮಾಡಿ ಕೂಡ್ರಿ. ತಾವು ಪ್ರಾರಂಭ ಮಾಡಿರಿ.

ಶ್ರೀ ಸಿ.ಆರ್. ಸಗೀರ್ ಅಹಮದ್:- ನೋಡಿ, ಚೀಫ್ ವಿಫ್ ಅವರು ಈಗ ಬಂದರು.

ಉಪಾಧ್ಯಕ್ಷರು:- ಸಗೀರ್ ಅಹಮದ್ ಅವರೇ, ದಯಮಾಡಿ ಕೂಡಿರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇಲ್ಲ, ಅವರು ಕೇಳುವುದೇನೆಂದರೆ, ಏನು ಹೋಮ ಮಾಡಿ ಬಂದಿರೇನೋ ಎಂದು ಕೇಳುತ್ತಿದ್ದಾರೆ. ಈಗ ಪುರುಸೊತ್ತು ಸಿಕ್ಕಿತೇನೋ, ಹೋಮ ಮಾಡಿ ಈಗ ಬಂದರೇನೋ ಅಂತ.

ಉಪಾಧ್ಯಕ್ಷರು:- ತಾವು ಪ್ರಾರಂಭ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸನ್ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ನಾನು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇನೆ. ಆದರೆ ಸರ್ಕಾರ ಇದನ್ನು ಗಂಭೀರವಾಗಿಯೂ ತೆಗೆದುಕೊಂಡಿಲ್ಲ ಮತ್ತು ಇದರ ಬಗ್ಗೆ ಚಿಂತನೆ ಮಾಡತಕ್ಕ ಪ್ರಯತ್ನವನ್ನೂ ಕೂಡ ಮಾಡಿಲ್ಲ ಎನ್ನತಕ್ಕಂಥ ವಿಚಾರ ಈ ವಾತಾವರಣದಿಂದ ಗೊತ್ತಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಚರ್ಚೆಯ ಮುಖಾಂತರ ಇಂಥ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕು. ಡಿಬೇಟ್ ಹೌಸ್‌ನಲ್ಲಿ ಮಾಡಿ ಕೊನೆಗೆ ಕನ್‌ಕ್ಲೂಷನ್‌ಗೆ ಬಂದು ಇದರ ಬಗ್ಗೆ...

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಡಿ.ಜಿ.ಪಿ. ಅವರನ್ನಾದರೂ ಕರೆಸಿ ಹೋಗಲಿ.

ಉಪಾಧ್ಯಕ್ಷರು:- ಸಚೇತಕರು ಹೋಗಿದ್ದಾರೆ ಅಲ್ಲಿ. ನೀವು ಅವರಿಗೆ ಅಡಚಣೆ ಮಾಡಬೇಡ್ರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈಗ ಏನಾಗಿದೆ ಎಂದರೆ ಪ್ರಜಾಪ್ರಭುತ್ವದಲ್ಲಿ ನಾವು ಚರ್ಚೆಯಿಂದ ನಮ್ಮ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದು. ಈ ಸದನ ಕರೆಯತಕ್ಕದ್ದು ಏಕೆ? ಆರು ತಿಂಗಳ ನಂತರ ಇವತ್ತು ನಾವು ಸೇರಿದ್ದೇವೆ. ಏಕೆ ಸೇರಿದ್ದೇವೆಂದರೆ ಆರು ತಿಂಗಳಿಗೊಂದು ಸಾರಿ ಕನಿಷ್ಟಪಕ್ಷ ನಾವು ಸೇರಬೇಕು ಎಂದು ಮ್ಯಾಂಡೇಟರಿ ಪ್ರಾವಿಷನ್ ಇದ್ದಕಾರಣ ಇವತ್ತು ನಾವು ಸೇರಿದ್ದೇವೆ. ಆರು ತಿಂಗಳು ಆದಮೇಲೂ ಕೂಡ ಅರ್ಧ ವರ್ಷದ ಬಜೆಟ್ ನೀವು ಏನು ಕೊಟ್ಟಿರುತ್ತೀರೋ ಆ ಆರು ತಿಂಗಳ ಸಮಸ್ಯೆಯನ್ನು ಚರ್ಚೆ ಮಾಡಬೇಕು ಅಂದರೆ ಮಂತ್ರಿಗಳೂ ಇರುವುದಿಲ್ಲ; ಮುಖ್ಯಮಂತ್ರಿಗಳು ಇರುವುದಿಲ್ಲ; ಅಧಿಕಾರಿಗಳೂ ಇರುವುದಿಲ್ಲ. ಇದು ನಿಜವಾಗಿಯೂ ನಾಚಿಕೆಗೇಡುತನ. ಇಂಥ ಪ್ರಸಂಗ ಯಾವಾಗಲೂ ಕೂಡ ಆಗಿಲ್ಲ. ಇದರ ಬಗ್ಗೆ ಬರೆದುಕೊಳ್ಳುವವರಿಲ್ಲ. ಹೇಳುವವರಿಲ್ಲ. ಕೇಳುವವರಿಲ್ಲ. ಆರು ತಿಂಗಳಿಗೊಂದು ಸಾರಿ ಸೇರಿದ್ದೇವೆ. ಹಾಗಾದರೆ ಪ್ರೆಸ್‌ಕಾನ್‌ಫರೆನ್ಸ್ ಮಾಡಿ ಅಲ್ಲೇ ಹೇಳುತ್ತೇವೆ. ಇಲ್ಲಿ ಏತಕ್ಕೆ ಹೇಳಬೇಕು ನಾವು? ಇಲ್ಲಿ ಏತಕ್ಕೆ ಬರಬೇಕು ನಾವು? ಸದನದಲ್ಲಿ ಬರುವುದು ಏತಕ್ಕೆಂದರೆ ನಾವು ಎತ್ತಿದಂಥ

ಮಾತಿಗೆ ನಮ್ಮ ಚರ್ಚೆಗೆ ಸ್ಪಂದಿಸುತ್ತಾರೆ, ಏನಾದರೂ ಉತ್ತರ ಕೊಡುತ್ತಾರೆ, ಏನಾದರೂ ಪರಿಹಾರ ಕಂಡುಹಿಡಿಯುತ್ತಾರೆ ಎನ್ನುವ ದೃಷ್ಟಿಯಿಂದ ನಾವು ಇಲ್ಲಿಗೆ ಬಂದು ಪ್ರಸ್ತಾಪವನ್ನು ಮಾಡುತ್ತೇವೆಯೇ ಹೊರತಾಗಿ ಇದನ್ನು ಏನು ಪ್ರಚಾರಕ್ಕೋಸ್ಕರ ಮಾಡುತ್ತೇವೆಯೇ? ಪ್ರಚಾರ ಸಾಕಷ್ಟು ಮಾಡಿಕೊಂಡಿದ್ದೇವೆ. ಬೇಕಾದಲ್ಲಿ ನಮಗೆ ಬೇರೆ ವಿಧಿಗಳಿವೆ. ನಿಯಮದ ಪ್ರಕಾರ ಪ್ರಚಾರ ಮಾಡಿಕೊಳ್ಳುತ್ತೇವೆ. ಆದರೆ ಈ ಸದನದಲ್ಲಿ, ಅಂದರೆ ಇಡೀ ರಾಜ್ಯದ ಜನರಿಗೆ, 5 ಕೋಟಿ ಜನರಿಗೆ ಇಲ್ಲಿ ನಾವು ಏನು ಚರ್ಚೆ ಮಾಡುತ್ತೇವೆ, ನಿರ್ಣಯ ತೆಗೆದುಕೊಳ್ಳುತ್ತೇವೆ, ಈ ನಿರ್ಣಯದ ಬಗ್ಗೆ ಸರ್ಕಾರ ಎಷ್ಟರ ಮಟ್ಟಿಗೆ ಗಂಭೀರತೆಯಿಂದ ಯೋಚನೆ ಮಾಡುತ್ತಿದೆ ಎನ್ನತಕ್ಕಂಥದ್ದು ಇಡೀ ರಾಜ್ಯದ ಜನರಿಗೆ ಗೊತ್ತಾಗಬೇಕು. ಅದರ ಮುಖಾಂತರ ದೇಶದ ಜನರಿಗೆ ಗೊತ್ತಾಗಬೇಕೆನ್ನತಕ್ಕ ದೃಷ್ಟಿಯಿಂದ ನಾವು ವಿಧಾನಸಭೆಯಲ್ಲಿ ಸಂವಿಧಾನಾತ್ಮಕವಾಗಿ ಪ್ರಜಾಪ್ರಭುತ್ವದಲ್ಲಿ ಸೇರುತ್ತೇವೆ. ಪ್ರತಿಸಲ ನಾವು ಏನು ಶರ್ಟ್ ಹಿಡಿದುಕೊಂಡು ಬಂದು ಕೂರಿಸುವುದಕ್ಕಾಗುತ್ತದೆಯೇ? ಏನು ಚಾಕು ಚೂರಿ ಇಡುವುದಕ್ಕಾಗುತ್ತದೆಯೇ? ಇದು ಏನು ಅಂತ ನನಗೇನೂ ಅರ್ಥವಾಗುತ್ತಿಲ್ಲ. ಇದು ಕೇವಲ ಮಾತಿನಿಂದ ಚರ್ಚೆಯಿಂದ ನಡೆಯತಕ್ಕ ಪ್ರಜಾಪ್ರಭುತ್ವ ಇದು. ಇದೇನು ಡಿಕ್ಟೇಟರ್ ಷಿಪ್ಪ್ ಇಷ್ಟಾದರೂ ಕೂಡ ಒಂದು ಕಡೆ ಹತೋಟಿ ಅಧಿಕಾರಿಗಳ ಮೇಲಿಲ್ಲ. ಇವತ್ತು ಹೋಮ್ ಸೆಕ್ರೆಟರಿ ಇರಬಹುದು; ಡಿ.ಜಿ.ಪಿ. ಇರಬಹುದು. ಅವರಿಗೂ ಗಮನ ಇಲ್ಲ. ಅಂದರೆ ಏನೋ ಹೇಳಿಕೊಳ್ಳುತ್ತಾರೆ, ಏನಾದರೂ ಉತ್ತರ ಹೇಳಿದರೆ ನಡೆದುಹೋಗುತ್ತದೆ ಎನ್ನತಕ್ಕಂಥ ರೀತಿಯಲ್ಲಿ ನಿಮ್ಮ ಧಾಟಿ ಇದ್ದರೆ ನಿಜವಾಗಿ ನಾನು ಹೇಳಬೇಕಾಗುತ್ತದೆ ಪ್ರಜಾಪ್ರಭುತ್ವಕ್ಕೆ ಅಪಚಾರ ಮಾಡುತ್ತಾ ಇದ್ದೀರಿ. ಇದೇರೀತಿಯಾಗಿ ನಿಮಗೂ ಮುಂದಿನ ಕಾಲ ಬರುತ್ತದೆ ಎನ್ನುವ ಮಾತನ್ನು ನೀವು ನೆನಪಿನಲ್ಲಿಟ್ಟುಕೊಳ್ಳಬೇಕು. ಏಕೆಂದರೆ ಇವತ್ತು ಅಧಿಕಾರ ಇರಬಹುದು, ಹೋಗಬಹುದು. ಆದರೆ ಯಾವ ಯಾವ ಸ್ಥಾನಗಳಿಗೆ ನಾವು ಗೌರವ ಕೊಡಬೇಕೋ ಅದನ್ನು ಕೊಡಲೇಬೇಕಾಗುತ್ತದೆ. ಅಧ್ಯಕ್ಷ ಸ್ಥಾನಕ್ಕೆ ಏನು ಗೌರವ ಕೊಡಬೇಕು, ಉಪಾಧ್ಯಕ್ಷರಿಗೆ ಏನು ಗೌರವ ಕೊಡಬೇಕು, ಮಂತ್ರಿಗಳಿಗೆ ಏನು ಕೊಡಬೇಕು, ಅಥವಾ ಈ ಸದನದ ಸದಸ್ಯರಿಗೆ ಏನು ಕೊಡಬೇಕು ಅದನ್ನು ಕೊಡದೇಹೋದರೆ ಮತ್ತೆ ಏತಕ್ಕೆ ನಾವು ಇಲ್ಲಿ ಸೇರುವುದು? ಎಷ್ಟೋ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ, ಬಡಜನರಿಂದ ಟ್ಯಾಕ್ಸ್ ತೆಗೆದುಕೊಂಡು ಇಲ್ಲಿ ನಾವು ಹೇಳುವುದನ್ನು ಯಾರೂ ಕೇಳುವುದಕ್ಕೆ ತಯಾರಿಲ್ಲ ಅಂದರೆ ಉಪಯೋಗ ಏನು?

ಉಪಾಧ್ಯಕ್ಷರು:- ಪ್ರಾರಂಭ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ;- ಇಲ್ಲ, ಇಲ್ಲ. ಪ್ರಾರಂಭ ಅಂದರೆ ಏನು ಅಧ್ಯಕ್ಷರೆ ನನಗಂತೂ ಈಗ ಅನ್ನಿಸುತ್ತದೆ ಬರೀ ನೀವು ನಾವು ಮಾತನಾಡಬೇಕೇ ಹೊರತಾಗಿ ಸರ್ಕಾರ ಇದರ ಬಗ್ಗೆ ಗಂಭೀರತೆ ವಹಿಸಿಕೊಂಡು ಇದನ್ನು ಕೇಳತಕ್ಕ ಸೌಜನ್ಯ ಅವರಲ್ಲಿಲ್ಲ ಎನ್ನತಕ್ಕ ಮಾತನ್ನು ನಾನು ಹೇಳಬೇಕಾಗುತ್ತದೆ. ಆದ್ದರಿಂದ ಇವತ್ತು ನಾನು ಏನು ಭಾಷಣ ಮಾಡುತ್ತಿದ್ದೇನೆ ಅದನ್ನು ಈಗ ಕಂಟಿನ್ಯೂ ಮಾಡುತ್ತಿದ್ದೇನೆ. Under protest I am doing. ಸದನದ ಸಮಯ ಕಳೆಯಬಾರದು ಎನ್ನತಕ್ಕ ದೃಷ್ಟಿಯಿಂದ ಮಾಡುತ್ತಿದ್ದೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಅಡ್ಜರ್ನ್ ಮಾಡಿ.

ಉಪಾಧ್ಯಕ್ಷರು:- ನಿಮ್ಮ ನಾಯಕರು ಮಾತನಾಡುವಾಗ ತಾವು ಮಾತನಾಡುತ್ತೀರಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇಲ್ಲ. ಅವರು ಇದ್ದುದನ್ನು ಹೇಳುತ್ತಿದ್ದಾರೆ ಪಾಪ. ನಾನು ಕೇಳುತ್ತೇನೆ ಅಧ್ಯಕ್ಷರೆ, ಇವರಿಗೆ ಪುರುಸೊತ್ತಿಲ್ಲ ಏನೋ ಆಯಿತು. ಅಧಿಕಾರಿಗಳಿಗೆ ಪುರಸೊತ್ತಿಲ್ಲವೆ? ಇವತ್ತು ಸಬ್-ಇನ್‌ಸ್ಪೆಕ್ಟರ್, ಸರ್ಕಲ್ ಇನ್‌ಸ್ಪೆಕ್ಟರ್, ಎಸ್.ಪಿ. ಏನು ಅನ್ಯಾಯ ಮಾಡಿದ್ದಾರೆ ಎನ್ನುವುದನ್ನು ಹೇಳುವುದನ್ನು ಕೇಳುವುದಕ್ಕೆ ಅವರೂ ಇಲ್ಲ, ಇವರೂ ಇಲ್ಲ.

ಉಪಾಧ್ಯಕ್ಷರು:- ನಾನು ಹೇಳಿದ್ದು ನಿಮ್ಮ ನಾಯಕರು ಮಾತನಾಡುತ್ತಿದ್ದಾರೆ, ದಯಮಾಡಿ ಕೇಳಿ ಎಂದು ಹೇಳಿದೆ ಅಷ್ಟೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸನ್ಮಾನ್ಯ ಅಧ್ಯಕ್ಷರೆ, ನಾನು ಹೇಳಿದ ಹಾಗೆ ಅಂಡರ್ ಪ್ರೊಟೆಸ್ಟ್ ಮಾತನಾಡುತ್ತಿದ್ದೇವೆ. ತಾವೂ ಕೂಡ ಇದನ್ನು ಗಂಭೀರತೆಯಿಂದ ತೆಗೆದುಕೊಂಡು ಅವರಿಗೆ ಪತ್ರ ಬರೆಯುತ್ತೀರೋ, ಹೇಳುತ್ತೀರೋ. ಏನು ಹೇಳಿದರೂ ಕೂಡ ಅವರದ್ದು ಆನೆ ಚರ್ಮ, ಎಮ್ಮೆ ಚರ್ಮದಂತಿದ್ದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಅವರನ್ನು ಯಾವ ಭಾಷೆಯಲ್ಲಿ ಬೈಯ್ಯಬೇಕೋ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎಂ. ನಾರಾಯಣ ಸ್ವಾಮಿ:- ಮಾನ್ಯ ಸಭಾಧ್ಯಕ್ಷರೆ, ನಮ್ಮದು ಯಾವ ಚರ್ಮವೂ ಇಲ್ಲ. ನಮಗೆಲ್ಲಾ ಕಿವಿ ಇದೆ.

ಉಪಾಧ್ಯಕ್ಷರು:- ಮಾತನಾಡಲಿ ಅವರು.

ಶ್ರೀ ಎಂ. ನಾರಾಯಣ ಸ್ವಾಮಿ:- ಅವರು ಮಾತನಾಡಲಿ. ಅದಕ್ಕೆ ನಮ್ಮ ಅಭ್ಯಂತರ ಇಲ್ಲ.

ಉಪಾಧ್ಯಕ್ಷರು:- ಅವರು ಮಾತನಾಡುವಾಗ ನೀವು ಮಧ್ಯೆ ಮಧ್ಯೆ ಮಾತನಾಡಬೇಡಿ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಸಾರ್, ನಾರಾಯಣಸ್ವಾಮಿಯವರು ಅವರ ಶಾಸಕಾಂಗ ಪಕ್ಷದ ಕಾರ್ಯದರ್ಶಿಗಳು. ಇವರು ಸಭೆ ಶುರುವಾಗಿ ಅರ್ಧ ಗಂಟೆ ನಂತರ ಬರುತ್ತಾರೆ.

ಶ್ರೀ ಎಂ. ನಾರಾಯಣ ಸ್ವಾಮಿ:- ಬರೀ ಇದರಲ್ಲೇ ಕಾಲಹರಣ ಮಾಡಿದರೆ...

ಶ್ರೀ ಸಿ.ಆರ್. ಸಗೀರ್ ಅಹಮದ್:- ಎಲ್ಲಿಂದ ಬಂದಿರಿ ನೀವು? ಯಾವ ಕಡೆಯಿಂದ ಬಂದಿರಿ ನೀವು ಎಂಬುದನ್ನು ಹೇಳಿ.

ಶ್ರೀ ಎಂ. ನಾರಾಯಣ ಸ್ವಾಮಿ:- ಅವರು ಮಾತನಾಡುತ್ತಿದ್ದಾರೆ, ನೀವು ಡಿಸ್ಟರ್ಬ್ ಮಾಡಬೇಡಿ ಎಂದು ನಾನು ಹೇಳಿದ್ದು.

ಉಪಾಧ್ಯಕ್ಷರು:- ಕೂಡ್ರಿ ನಾರಾಯಣ ಸ್ವಾಮಿಯವರೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಹೆಜ್ಜಾಲ ಗ್ರಾಮದಲ್ಲಿ ಇವತ್ತು ನಡೆದಂಥ ಘಟನೆ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಾ ಇದ್ದೆ. ಈಗಾಗಲೇ ಇದರ ಮೇಲೆ ಚರ್ಚೆ ಸ್ವಲ್ಪಮಟ್ಟಿಗೆ ನಾನು ಮುಗಿಸಿದ್ದೇನೆ. ಇದರ ಹಿನ್ನೆಲೆ ಏನು, ಇದಕ್ಕೆ ಕಾರಣ ಏನು ಎನ್ನುವ ಬಗ್ಗೆ ನಾನು ಕೇಳುತ್ತಿದ್ದೆ. ಏತಕ್ಕೆ

ಫೈರಿಂಗ್ ಆಯಿತು? ಇದಕ್ಕೆ ಯಾರು ಕಾರಣಕರ್ತರು ಮತ್ತು ಇದಕ್ಕೆ ಪ್ರಚೋದನೆ ನೀಡಿದಂಥವರು ಯಾರು ಮತ್ತು ನಾನು ಪ್ರಚೋದನೆ ನೀಡಿಲ್ಲ, ಇನ್ನೊಬ್ಬರು ನೀಡಿದ್ದಾರೆ ಎಂದು ಪ್ರೆಸ್ ಕಾನ್‌ಫರೆನ್ಸ್ ಮಾಡಿ ಇವತ್ತು ನೇರವಾಗಿ ಹೇಳಿದ್ದನ್ನು ನಾವು ನೋಡಿದಾಗ ಕೆಲವು ಜನರಿಗೆ ಇವತ್ತು ಮಾಹಿತಿ ಇತ್ತು ಎನ್ನತಕ್ಕದ್ದು ಸ್ಪಷ್ಟವಾಗುತ್ತದೆ. ಅಂದರೆ ಎಂ.ಪಿ.ಗಳು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಬಹುಶಃ ವರದೇಗೌಡರೂ ಕೂಡ ಆ ಪ್ರೆಸ್ ಕಾನ್‌ಫರೆನ್ಸ್‌ನಲ್ಲಿದ್ದು ಅವರು ಕೂಡ ಹೇಳಿದ್ದಾರೆ ಅಂದರೆ ಇವರೆಲ್ಲರಿಗೂ ಕೂಡ ಅಲ್ಲಿ ಆಗಿರತಕ್ಕ ಘಟನೆ ಬಗ್ಗೆ ಮಾಹಿತಿ ಇತ್ತು ಎನ್ನುವುದು ಅವರ ಪ್ರೆಸ್ ನೋಟ್‌ನಿಂದ ಹಾಗೂ ಪ್ರೆಸ್ ಕಾನ್‌ಫರೆನ್ಸ್‌ನಿಂದ ಹೊರಗೆ ಬರುತ್ತಿದೆ. ಅಂದಾಗ ನಾನು ಹೇಳಬೇಕಾಗುತ್ತದೆ, ಇವತ್ತು ಇದೆಲ್ಲಾ ಕೂಡ ನಿಮಗೆ ಗೊತ್ತಿದ್ದರೆ ಇದು ಮಾಡುವುದಕ್ಕೆ ಏಕೆ ಹೋದಿರಿ? ಮಾಡಿದ್ದರೆ ಇದರ ಹೊಣೆಯನ್ನು ನೀವು ಹೊತ್ತುಕೊಂಡು, ಇವತ್ತು ಸ್ಪಷ್ಟವಾಗಿ ನಾನು ಹೇಳುತ್ತೇನೆ, ಅಧ್ಯಕ್ಷರೆ, ಈ ಫೈರಿಂಗ್‌ಗೆ ಈ ಸರ್ಕಾರವೇ ಜವಾಬ್ದಾರಿ. ಮತ್ತು ಆ ಚುನಾವಣೆಯಲ್ಲಿ ಗೆಲ್ಲಬೇಕು ಎನ್ನುವ ದೃಷ್ಟಿಯಿಂದಲೇ ಈ ಒಂದು ಫೈರಿಂಗ್ ಮಾಡಿಸಿದ್ದು. ಜನ ಹೆದರಬೇಕು. ಸುಮಾರು 2 ಸಾವಿರ ಜನರ ಮೇಲೆ ಕೇಸ್ ಹಾಕಬೇಕು. 19 ಎಫ್.ಐ.ಆರ್. ಹಾಕಿ ಒಂದೊಂದು ಎಫ್.ಐ.ಆರ್.ನಲ್ಲಿ 50 ರಿಂದ ನೂರು ಹೆಸರುಗಳನ್ನು ತೋರಿಸಿ ಎರಡು ಸಾವಿರಕ್ಕಿಂತ ಹೆಚ್ಚಿನ ಜನರು ಇದರಲ್ಲಿ ಇನ್‌ವಾಲ್ವ್ ಆಗಿದ್ದಾರೆ ಎಂದು ತೋರಿಸಿ ಅವರನ್ನು ಅರೆಸ್ಟ್ ಮಾಡತಕ್ಕಂಥ ಭಯದ ವಾತಾವರಣವನ್ನು ಸೃಷ್ಟಿ ಮಾಡಿ ಪ್ರತಿಯೊಬ್ಬರ ಮನೆಮನೆಗೆ ಹೋಗಿ ಆ ಪೋಲಿಸ್ ಸ್ಟೇಷನ್ ಲಿಮಿಟ್‌ನಲ್ಲಿ ಇಲ್ಲದೇ ಇದ್ದರೂ ಕೂಡ ರಾಮನಗರದಲ್ಲಿರತಕ್ಕವರು, ಬೇರೆ ಹಳ್ಳಿಯಲ್ಲಿ ಇರತಕ್ಕವರು ಅವರೆಲ್ಲರ ಹೆಸರುಗಳನ್ನು ಸೇರಿಸಿ, ಅವರು ಚುನಾವಣೆಗೆ ಬರಬಾರದು, ಭಾಗವಹಿಸಿಬಾರದು ಎನ್ನತಕ್ಕ ರೀತಿಯಲ್ಲಿ ಈ ಸರ್ಕಾರ ಪೋಲಿಸರನ್ನು ಹಿಡಿದುಕೊಂಡು ಅವರ ಮುಖಾಂತರ ಈ ಕೆಲಸವನ್ನು ಮಾಡಿಸಿದೆ. ಇಷ್ಟು ಮಾಡಿದರೂ ಕೂಡ ಇವರ ಹಣಕ್ಕೂ ಜನ ಮಣಿದಿಲ್ಲ. ಇವರ ಹೆಂಡಕ್ಕೂ ಜನ ಮಣಿದಿಲ್ಲ. ಅದೂ ಕೂಡ ಪತ್ರಿಕೆಯಲ್ಲಿ ಬಂತಲ್ಲಾ. ಮೂರು ನಾಲ್ಕು ಇವರ ಮೆಟಾಡಾರ್ ವ್ಯಾನ್‌ಗಳು ಕಾರುಗಳು ಅದರಲ್ಲಿ ಇದರಲ್ಲಿ ಖೋಡೆ ಕಂಪೆನಿಯಿಂದ, ತಿಮ್ಮೇಗೌಡರ ಕಂಪೆನಿ ಎಲ್ಲಾ ಕಂಪೆನಿಯಿಂದ ಏಕೆಂದರೆ ಧಾರಾಳವಾಗಿ ಸೆಕೆಂಡ್ಸ್ ಅಂತೂ ಬಿಟ್ಟೇಬಿಟ್ಟಿದ್ದಾರಲ್ಲಾ; ಆ ಎಲ್ಲಾ ಕಂಪೆನಿಯವರು ಇವರಿಗೆ ಪುಕ್ಕಟೆಯಾಗಿ ಸಾರಾಯಿ ಕೊಡುತ್ತಿದ್ದಾರೆ. ಒಂದು ಕಡೆ ಹೆಂಡ, ಹಣ ಮತ್ತು ಪೋಲಿಸ್ ಇಷ್ಟೊಂದು ದೌರ್ಜನ್ಯ ನಡೆದರೂ ಕೂಡ ಜನ ಏನು ಉತ್ತರ ಕೊಟ್ಟರು ಅಂದರೆ ಹಿಂದೆ ಎಷ್ಟು ಓಟಿನಿಂದ ಲಿಂಗಪ್ಪನವರು ಸೋತಿದ್ದರು ಅದಕ್ಕಿಂತ 600 ಹೆಚ್ಚಿನ ಮತದಿಂದ ಅವರು ಗೆದ್ದರು.

3.20 ಪಿ.ಎಂ

ಅಂದಾಗ ಸರ್ಕಾರ ಈ ಒಂದು ಏನು ಒತ್ತಾಯಮಾಡಿ ಅಥವಾ ದಬ್ಬಾಳಿಕೆ ಮಾಡಿ ನಾವೂ ಈ ಚುನಾವಣೆಯನ್ನು ಗೆಲ್ಲುತ್ತೇವೆ ಎನ್ನತಕ್ಕಂಥ ಪ್ರಯತ್ನವನ್ನು ಪೋಲಿಸ್ ಮುಖಾಂತರ ಮಾಡಿದರೋ ಇದರಲ್ಲಿ ಸಂಪೂರ್ಣವಾಗಿ ಅವರು ವಿಫಲರಾಗಿದ್ದಾರೆ. ಇಂತಹ ಆಡಳಿತ ಇರುವುದಕ್ಕಿಂತಲೂ ಇಲ್ಲದೇ ಇರುವಂಥಾದ್ದು ಲೇಸು. ಅದಕ್ಕೇ ನಾನು I demand the

resignation of the Chief Minister. ಏಕೆಂದರೆ ಅವರೇ ಇದಕ್ಕೆ ಕಾರಣಕರ್ತರು. ಅವರೇ ಹೋಮ್ ಮಿನಿಸ್ಟರ್ ಯಾವಾಗ ಹೋಮ್ ಮಿನಿಸ್ಟರ್ ಇದ್ದು, ಈ ಘಟನೆ ಅವರ ಕಾಲದಲ್ಲಿ ನಡೆಯುತ್ತದೆ ಮತ್ತು ಅದಕ್ಕೆ ಅವರು ಶಹಭಾಸ್‌ಗಿರಿ ಕೊಡುತ್ತಾರೆ ಎಂದರೆ ಇದಕ್ಕೆ ಏನು ಹೇಳಬೇಕಾಗುತ್ತದೆ? ನಾನು ನೇರವಾಗಿ ಹೇಳಬೇಕಾಗುತ್ತದೆ, ಮುಖ್ಯಮಂತ್ರಿಗಳು ಹೋಮ್ ಡಿಪಾರ್ಟ್‌ಮೆಂಟ್‌ನಿಂದ ಪೋಲಿಸರಿಗೆ ಸಪೋರ್ಟ್ ಕೊಟ್ಟಿದ್ದಾರೆ. ಪೋಲಿಸರು ಇವರ ಪ್ರಚೋದನೆ ಮೇಲೆ ಅಲ್ಲಿ ಗೋಲಿಬಾರ್ ಮಾಡಿದ್ದಾರೆ. ಅಮಾಯಕ ಜನ ಇವತ್ತು ಸತ್ತಿದ್ದಾರೆ. ಅದಕ್ಕೆ ಅವರು ನೈತಿಕ ಹೊಣೆಯನ್ನು ಹೊತ್ತುಕೊಂಡು ಇವತ್ತು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಜಾಗ ಖಾಲಿ ಮಾಡಬೇಕು. ಇಲ್ಲಿ ಸೋತರು. ಚಿಕ್ಕನಾಯಕನಹಳ್ಳಿಯಲ್ಲಿ ಸೋತರು. ಗ್ರ್ಯಾಜ್ಯುಯೇಟ್ ಕಾನ್ಸ್ಟಿಟ್ಯೂಯನ್ಸಿನಲ್ಲೂ ಸೋತರು. ಇದು ಅವರ ಅಡ್ಮಿನಿಸ್ಟ್ರೇಷನ್ ವಿರುದ್ಧ ಕೊಟ್ಟಂಥ ಮ್ಯಾಂಡೇಟ್ ಇದರ ಹಿಂದೆ ನಡೆದಂಥ ಚುನಾವಣೆಯಲ್ಲಿ, ಕೂಡ ಫಿಫ್ಟಿ ಫಿಫ್ಟಿ. ಏಕೆಂದರೆ ಸ್ವಲ್ಪ ದೇವೇಗೌಡರ ಪಾತ್ರ ಇತ್ತು, ಅವರವರ ಕ್ಯಾಂಡಿಡೇಟ್‌ಗಳು ಇದ್ದರು. ಕೆಲವು ಜನ ಇಂಡಿಪೆಂಡೆಂಟ್ಸ್‌ನ್ನು ನಿಲ್ಲಿಸಿದ್ದರು. ಹಾಗೆ ನಿಲ್ಲಿಸಿಕೊಂಡು ಒಂದೆರಡು ಸೀಟು ತಂದಹಾಗೆ ಮಾಡಿದರು. ಆದರೆ major portion you have lost. ಅಂದರೆ ಮ್ಯಾಂಡೇಟ್ ನಿಮ್ಮ ವಿರುದ್ಧ ಎಂಬುದನ್ನು ಜನರೇ ತೋರಿಸಿದರು.

ಶ್ರೀ ಎಲ್.ಆರ್. ಶಿವರಾಮೇಗೌಡ:- ಚಿಕ್ಕನಾಯಕನಹಳ್ಳಿಯಲ್ಲಿ ಮೂರನೇ ಸ್ಥಾನ ನಿಮಗೆ ಬಂತು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾವು ಹೇಳುವುದು ಏನೆಂದರೆ, ಯಾರು ಅಧಿಕಾರದಲ್ಲಿ ಇದ್ದರೋ, ಇಂತಹ ಅಧಿಕಾರಕ್ಕೆ....

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ:- ನೀವು ಎಷ್ಟನೇ ಸ್ಥಾನ ತೆಗೆದುಕೊಂಡಿರಿ?

ಉಪಾಧ್ಯಕ್ಷರು:- ಅವರು ಮಾತನಾಡುವಾಗ ನೀವು ಮಾತನಾಡಬೇಡಿ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಜನರ ತೀರ್ಪನ್ನು ಒಪ್ಪಿಕೊಳ್ಳಬೇಕು. ಚಿಕ್ಕನಾಯಕನ ಹಳ್ಳಿಯಲ್ಲಿ ನಿಮ್ಮ ಜಾಗ ಯಾವುದು? ಅದನ್ನು ಹೇಳಿ.

ಉಪಾಧ್ಯಕ್ಷರು:- ನಿಮ್ಮ ನಾಯಕರು ಮಾತನಾಡುತ್ತಿದ್ದಾರೆ, ನೀವು ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇವತ್ತಿನ ದಿವಸ ತಾವು ಹೊಣೆಯನ್ನು ನೇರವಾಗಿ ಹೊತ್ತುಕೊಳ್ಳಬೇಕಾಗುತ್ತದೆ. ಏಕೆಂದರೆ ಹೋಮ್ ಡಿಪಾರ್ಟ್‌ಮೆಂಟ್ ಅವರ ಹತ್ತಿರ ಇದೆ. ಇಂಟಲಿಜೆನ್ಸ್ ಅವರ ಹತ್ತಿರ ಇದೆ. ಮತ್ತು ಬಹುಶಃ ಇದಕ್ಕೆ ಮಿಗಿಲಾಗಿ ಲೇಬರ್ ಖಾತೆಯನ್ನು ಕೂಡ ಅವರು ಇಟ್ಟುಕೊಂಡಹಾಗೆ ಕಾಣುತ್ತದೆ.

ಮಾನ್ಯ ಸದಸ್ಯರು:- ಇಲ್ಲ. ಅದಕ್ಕೆ ಸಿದ್ಧರಾಮಯ್ಯನವರು ಇದ್ದಾರೆ. ಜೊತೆಗೆ ರಾಜ್ಯಸಚಿವರು ಬೇರೆ ಇದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸಾರಿ. ಅವರು ಇದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಲೇಬರ್ ಮಿನಿಸ್ಟರ್, ಆಮೇಲೆ ಹೋಮ್ ಮಿನಿಸ್ಟರ್ ಅವರುಗಳಿಗೆ ಈ ಘಟನೆ ಬಗ್ಗೆ ಸಂಪೂರ್ಣ ಮಾಹಿತಿ ಇದೆ. ಅದು ಇದ್ದರೂ ಕೂಡ ಈ ಒಂದು ಸಮಸ್ಯೆಯನ್ನು ಬಗೆಹರಿಸತಕ್ಕಂಥ ಪ್ರಯತ್ನ ಯಾವುದೂ ಕೂಡ ಮಾಡಲಿಲ್ಲ. ಅದಕ್ಕಾಗಿ ನಾನು ನೇರವಾಗಿ ಹೇಳುತ್ತಿದ್ದೇನೆ. ಈ ಮೂರು ಕೊಲೆಗಳಿಗೆ ನೇರವಾಗಿ ಈ ಒಂದು ಅಧಿಕಾರಿಗಳು ಏನಿದ್ದಾರೆ, ಅವರಿಗೆ ಪ್ರಾಸಿಕ್ಯೂಟ್ ಮಾಡಬೇಕು. ನಾನು ಈಗಾಗಲೇ ಹೇಳಿದ ಹಾಗೇ ಐ.ಪಿ.ಸಿ. 302ರಲ್ಲಿಮತ್ತು 307ರಲ್ಲಿ ವಿರುದ್ಧ ಕೇಸ್ ರಿಜಿಸ್ಟರ್ ಮಾಡಿ ಅವರಿಗೆ ಪ್ರಾಸಿಕ್ಯೂಟ್ ಮಾಡದೇಹೋದರೆ ಖಂಡಿತವಾಗಿಯೂ ಬಡವರಿಗೆ ನ್ಯಾಯ ಸಿಗುವುದಿಲ್ಲ. ಇದಕ್ಕಾಗಿ ನನ್ನ ಡಿಮ್ಯಾಂಡ್ ಏನು ಎಂದರೆ, ಈ ಮೂರು ನಾಲ್ಕು ಅಧಿಕಾರಿಗಳು ಏನಿದ್ದಾರೆ, ಸೂಪರಿಂಟೆಂಡೆಂಟ್ ಆಫ್ ಪೋಲಿಸ್ ಅವರು, ಸರ್ಕಲ್ ಇನ್‌ಸ್ಪೆಕ್ಟರ್ ಅವರು ಮತ್ತು ಸಬ್ ಇನ್‌ಸ್ಪೆಕ್ಟರ್ ಇವರು ನೇರವಾಗಿ ಯಾರು ಫೈರ್ ಮಾಡಿದರೋ, ಡೆಪ್ಯುಟಿ ಕಮೀಷನರ್ ಅವರ ಆರ್ಡರ್ ಇಲ್ಲದೆ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಅವರ ಆರ್ಡರ್ ಇಲ್ಲದೆ, ತನ್ನ ಕೈಯಲ್ಲಿ ತಾನೇ ಕಾನೂನನ್ನು ತೆಗೆದುಕೊಂಡು ಅಲ್ಲಿ ಏನು ಪ್ರವಾಸ ಮಾಡತಕ್ಕಂಥ ಮಂತ್ರಿಗಳ ಮಾತು ಕೇಳಿ ಅವತ್ತಿನ ದಿವಸ ಅವರಿಗೆ ಜಾಗ ಮಾಡಿಕೊಡುವುದಕ್ಕೋಸ್ಕರ ಅಮಾಯಕ ಜನರ ಮೇಲೆ ಏನು ಫೈರಿಂಗ್ ಮಾಡಿದರು ಅದರ ಹೊಣೆಯನ್ನು ಹೊತ್ತುಕೊಂಡು ಇವರು ರಾಜೀನಾಮೆ ಕೊಡುವುದರ ಜೊತೆಯಲ್ಲಿ ಅಲ್ಲಿರತಕ್ಕಂಥ ಪೋಲೀಸ್ ಅಧಿಕಾರಿಗಳನ್ನು ಈವತ್ತಿನ ದಿವಸ ಸಸ್ಪೆಂಡ್ ಮಾಡಬೇಕು. ಎಲ್ಲಿಯವರೆಗೆ? ಜ್ಯುಡಿಷಿಯಲ್ ಪ್ರೋಬ್ ಮಾಡಿ ಎನ್‌ಕ್ವೈರಿ ರಿಪೋರ್ಟ್ ಬರುವವರೆಗೆ. ಎನ್‌ಕ್ವೈರಿ ರಿಪೋರ್ಟಿನಲ್ಲಿ ಇಲ್ಲ, ಡಿ.ಸಿ.ಯವರು ಆದೇಶ ನೀಡಿದ್ದರು, ಅಥವಾ ಅವರ ಆದೇಶ ಪಡೆದುಕೊಂಡೇ ಅವರು ಮಾಡಿದ್ದಾರೆ, ಅವರು ಮಾಡಿದಂಥ ಫೈರಿಂಗ್ ಕಾನೂನು ರೀತಿಯಾಗಿ ಆಗಿದೆಯೆಂದಾದರೆ, ಮುಂದೆ ನೋಡೋಣ. ಆದರೆ ಅಲ್ಲಿಯವರೆಗೆ ಈ ಎಲ್ಲಾ ಅಧಿಕಾರಿಗಳನ್ನು ತಾವು ಸಸ್ಪೆನ್‌ಷನ್‌ನಲ್ಲಿ ಇಡಬೇಕು. ಇದರ ಬಗ್ಗೆ ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿಯನ್ನು ಒಂದು ಕಡೆ ಪ್ರಾರಂಭ ಮಾಡಬೇಕು. ಜ್ಯುಡಿಷಿಯಲ್ ಎನ್‌ಕ್ವೈರಿ ಏನಿದೆ, ಅದನ್ನು ಕೂಡ ಕಂಟಿನ್ಯೂ ಮಾಡಬೇಕಾಗುತ್ತದೆ. ಇದು ಒಂದು ಕಡೆ. ಎರಡನೆಯದು, ಇದರ ಹಿನ್ನಲೆಯಲ್ಲಿ ಯಾರು ಇದ್ದಾರೆ? ಏಕೆಂದರೆ ಅವರ ಹಿಂದೆ ಅದೇ ದಿವಸ ಮೂರನೇ ತಾರೀಖಿನ ದಿವಸ ಆ ಒಂದು ಹೆದ್ದಾರಿ ಮೇಲೆ ಹೋಗಿರತಕ್ಕಂಥ ಪಾರ್ಲಿಮೆಂಟ್ ಸದಸ್ಯರಾಗಲೀ, ಅಥವಾ ಮಂತ್ರಿಗಳಾಗಲೀ, ಏನು ತಮಗೆ ಇದರ ಬಗ್ಗೆ ಗೊತ್ತಿತ್ತು, ಮಾಹಿತಿ ಇತ್ತು ಎಂದು ಹೇಳಿಕೊಂಡಿದ್ದಾರೆ, ಅವರೂ ಕೂಡ ಇದರ ಹೊಣೆಯನ್ನು ಹೊರಬೇಕಾಗುತ್ತದೆ. ಏಕೆಂದರೆ ಈ ಜವಾಬ್ದಾರಿಯನ್ನು ಅವರು ತೆಗೆದುಕೊಳ್ಳಬೇಕಾಗುತ್ತದೆ. ಇದನ್ನು ಅವರು ತೆಗೆದುಕೊಳ್ಳದೇ ಹೋದರೆ ಖಂಡಿತವಾಗಿ ಇವರಿಗೆ ಸಿಕ್ಕಂಥ ಅಧಿಕಾರಕ್ಕೆ ದ್ರೋಹ ಬಗೆದಂತಾಗುತ್ತದೆ ಎಂಬ ಮಾತನ್ನು ನಾನು ಹೇಳುತ್ತೇನೆ. ತಮ್ಮ ಕೈಯಲ್ಲಿ ಸರ್ಕಾರ ಇದ್ದಾಗ ಇಂತಹ ಅನಾಹುತ ಆಗುತ್ತದೆ ಎಂದು ಗೊತ್ತಿದ್ದರೂ ಕೂಡ ನೀವು ಪೋಲಿಸರಿಗೆ ಹೇಳಿ ಅದನ್ನು ನಿಲ್ಲಿಸತಕ್ಕಂಥ, ಸ್ಟ್ರೈಕ್ ನಿಲ್ಲಿಸತಕ್ಕದ್ದು ಅಥವಾ ರಸ್ತೆ ರೋಖೊ ನಡೆಯುವುದನ್ನು ಮಾಡದಹಾಗೆ,

ಅದನ್ನು ಬಗೆಹರಿಸಿದ್ದರೆ ಈ ಪ್ರಶ್ನೆ ಉದ್ಭವಿಸುತ್ತಿರಲಿಲ್ಲ. ಅದಕ್ಕೆ ಅವರು ಕೂಡ ಹೊಣೆಯನ್ನು ಹೊರಬೇಕು. ನಾನು 15 ಕಿಲೋಮೀಟರ್‌ನಲ್ಲಿದ್ದೆ, 30 ಕಿಲೋಮೀಟರ್‌ನಲ್ಲಿದ್ದೆ ಎಂದು ಹೇಳಿಕೊಂಡು ಕ್ಲಾರಿಫಿಕೇಷನ್ ಕೊಡತಕ್ಕದ್ದು ಅಲ್ಲ. ಕ್ಲಾರಿಫಿಕೇಷನ್ ಇವತ್ತು ಏಕೆ ಕೊಡುತ್ತಿದ್ದಾರೆ ಎಂದರೆ ನೇರವಾಗಿ ನೀವು ಕೂಡ ಇದರಲ್ಲಿ ಶಾಮೀಲಾಗಿದ್ದೀರಿ ಎಂದು ಎಲ್ಲಿ ಹೇಳುತ್ತಾರೋ ಎಂದು ನಾನು 30 ಕಿಲೋಮೀಟರ್ ದೂರದಲ್ಲಿದ್ದೆ ಎಂದು ಸಿಂಧ್ಯಾರವರು ಹೇಳುತ್ತಾರೆ. ನಾನು 15 ಕಿಲೋಮೀಟರ್ ದೂರದಲ್ಲಿ ಇದ್ದೆ ಎಂದು ಹೇಳಿ ಎಂ.ಪಿ.ಯವರು ಹೇಳುತ್ತಿದ್ದಾರೆ. ಎಂ.ಪಿ.ಯವರು ಮತ್ತು ವರದೇಗೌಡರು ಅದರಲ್ಲಿ ಇದ್ದರೋ ಗೊತ್ತಿಲ್ಲ. ಏಕೆಂದರೆ ಅವರ ಹೇಳಿಕೆ ಪ್ರಕಾರ ಅವರಿಬ್ಬರೂ ಕೂಡ ಜೊತೆಯಲ್ಲಿ ಇದ್ದರು ಎನ್ನತಕ್ಕದ್ದು ಬಂದಿದೆ. ಇಷ್ಟೊಂದು ನೇರವಾದ ಅಪರಾಧ ನಿಮ್ಮ ಕಣ್ಣೆದುರು ನಡೆದರೂ ಕೂಡ ನೀವು ಕಣ್ಣು ಮುಚ್ಚಿಕೊಂಡು ಇವತ್ತಿನ ದಿವಸ ನಾಗರೀಕರನ್ನು ಕೊಲೆ ಮಾಡತಕ್ಕಂಥ ಪ್ರಯತ್ನ ಮಾಡುತ್ತೀರಿ ಎಂದರೆ ಇದಕ್ಕಿಂತಲೂ ಒಳ್ಳೆಯ ಕಾನೂನು ವ್ಯವಸ್ಥೆ ಏನಿದೆ ಎಂದು ತಾವೇ ಹೇಳಬೇಕು. ಇದು ಒಂದು ಹೆಜ್ಜಾಲದಲ್ಲಿ ನಡೆದ ಫೈರಿಂಗ್ ಬಗ್ಗೆ. ಇವರ ಸರ್ಕಾರ ಬಂದಾಗ ನಮ್ಮ ಸರ್ಕಾರ ಬಹಳ ಒಳ್ಳೆಯದು ಇದೆ, ಕಾನೂನು ವ್ಯವಸ್ಥೆ ಚೆನ್ನಾಗಿ ಇದೆ ಎಂದು ಹೇಳಿಕೊಂಡು ಬಂದರು. ಮುಳಬಾಗಿಲಿನಲ್ಲಿ ಏನಾಯಿತು ಸ್ವಾಮಿ? ಅಲ್ಲಿ ಒಬ್ಬ ಮನುಷ್ಯ ತಿರುಪತಿ ದೇವರ ದರ್ಶನಕ್ಕೆ ಹೋಗತಕ್ಕಂಥವನು ಹನುಮಂತರ ದೇವರ ಗುಡಿಯಲ್ಲಿ ಕುಳಿತುಕೊಂಡು ಅಲ್ಲಿ ಆಶ್ರಯ ಪಡೆದುಕೊಂಡಿರತಕ್ಕಂಥವನಿಗೆ ಪೋಲಿಸರು ಹಿಡಿದುಕೊಂಡು ಹೋಗಿ ಹೊಡೆದು ಕೊಲೆ ಮಾಡಿದ ಮೇಲೆ ಅಲ್ಲಿ ಹಿಂದೂ ಮುಸಲ್ಮಾನ್ ಜಗಳ ಹಚ್ಚಬೇಕೆಂದು ಹೇಳಿ ಪೋಲಿಸರೇ ಹಂದಿ ಮಾಂಸ ಒಯ್ದು ಮಸೀದಿ ಮೇಲೆ ಬಿಸಾಕಿದರು. ಇದು ಮುಸ್ಲೀಮರು ಮತ್ತು ಹಿಂದೂಗಳ ಮಧ್ಯೆ ಜಗಳ ಆಗಲಿ ಎಂದು ಪೋಲಿಸರೇ ಮಾಡಿದ್ದು. ಹೀಗೆ ಯಾರಾದರೂ ಮಾಡಿದ್ದಾರಾ? ಆದ್ದರಿಂದ ಇದಕ್ಕೆ ನೇರವಾಗಿ ಪೋಲಿಸರೇ ಕಾರಣ. ಆವಾಗ ಜನ ಅರ್ಥಮಾಡಿಕೊಂಡು ಹಿಂದು-ಮುಸಲ್ಮಾನವರು ಇಬ್ಬರೂ ಅರ್ಥಮಾಡಿಕೊಂಡು ಇಬ್ಬರೂ ಒಂದಾದ ಪೋಲಿಸ್ ಸ್ಟೇಷನ್ ಅನ್ನು ಅಟ್ಯಾಕ್ ಮಾಡಿದರು. ಅವರು ಕೇಳಿದರು, ಈ ಕೃತ್ಯವನ್ನು ನೀವು ಮಾಡಿದ್ದೀರಿ, ಹಿಂದೂ ಬಾಂಧವರು ಇದನ್ನು ಮಾಡುವುದಕ್ಕೆ ಸಾಧ್ಯವಿಲ್ಲ, ನಾವಿಬ್ಬರೂ ಅಣ್ಣತಮ್ಮಂದಿರ ಹಾಗೆ ಇದ್ದೇವೆ. ಆದಕ್ಕಾಗಿ ಈ ಅನ್ಯಾಯ ನಿಮ್ಮ ಪೋಲಿಸ್ ವತಿಯಿಂದ ನಡೆದಿದೆ ಎನ್ನುವ ಮಾತನ್ನು ಅಲ್ಲಿನ ಮುಳಬಾಗಿಲಿನ ಜನ ಅವರು 14ನೇ ತಾರೀಖಿನ ದಿವಸ ಹೇಳಿದಾಗ ಅವಾಗಲೂ ಕೂಡ ಅವರ ಮೇಲೆ ಫೈರಿಂಗ್ ಮಾಡಿದಾಗ ಸುಮಾರು ಮೂರು ಜನರ ಕೊಲೆಯಾಯಿತು. ಮಂಜುನಾಥ ಎನ್ನತಕ್ಕಂಥ 20 ವರ್ಷದವ, ಅನುಬಾ 19 ವರ್ಷ, ಮುನಿವೆಂಕಟಪ್ಪ 60 ವರ್ಷದವನು. ಇದಲ್ಲದೇ 20 ಜನ ಗಾಯಗೊಂಡರು. ಇದು ಒಂದು ಕಡೆ. ಈ ಇನ್ಸಿಡೆಂಟ್‌ಅನ್ನು ಪೋಲಿಸರೇ ಕ್ರಿಯೇಟ್ ಮಾಡಿದ್ದುದು. ಅಂದರೆ ಎಷ್ಟರಮಟ್ಟಿಗೆ ಪೋಲಿಸರು ಇವತ್ತು ತಮ್ಮ ಅಧಿಕಾರವನ್ನು ದುರುಪಯೋಗ ಮಾಡುತ್ತಿದ್ದಾರೆ ಮತ್ತು ಇಂತಹ ಅಧಿಕಾರಿಗಳಿಗೆ ನಿಮ್ಮ ಬೆಂಬಲ ಕೊಡುತ್ತಿದ್ದೀರಿ ಎಂಬ ಮಾತನ್ನು ಇವತ್ತು ನಾನು ಹೇಳುತ್ತಿದ್ದೇನೆ. ಅಂದಮೇಲೆ ಕಾನೂನು ವ್ಯವಸ್ಥೆ ಎಲ್ಲಿದೆ? ಕಾನೂನು ರಕ್ಷಣೆ ಎಲ್ಲಿದೆ? ಕಾನೂನು ರಕ್ಷಣೆ ಮಾಡತಕ್ಕಂಥವರೇ ಕಾನೂನನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಜನರನ್ನು ಸದೆಬಡಿಯುವುದಕ್ಕೆ ಪ್ರಯತ್ನ ಮಾಡಿದರೆ,

ಅವರನ್ನು ಕೊಲೆ ಮಾಡುವುದಕ್ಕೆ ಪ್ರಯತ್ನ ಮಾಡಿದರೆ, ನೇರವಾಗಿ ಅವರ ಮೇಲೆ ಗುಂಡು ಹಾರಿಸತಕ್ಕಂಥ ಪ್ರಯತ್ನ ಮಾಡಿದರೆ ಈ ಸರ್ಕಾರಕ್ಕೆ ಏನು ಹೇಳಬೇಕು? ಸರ್ಕಾರ ಕಾನೂನಿಗೆ ಗೌರವ ಕೊಟ್ಟಿದೆ ಎಂದು ಹೇಳೋಣವೇ? ಅಥವಾ ಕಾನೂನಿಗೆ ಮರ್ಯಾದೆ ಕೊಟ್ಟು ತಮ್ಮ ಈ ಒಂದು ರೂಲ್ ಆಫ್ ಲಾ ಏನಿದೆ, ಅದು ಚೆನ್ನಾಗಿದೆಯೆಂದು ತಿಳಿದುಕೊಳ್ಳೋಣವೇ? ಇದೂ ಕೂಡ ಆಯಿತು. ಇದನ್ನು ಹೇಳಿದಾಗ ಹೌದು ಜನ ಅಟ್ಯಾಕ್ ಮಾಡುವುದಕ್ಕೆ ಬಂದಿದ್ದರು ಅದಕ್ಕೆ ಫೈರ್ ಮಾಡಿದ್ದುದು, ಇಲ್ಲಿ ಸ್ಟ್ರೈಕ್ ಮಾಡುವುದಕ್ಕೆ ಬಂದಿದ್ದರು, ಅದಕ್ಕೆ ಫೈರ್ ಮಾಡಿದ್ದು ಎಂದರೆ ಪ್ರಜಾಪ್ರಭುತ್ವದಲ್ಲಿ ನ್ಯಾಯವಾಗಿ ಶಾಂತಿಯುತವಾಗಿ ಯಾರಾದರೂ ಆ್ಯಜಿಟೇಷನ್ ಮಾಡಿದರೆ ನೀವು ನೇರವಾಗಿ ಗುಂಡು ಹಾರಿಸುತ್ತೀರಾ? ಮುಳಬಾಗಿಲಿನಲ್ಲಿ ನಡೆದಂಥ ಘಟನೆಗೆ ಕೂಡ ಪೋಲೀಸರೇ ಕಾರಣಕರ್ತರು. ಅದೇರೀತಿಯಾಗಿ ಬಂಗಾರಪೇಟೆಯಲ್ಲಿ 24.7.96 ರಲ್ಲಿ ನಡೆಯಿತು. ಅಲ್ಲಿ ಪಾಪ ಗೋಪಾಲಪ್ಪ ಎಂಬ ಒಬ್ಬ ಟೊಮ್ಯಾಟೊ ಕದ್ದಿದ್ದಾನೆ ಎಂದು ಹೇಳಿ ಅವನ ಮೇಲೆ ಪೋಲಿಸರು ಕಳ್ಳತನ ಅಪಾದನೆ ಹೊರಿಸಿ ಅವನನ್ನು ಪೋಲಿಸ್ ಸ್ಟೇಷನ್‌ನಲ್ಲಿ ಇಟ್ಟು ಹೊಡೆದು ಸಾಯಿಸಿದರು.

ಆಮೇಲೆ ಸಕಲೇಷಪುರದಲ್ಲಿ 13-9-96 ರಲ್ಲಿ ಶ್ರೀಧರಶೆಟ್ಟಿ ಎಂಬುವರು ಬಸ್ ಸ್ಟ್ಯಾಂಡಿನಲ್ಲಿ ಗಲಾಟೆ ಮಾಡಿದ್ದಾರೆಂದು, ಅವನಿಗೆ ಪೋಲಿಸ್ ಸ್ಟೇಷನ್‌ಗ ಕರೆದುಕೊಂಡು ಹೋಗಿ, ಹೊಡೆದು ಅವನನ್ನು ಕೊಲೆ ಮಾಡಿದರು. ಪೋಲಿಸ್ ಫೈರಿಂಗ್‌ನಲ್ಲಿ ಸುಮಾರು 4 ಜನ ಗಾಯಗೊಂಡರು 5 ಕೆ.ಎಸ್.ಆರ್.ಟಿ.ಸಿ. ಬಸ್ ನಾಶವಾದವು. ಇದಕ್ಕೆಲ್ಲಾ ಕಾರಣಕರ್ತರ್ಯಾರು ಎಂದರೆ ಮೂಲವಾಗಿ ಪೋಲಿಸಿನವರು. ಜನರೇ ಹೊಡೆದಾಡಿ, ಜನ ತಾವುತಾವೇ ಕಚ್ಚಾಡಿ ಸತ್ತಂಥ ಕೇಸಸ್ ಅಥವಾ ಹಾಳಾದಂಥವು ಬಹಳ ವಿರಳ. ಇವರೇ ಕಾನೂನು ಕೈಯಲ್ಲಿ ತೆಗೆದುಕೊಂಡು, ರಕ್ಷಣೆ ಮಾಡತಕ್ಕಂಥವರೇ ಇವತ್ತಿನ ದಿವಸ ಆ ಪ್ರಯತ್ನವನ್ನು ನಡೆಸಿದರೆ, ಇದನ್ನು ನಾವು ಯಾರಿಗೆ ಹೇಳತಕ್ಕಂಥಾದ್ದು. ಯಾರಿಗೆ ದೂರು ಕೊಡತಕ್ಕಂತಾದ್ದು? ಯಾರು ರಕ್ಷಣೆ ಮಾಡಬೇಕೋ ಅವರೇ ಜನರನ್ನು ಕೊಲೆ ಮಾಡುವುದಕ್ಕೆ ಪ್ರಾರಂಭ ಮಾಡಿದಾಗ ನಾವು ಅಪೀಲು ಯಾರ ಹತ್ತಿರ ಹೋಗೋಣ? ಅದಕ್ಕೆ, ಇವರಿಗೆ ಆಳತಕ್ಕಂಥ ಶಕ್ತಿ ಇಲ್ಲ, ಮತ್ತು ಬಡವರನ್ನು ಗೌರವದಿಂದ ಅಥವಾ ನಾಗರೀಕರನ್ನು ಗೌರವದಿಂದ ನೋಡಿಕೊಳ್ಳತಕ್ಕ ಛಲ ಇವರ ಹತ್ತಿರ ಇಲ್ಲವೆನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಅದೇ ರೀತಿಯಾಗಿ ಹೊಳೇನರಸೀಪುರ. 29-11-96 ರಲ್ಲಿ ರಾಮರಾಜೇ ಅರಸ್ ಎಂದು, 50 ವರ್ಷದ ಮನುಷ್ಯ ಮಲ್ಲೇನಹಳ್ಳಿಯಲ್ಲಿ ಪೋಲೀಸರು ಹೊಡೆದು ಅವನಿಗೆ ಕೊನಗೆ ಏನಪ್ಪಾ ಎಂದರೆ ವಿಷ ತೆಗೆದುಕೊಂಡು ಸತ್ತಿದ್ದಾನೆ ಎಂದು ಕೇಸ್ ಮಾಡಿದರು. ಲಾಕಪ್‌ಡೆತ್ ಅದು ಎಲ್ಲಿ? ಪ್ರಧಾನ ಮಂತ್ರಿಗಳು ಎಲ್ಲಿ ಇದ್ದಾರೋ, ಯಾವ ತಾಲ್ಲೂಕಿನಿಂದ ಬರುತ್ತಾರೋ, ಆ ತಾಲ್ಲೂಕಿನಲ್ಲಿ ಈ ಘಟನೆಯಾಗಿದೆ. ರಾಮನಗರ, ಅವರೇ ಪ್ರತಿನಿಧಿಸತಕ್ಕಂಥ ತಾಲ್ಲೂಕು. ಮತ್ತು ನಿಮಗೆ ಏನು ಆಶ್ಚರ್ಯವಾಗುವುದೇನಿಲ್ಲ. ನಿಮ್ಮ ಅಂಕಿಸಂಖ್ಯೆ ಪ್ರಕಾರ ಅಥವಾ ನನಗಿರತಕ್ಕಂಥ ಮಾಹಿತಿ ಪ್ರಕಾರ ಹಾಸನ ಜಿಲ್ಲೆಯಲ್ಲಿ ಪ್ರತಿ ವಾರ ಅಂದರೆ ಒಂದು ವರ್ಷದಲ್ಲಿ ಕನಿಷ್ಟ ಪಕ್ಷ 70 ರಿಂದ 80-90 ಕೊಲೆಯಾಗುತ್ತಿವೆ ಎನ್ನತಕ್ಕಂಥ ಮಾಹಿತಿ ಇದೆ. ಇದು ಮುಚ್ಚುಮರೆ ಏನಿಲ್ಲ. ಪೋಲೀಸಿನವರೇ ಆ ಅಂಕಿಸಂಖ್ಯೆ ಕೊಟ್ಟಿರಬಹುದು. ಇದು ಪತ್ರಿಕೆಯಲ್ಲೂ

ಕೂಡ ಬಂದಿದೆ. ಅಲ್ಲಿಯ ಎಸ್.ಪಿ.ಯವರೂ ಕೂಡ ಇದನ್ನು ಹೇಳಿದ್ದಾರೆ. ಅಂದರೆ, ವಾರದಲ್ಲಿ ಎರಡು ಹೆಣ ಬೀಳುವವರಗೆ ಹಾಸನ ಜಿಲ್ಲೆಯಲ್ಲಿ ಸಮಾಧಾನ ಇರುವುದಿಲ್ಲ. ಆ ಮಣ್ಣಿಗೆ ರಕ್ತ ಬೇಕೇಬೇಕು. ಈ ರೀತಿಯಾಗಿ ನಡೆದಿವೆ. ನೀವು 1994ರಲ್ಲಿ ಅಂಕಿಸಂಖ್ಯೆ ತೆಗೆದು ನೋಡಿ.

ಮಾನ್ಯ ಸದಸ್ಯರು:- ಅಧ್ಯಕ್ಷರೇ, ಹಾಸನ ಜಿಲ್ಲೆಗೆ ರಕ್ತ ಬೇಕು ಎಂದು ಹೇಳಿದರು. ಅದರಲ್ಲಿ ಶಾಸಕರೂ; ಇದ್ದಾರೆ, ಅವರನ್ನೂ ಸೇರಿಸಿ ಹೇಳುತ್ತಿದ್ದಾರೆಯೇ? ಆ ಭಾಗದಲ್ಲಿರತಕ್ಕ ಎಲ್ಲಾ ಶಾಸಕರನ್ನೂ ಸೇರಿಸಿ, ರಕ್ತ ಬೇಕು ಹಾಸನ ಜಿಲ್ಲೆಗೆ ಎಂದು ಕೇಳುತ್ತಿದ್ದಿರೋ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಹಾಸನ ಜಿಲ್ಲೆ ಎಂದರೆ, ಜವಾಬ್ದಾರಿ ಒಬ್ಬರು ಮುಖಂಡರು ಅಲ್ಲಿಗೆ ಬರುತ್ತಾರೆ. ಈ ದೇಶದ ಪ್ರಧಾನ ಮಂತ್ರಿಗಳಾಗಿದ್ದರೆ. ಅಂತಹ ಕಡೆ ಯಾದರೂ ಕೂಡ ಪೋಲೀಸಿನವರು ಬಹಳ ವಿಜಿಲೆಂಟಾಗಿ ಲಾ ಅಂಡ್ ಆರ್ಡರ್ ಮತ್ತು ಈ ಸರ್ಕಾರ ಕೂಡ ವಿಜಿಲೆಂಟಾಗಿದೆ ಎಂದು ತಿಳಿದುಕೊಂಡಿದ್ದೆ. ಆದರೆ, ಅಂತಹ ಕಡೆ ಕೂಡ ವಾರದಲ್ಲಿ ಎರಡು ಮರ್ಡರ್ ಆಗುತ್ತವೆ ಎನ್ನತಕ್ಕಂಥ ರಿಪೋರ್ಟ್ ಇದೆ. ಅಂದಾಗ ಎಷ್ಟರಮಟ್ಟಿಗೆ ಕಾನೂನು ವ್ಯವಸ್ಥೆ ಸುಲಲಿತವಾಗಿದೆ, ಚೆನ್ನಾಗಿದೆ, ಒಳ್ಳೆಯದಿದೆ ಎನ್ನತಕ್ಕಂಥಾದ್ದು ಇದರಿಂದ ಸ್ಪಷ್ಟವಾಗುತ್ತದೆ ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ಅದೇರೀತಿಯಾಗಿ ಮಂಡ್ಯದಲ್ಲೂ ಕೂಡ 19-12-96 ರಂದೂ ಲಾಕಪ್‌ಡೆತ್ ಆಗುತ್ತದೆ. ಮಂಚೇಗೌಡ ಕರಸ್‌ವಾಡಿ in Mandya police station for an enquiry in connection with the land dispute; soon after the enquiry while he was about to go to his village, the person died; public and the students protested alleging that the incident occurred due to the police...." ಅಂದರೆ, ಪೋಲೀಸ್ ಸ್ಟೇಷನ್ ಬಿಟ್ಟತಕ್ಷಣ, ಅಲ್ಲಿಯೂ ಕೂಡ ಒಬ್ಬರು ಸತ್ತಿದ್ದಾರೆ. ಹೀಗೆ ನಾನು ಪಟ್ಟಿಮಾಡಿಕೊಂಡು, ಓದಿಕೊಂಡು ಹೋದರೆ ಸಾಕಷ್ಟು ಊರಿನಲ್ಲಿ ನಡೆಯುವುದನ್ನು ಹೇಳಬಹುದು. ಡಕಾಯಿತಿ ಇರಬಹುದು, ಲಾಕಪ್‌ಡೆತ್ ಇರಬಹುದು, ಮರ್ಡರ್ಸ್ ಇರಬಹುದು ಫೈರಿಂಗ್ ಇರಬಹುದು, ಅಟ್ರಾಸಿಟೀಸ್ ಇರಬಹುದು. ಮೊನ್ನೆ ಜಗಳೂರು ಗ್ರಾಮಕ್ಕೆ ಹೋಗಿದ್ದೆವು. ಅದು ನಮ್ಮ ಬಸಪ್ಪನವರ ಕ್ಷೇತ್ರ. ಅಲ್ಲಿ ಸುಮಾರು ಎರಡು ಉಪ್ಪಾರರ ಯುವಕ ಹುಡುಗರನ್ನು ಹಾಡುಹಗಲೇ ಊರಿನಲ್ಲಿಯೇ ಕೊಂದಿದ್ದಾರೆ. ಇದುವರೆಗೆ ಪೋಲಿಸಿನವರು, ಯಾರು ಅವರ ಆರೋಪಿಗಳು ಇದ್ದಾರೆ, ಅವರಿಗೆ ಅರೆಸ್ಟ್ ಮಾಡಿಲ್ಲ. ಅವರಿಗೆ ರಕ್ಷಣೆ ಕೊಡುತ್ತಿದ್ದಾರೆಯೇ ಹೊರತಾಗಿ, ಅವರಿಗೆ ಪ್ರೊಟೆಕ್ಷನ್ ಕೊಡುತ್ತಿದ್ದಾರೆಯೇ ಹೊರತಾಗಿ ಇದುವರೆಗೆ ಅರೆಸ್ಟ್ ಮಾಡಿ, ಶಿಕ್ಷೆ ಕೊಡತಕ್ಕ ಕೆಲಸ ಪ್ರಾರಂಭವಾಗಿಲ್ಲ. ಸುಮಾರು ಒಂದೂವರೆ ತಿಂಗಳಾಯಿತು. ಜಗಳೂರು ತಾಲ್ಲೂಕಿನಲ್ಲಿ ಈ ಕೆಲಸ ನಡೆದಿದೆ. ಅದೇರೀತಿಯಾಗಿ ಕುಂದಾಪುರದಲ್ಲಿ ಡಕಾಯಿತಿ ಬಗ್ಗೆ ಆಮೇಲೆ ಚಿತ್ರದುರ್ಗದಲ್ಲಿ ತೋಟದ ಮನೆಗೆ ನುಗ್ಗಿ ಲಕ್ಷಾಂತರ ರೂಪಾಯಿ ಲೂಟಿ ಮಾಡಿದ್ದಾರೆ. ಬೆಂಗಳೂರು ಸಿಟಿಯಲ್ಲಿ ದಿನವೂ ಸಾಕಷ್ಟು ಡಕಾಯಿತಿ ನಡೆಯುತ್ತಿವೆ; ಮರ್ಡರ್ಸ್ ಆಗುತ್ತಿವೆ, ಲೂಟಿಗಳಾಗುತ್ತಿವೆ. ಬಂಗಾರದ ಚೈನುಗಳನ್ನು ಕಿತ್ತುಕೊಳ್ಳುವುದು, ಇಂತಹ ಅನೇಕ ಘಟನೆಗಳು ರಾಜ್ಯದಲಿ ನಡೆದಿದೆ.

ಅದಕ್ಕೆ ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತಿದೆ. ಅವರು ಕೊಟ್ಟಂಥ ಅಂಕಿಸಂಖ್ಯೆ ಇದೆ. ಅದರ ಜೊತೆಯಲ್ಲಿ ಜಾಗೃತ ಸಮಾಜ, ನಾನ್ ಗವರ್ನಮೆಂಟ್ ಆರ್ಗನೈಸೇಷನ್‌ನವರು ಕೂಡ ಒಂದು ಆರ್ಟಿಕಲ್ ತಯಾರು ಮಾಡಿದ್ದಾರೆ. ರಾಜ್ಯದಲ್ಲಿ ಎಷ್ಟು ಮರ್ಡರ್ ಆಗುತ್ತಿವೆ, ಎಷ್ಟು ಡಕಾಯಿತಿಗಳಾಗುತ್ತಿವೆ, ರೇಪ್ ಎಷ್ಟು, ಇದರ ಅಂಕಿಸಂಖ್ಯೆಯನ್ನು ಕೊಟ್ಟಿದ್ದಾರೆ. ಇವರ ಅಂಕಿಸಂಖ್ಯೆಗಳು ಎಷ್ಟು ಎಂದರೆ, 1996 ರಲ್ಲಿ ಎಷ್ಟು ಕೊಲೆಗಳಾಗಿವೆ ಎಂದರೆ, 1604 ರಿಜಿಸ್ಟರ್ಡ್. ಅಂದರೆ, ಪೋಲಿಸ್ ಸ್ಟೇಷನ್‌ನಲ್ಲಿ ಹೋಗಿ ರಿಜಿಸ್ಟರ್ಡ್ ಮಾಡಿ, ಪೋಲಿಸಿನವರಿಗೆ ಸಿಕ್ಕಂಥ ಮಾಹಿತಿ ಪ್ರಕಾರವಾಗಿ 1604. ಅನ್ ರಿಜಿಸ್ಟರ್ಡ್ ಎಂದರೆ, ಕೆಲವು ಕಡೆ ಅಲ್ಲಿಯೇ ಹೊಡೆದು ಬಿಸಾಕಿ ಬಿಡುತ್ತಾರೆ. ಹೇಗೆ ಸತ್ತ ಎಂದರೆ, ಕುಡಿದು ಸತ್ತ ಭಾವಿಯಲ್ಲಿ ಬಿದ್ದು ಸತ್ತ ಅಥವಾ ನೇಣುಹಾಕಿಕೊಂಡು ಸತ್ತ ಎಂದು ಹೇಳುವುದು. ಹೀಗೆ ಇರತಕ್ಕಂಥ ಕೇಸ್ ಸುಮಾರು 500. ಇವುಗಳನ್ನು ಪೋಲಿಸಿನವರು ಗಮನಕ್ಕೆ ತೆಗೆದುಕೊಂಡಿಲ್ಲ. ಅದೇರೀತಿಯಾಗಿ ಸುಮಾರು 252 ಡಕಾಯಿತಿಗಳು ಎಂದು ವರದಿ ಇದೆ. ಆದರೆ, ಡಕಾಯಿತಿ ಪೋಲೀಸರ ಗಮನಕ್ಕೆ ಬಂದಿರತಕ್ಕ ಅಂಕಿಸಂಖ್ಯೆ ಪ್ರಕಾರ ಸುಮಾರು 120. ಅಂದರೆ, ಇವೆರಡೂ ಸೇರಿಸಿದರೆ ಸುಮಾರು 370ರ ಮೇಲೆಯೇ ಹೋಗುತ್ತದೆ. ಆಮೇಲೆ 2400 ಮರ್ಡರ್ಸ್. ಆಮೇಲೆ ರೇಪ್ 219 ಕೇಸ್, ರಿಜಿಸ್ಟರ್ಡ್ ಮಾಡಿದ್ದು. ಇದರಲ್ಲಿ 30 ಕೇಸ್ ಪೋಲಿಸ್ ಸ್ಟೇಷನ್‌ನಲ್ಲಿ ರಿಜಿಸ್ಟ್ರೇಷನ್ ಇಲ್ಲ. ಅದೇರೀತಿಯಾಗಿ ಕಳ್ಳತನದಲ್ಲಿ 9210 ಕೇಸ್ ರಿಜಿಸ್ಟರ್ಡ್ ಆದರೆ, 3000 ಕೇಸ್ ಅನ್ ರಿಜಿಸ್ಟರ್ಡ್. ಹೀಗೆ ಸಾವಿರಾರು ಕೇಸ್ ಇವತ್ತು ಪೋಲಿಸರ ಗಮನಕ್ಕೆ ಬಾರದೇ ಆ ಊರಿನಲ್ಲಿಯೇ ಆಗಲೀ ಅಥವಾ ಪೋಲಿಸರ ಮತ್ತು ಮಧ್ಯವರ್ತಿಗಳ ನಡುವೆ ಕಾಂಪ್ರಮೈಸ್ ಮಾಡಿ, ಕೇಸ್ ರಿಜಿಸ್ಟರ್ಡ್ ಮಾಡದೇ ಬಿಟ್ಟಂಥ ಕೇಸ್ ನಿಮ್ಮ ಮುಂದೆ ಕೊಟ್ಟಿದ್ದೇನೆ. ಹೀಗೆ ಒಂದಲ್ಲ, ಇವತ್ತಿನ ದಿವಸ ಸಾವಿರಾರು ಕೇಸಸ್ ನಮ್ಮ ಮುಂದೆ ಇವೆ. ಇದರಿಂದ, ಇಡೀ ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಕೆಟ್ಟುಹೋಗಿದೆ. ಅದಕ್ಕೆ ನಾನು ಸ್ಪಷ್ಟವಾಗಿ ಹೇಳಿದೆ. ಮುಖ್ಯಮಂತ್ರಿಗಳು ಹೋಮ್ ಮಿನಿಸ್ಟರ್ ಜವಾಬ್ದಾರಿಯನ್ನೂ ಹೊತ್ತುಕೊಂಡಿದ್ದಾರೆ. ಯಾವಾಗ ಅವರ ಕೈಯಿಂದ ಇದು ನಿಭಾಯಿಸುವುದಕ್ಕಾಗುವುದಿಲ್ಲವೆಂದರೆ, ರಾಜೀನಾಮೆ ಕೊಟ್ಟು ಮನೆಗೆ ಹೋಗಬೇಕು. ಕೆಲಸವನ್ನು ನಿಭಾಯಿಸತಕ್ಕಂಥ ಶಕ್ತಿ ಇಲ್ಲವೆಂದಾಗ ಅದರ ಬಗ್ಗೆ ತಿಳುವಳಿಕೆ ಮಾಡಿಕೊಳ್ಳುವುದಕ್ಕೆ ಪುರುಸೊತ್ತು ಇಲ್ಲವೆಂದಾಗ, ಇದಕ್ಕೆ ಸ್ಪಂಧಿಸತಕ್ಕ ಜನ ಮತ್ತೆ ಯಾರಾದರೂ ಬರಲಿ, ಅವರು ನಿರ್ವಹಿಸಲಿ, ಅವರು ನಡೆಸಲಿ. ನೀವು ಮನೆಯಲ್ಲಿ ಆರಾಮವಾಗಿದ್ದರೆ ಚೆನ್ನಾಗಿರುತ್ತದೆ. ಇಲ್ಲದೇ ಇದ್ದರೆ ಬೇರೆ ಯಾವುದಾದರೂ ಕೆಲಸ ಮಾಡಲಿ. ಅವರಿಗೆ ಯಾವುದು ಆತ್ಮೀಯವಾಗಿದೆ, ಬಹಳ ಪ್ರಿಯವಾಗಿದೆ ಆ ಕೆಲಸವನ್ನೇ ಮಾಡಲಿ. ಕೃಷ್ಣನ ಕೆಲಸವಾದರೂ ಮಾಡಲೀ, ರಾಮನ ಕೆಲಸವಾದರೂ ಮಾಡಲಿ, ಇಲ್ಲವೇ ಗಾಂಧಿ ಕೆಲಸವನ್ನಾದರೂ ಮಾಡಲಿ ಮತ್ತೆ ಯಾವುದಾದರೂ ಅವರಿಗೆ ಪ್ರಿಯವಾದಂಥ ಕೆಲಸವಿದೆ, ಆ ಕೆಲಸವಾದರೂ ಮಾಡಿಕೊಂಡು ಕುಳಿತುಕೊಳ್ಳುವುದಕ್ಕೆ ಹೇಳಿ. ತಾವು ಹೇಳಿ, ಅಡ್ವೈಸ್ ಮಾಡಿ. ಏಕೆಂದರೆ, ನೀವು ಅಡ್ವೈಸ್ ಮಾಡದೇ, ಅವರು ಕೇಳುವುದಿಲ್ಲ. ಸದ್ಯಕ್ಕೆ ನಿಮ್ಮದೂ ಒಂದು ಕಾಲು ಅಲ್ಲಿದೆ. ಈಗ ಒಂದು ಕಾಲು ಇತ್ತು, ಒಂದು ತರಿದು ಹೋಗಿದೆ. ಇನ್ನೊಂದು ಕಾಲು ಇದೆ. ಅದೊಂದು ಕಾಲು ಸರಿ ತಂದರೆ, ಇದು ಕುಸಿದೇ ಬೀಳುತ್ತದೆ. ಅದಕ್ಕಾಗಿ ನಾನು

ಕೇಳತಕ್ಕಂಥಾದ್ದು ಸ್ಪಷ್ಟವಾಗಿ, ಅವರೇ ಹೇಳಿದ್ದಾರೆ. ನಾನೇನೂ ಕೃಷ್ಣ ಅಲ್ಲ. ನಾನೇನು ರಾಮ ಅಲ್ಲವೆಂದು ಅವರೇ ಹೇಳಿಕೊಂಡಿದ್ದಾರೆ ನಾನು ಒಪ್ಪುತ್ತೇನೆ. ನಮ್ಮ ಸಿದ್ಧರಾಮಯ್ಯನವರು ಹೇಳಿದರು ಅವರು ಬಹಳ ಫ್ರಾಂಕ್ ಆಗಿ ಒಪ್ಪಿಕೊಂಡಿದ್ದಾರೆ ಎಂದು ನೀವು ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಮಾತನಾಡಿದ್ದೀರಿ. ಮುಖ್ಯಮಂತ್ರಿಗಳಾಗಿ ಮಾತನಾಡುವಾಗ ಒಂದು ತೂಕ ಇಟ್ಟುಕೊಂಡು ಮಾತನಾಡಬೇಕೇ ಹೊರತಾಗಿ ಎಲ್ಲರೂ ಲಗ್ನ ಮಾಡಿಕೊಳ್ಳುತ್ತಾರೆ ಅದಕ್ಕಾಗಿ ಒಂದು ಮನೆ ಇರುತ್ತದೆ ಒಂದು ಬಾಗಿಲು ಇರುತ್ತದೆ ಒಂದು ಕಿಟಕಿ ಇರುತ್ತದೆ ಲಗ್ನ ಮಾಡಿಕೊಂಡ ತಕ್ಷಣ ಒಂದು ಸಾವಿರ ಜನರ ಮುಂದೆ ಲಗ್ನ ಮಾಡಿಕೊಂಡಿದ್ದೇನೆ ತಾಳಿ ಕಟ್ಟಿದ್ದೇನೆಂದು ಹೇಳಿ ಯಾರೂ ಕೂಡ ಬೀದಿಗೆ ಬರುವುದಿಲ್ಲ. ಮನೆಯಲ್ಲೇ ಇರುತ್ತಾರೆ ಹಾಗೆ ಮುಖ್ಯಮಂತ್ರಿಗಳು ಫ್ರಾಂಕ್ ಆಗಿ ಇದ್ದಾರೆ ಎಂದು ಹೇಳಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು ಈ ರೀತಿಯಲ್ಲಿದ್ದಾರೆಂದು ಜನ ನಮ್ಮನ್ನು ಹೀಗೆ ಹರಾಜು ಹಾಕಬಾರದು. ಹಿಪೊಕ್ರೇಟ್ ಅಂದರೆ ಹೇಳಿಕೊಳ್ಳಲಿ. ಈ ರೀತಿಯಾಗಿ ರಾಜ್ಯಕ್ಕೆ ಅವಮಾನ ಮಾಡತಕ್ಕಂಥ ಕೆಲಸ ನೀವು ಮಾಡಿದರೆ ಅದನ್ನು ಸಮರ್ಥನೆ ಮಾಡಿಕೊಳ್ಳುತ್ತೀರಿ ಅಂದರೆ ಇದಕ್ಕಿಂತಲ್ಲೂ ನಾಚಿಕೆಗೇಡಿನತನ ಏನು? ನಾನು ಹೇಳಬೇಕಾಗುತ್ತದೆ. ನೀವು ಮುಖ್ಯಮಂತ್ರಿಗಳಾಗಿದ್ದೀರಿ. ನೀವು ಬರೀ ಜೆ.ಹೆಚ್. ಪಟೇಲ್ ಆಗಿದ್ದರೆ ನಾವು ಹೇಳುತ್ತಿರಲಿಲ್ಲ. ನೀವು ನಮ್ಮ ಪ್ರತಿನಿಧಿಯಾಗಿದ್ದೀರಿ. ರಾಜ್ಯದ 5 ಕೋಟಿ ಜನರ ನಾಯಕರು ಆಗಿದ್ದೀರಿ. ಆ ಒಂದು ಪ್ರಶ್ನೆ ಇವತ್ತಿನ ದಿವಸ ಇದೆ ಹೊರತಾಗಿ ಬೇರೆ ಯಾವುದೂ ಸಂಬಂಧ ಇಲ್ಲ. ನಿಮ್ಮ ಫ್ರೆಂಡ್‌ಶೀಪ್ ಅಲ್ಲ. ಕೇಳಿದರೂ ಇದನ್ನು ಅವರ ಕಿವಿಯಲ್ಲಿ ಹೇಳತಕ್ಕಂಥ ಮಾತಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಅಧ್ಯಕ್ಷರೇ,

(ಮಾನ್ಯ ಅಧ್ಯಕ್ಷರು ಶ್ರೀ ರಮೇಶ್ ಕುಮಾರ್‌ರವರು ಪೀಠವನ್ನಲಂಕರಿಸಿದರು)

ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಆಪ್ ಕಿ ಅದಾಲತ್‌ನಲ್ಲಿ ಇರಬಹುದು ಅಥವಾ ಹೊರಗಡೆ ಇರಲಿ ಹೇಳಿದ್ದರಲ್ಲಿ ತಪ್ಪೇನು ಇದೆ? ಅವರು ಆ ರೀತಿ ಹೇಳಿದ್ದಕ್ಕೆ ಬಹಳ ದೊಡ್ಡ ಅವಮಾನ ಆಗಿದೆ., ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿ ಹೇಳಿಬಿಟ್ಟಿದ್ದಾರೆ ಎನ್ನತಕ್ಕಂಥ ಮಾತನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದಾರೆ. ಅವರು ಅಂತಹ ಅವಮಾನ ಆಗತಕ್ಕಂಥಾದ್ದನ್ನು ಏನು ಮಾಡಿದ್ದಾರೆ. ಕಳ್ಳತನ ಮಾಡಿದ್ದಾರೋ, ಜೈಲಿಗೆ ಹೋಗತಕ್ಕಂಥ ಕೆಲಸ ಏನಾದರೂ ಮಾಡಿದ್ದಾರೋ? ಮತ್ತೇನಾದರೂ ಅವರು ಮಾಡಿದ್ದಾರೋ? ಅವರು ಆ ತರಹ ಏನು ಮಾಡಿದ್ದಾರೆ?

(ಗೊಂದಲ)

ಶ್ರೀ ಯು.ಆರ್. ಸಭಾಪತಿ:- ಕರ್ನಾಟಕ ರಾಜ್ಯದ ಜನತೆಗೆ ಅವಮಾನ ಮಾಡಿದ್ದುದು...

(ಗೊಂದಲ)

ಶ್ರೀ ಯು.ಆರ್. ಸಭಾಪತಿ:- ಪಟೇಲರು ಮುಖ್ಯಮಂತ್ರಿ ಸ್ಥಾನದಲ್ಲಿದ್ದುಕೊಂಡು ಅಂತಹ ಮಾತು ಮಾತನಾಡಿದ್ದು ಇಡೀ ಕರ್ನಾಟಕ ರಾಜ್ಯಕ್ಕೆ ಅವಮಾನ.

ಶ್ರೀ ಎಲ್.ಆರ್. ಶಿವರಾಮೇಗೌಡ:- ಕರ್ನಾಟಕ ರಾಜ್ಯದಲ್ಲಿ ನೀವೇ ಅಲ್ಲ ಮನುಷ್ಯರು. ನಾವೂ ಇದ್ದೇವೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಅವರು ಏನು ಮಾಡಿದರು? ಅವರು ಆಪ್ ಕಿ ಅದಾಲತ್‌ನಲ್ಲಿ ಏನು ಹೇಳಿದರು?

(ಗೊಂದಲ)

ಅಧ್ಯಕ್ಷರು:- ಡಾಕ್ಟರ್ ಕರ್ಕಿಯವರು ಖುಷಿಯಾಗಿದ್ದಾರೆ. ಸಭಾಪತಿಯವರು ಅವರಂತೆ ಮಾತನಾಡುತ್ತಿದ್ದಾರೆ ಎಂದು ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅದಕ್ಕೆ ಮಾನ್ಯ ಅಧ್ಯಕ್ಷರೇ, ಈ ಜವಾಬ್ದಾರಿಯನ್ನು ಅವರು ಹೊತ್ತುಕೊಂಡು ಹೋಮ್ ಮಿನಿಸ್ಟರ್ ಆಗಿದ್ದು ಅವರ ಕಣ್ಣು ಎದುರೇ 30 ಕಿಲೋಮೀಟರ್ ಮೇಲೆ ಇಂತಹ ಘಟನೆ ನಡೆಯಬೇಕು ಅಂದರೆ ಅದರ ಸಂಪೂರ್ಣವಾದ ಜವಾಬ್ದಾರಿಯನ್ನು ಅವರು ಹೊತ್ತುಕೊಳ್ಳಬೇಕಾಗುತ್ತದೆ. ಯಾವ ಅಧಿಕಾರಿಗಳು ಈ ಒಂದು ಫೈರಿಂಗ್‌ನಲ್ಲಿ ನೇರವಾಗಿ ಕಾನೂನನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ವರ್ತನೆ ಮಾಡಿದ್ದಾರೆ ಅವರನ್ನು ತಕ್ಷಣ ಸಸ್ಪೆಂಡ್ ಮಾಡಬೇಕು. ನಮ್ಮ ನ್ಯಾಯಾಂಗ ತನಿಖೆ ವರದಿ ಬರುವವರೆಗೂ, ಆಮೇಲೆ ಮಾನ್ಯ ಮುಖ್ಯಮಂತ್ರಿಗಳು ಈ ಒಂದು ಚುನಾವಣೆಯನ್ನು ಗೆಲ್ಲಬೇಕು ಎನ್ನುವಂತಹ ಒಂದು ದೃಷ್ಟಿಕೋನವನ್ನು ಇಟ್ಟುಕೊಂಡು ಈ ಒಂದು ಘಟನೆಗೆ ಪ್ರಚೋದನೆ ಮತ್ತು ಪ್ರೋತ್ಸಾಹ ಮಾಡಿದ್ದಕ್ಕಾಗಿ ಅವರು ಆ ನೈತಿಕ ಹೊಣೆಯನ್ನು ಹೊತ್ತು ಅವರು ರಾಜೀನಾಮೆಯನ್ನು ಕೊಡಬೇಕು. ಆ ಒಂದು ಕಾರಣದಿಂದ. ಮತ್ತು ಅವರು ಹೇಳಿದರು ಏನು ಬೇಕು ಅವರು ಏನು ಕಳ್ಳತನ ಮಾಡಿದ್ದಾರೆಯೇ ಏನು ಮಾಡಿದ್ದಾರೆಯೇ ಎಂದು. ಅವರು ಕಳ್ಳತನ ಮಾಡಿದ್ದಾರೆಂದು ನಾವು ಹೇಳಿದ್ದೇವೆಯೇ? ಅವರು ಹೇಳಿದರು ನನಗೇನೂ ಪ್ರೀತಿ ಇಲ್ಲ ನನಗೆ ಪ್ರೀತಿ ಇದ್ದಿದ್ದು ಎರಡೇ ವಸ್ತುಗಳು. ಒಂದು ಹೆಂಡ ಮತ್ತು ಒಂದು ಹೆಣ್ಣು ಎನ್ನತಕ್ಕಂಥ ಮಾತನ್ನು ಝೀ ಟಿ.ವಿ. ಯಲ್ಲಿ ಹೇಳಿದರು. ಅದೇನು ತಪ್ಪು ಎಂದು ಅವರು ಕೇಳಿದರು. ಅದು ತಪ್ಪಲ್ಲ ಎಂದು ನೀವು ಸಮರ್ಥನೆ ಮಾಡಿಕೊಳ್ಳತಕ್ಕಂಥಾದ್ದು ಇದ್ದಿದ್ದರೆ ಒಬ್ಬ ಮುಖ್ಯಮಂತ್ರಿಯಾಗಿ, ಒಬ್ಬರು ಜೆ.ಹೆಚ್. ಪಟೇಲರಾಗಿ ಅವರ ಮನೆಯಲ್ಲಿ ಮಾತನಾಡಿದ್ದರೆ ಅವರು ಒಂದು ಸಂಘಸಂಸ್ಥೆಯಲ್ಲಿ ಮಾತನಾಡಿದ್ದರೆ ನಾನು ಅಬ್‌ಜಕ್ಟ್ ಮಾಡುವುದಿಲ್ಲ. ಇಡೀ ಆ ಮೀಡಿಯಾ ಮುಖಾಂತರ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು ಮಾತನಾಡುತ್ತಾರೆ ಎನ್ನತಕ್ಕಂಥ ಮಾತುಗಳನ್ನು ನಿಮ್ಮ ಮುತ್ತಿನಂತಹ ಮಾತುಗಳನ್ನು ನಮ್ಮ ರಾಜ್ಯದ ಜನ ಅಲ್ಲ ಹೊರಗಿನ ದೇಶದ ಜನ ಕೂಡ ಕೇಳುತ್ತಾರೆ. ಅವರು ಎಷ್ಟು ಒಳ್ಳೆಯವರಿದ್ದಾರೆ ಎನ್ನತಕ್ಕಂಥಾದ್ದನ್ನು ಅವರೇ ತೀರ್ಮಾನ ಮಾಡುತ್ತಾರೆ.

(ಗೊಂದಲ)

ಶ್ರೀ ಹೆಚ್. ಶಿವಪ್ಪ:- ಮಾನ್ಯ ಅಧ್ಯಕ್ಷರೇ, ಅವರಿಗೆ ಜಲಸ್...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈಗ ನೀವು ಹೋಗಿ ಸಮರ್ಥನೆ ಮಾಡಿಕೊಳ್ಳಿ ನಾನು ಬೇಡ ಎಂದು ಹೇಳುವುದಿಲ್ಲ. ಅವರು ಒಬ್ಬ ಒಳ್ಳೆಯ ವಕೀಲರು.

ಶ್ರೀ ಹೆಚ್. ಶಿವಪ್ಪ:- ಬೇರೆಯವರು ಮಾಡುವುದನ್ನು ನೋಡಿ ಸಹಿಸಿಕೊಳ್ಳದೆ ಈ ರೀತಿ ಹೇಳುತ್ತಿದ್ದೀರಿ. ಇನ್ನೊಬ್ಬರು ಮಾಡತಕ್ಕಂಥಾದ್ದನ್ನು ನೋಡಿ ಸಂತೋಷ ಪಡುವಂತಾದ್ದು ನಿಮಗೆ ಇಲ್ಲ. You can jealous of others.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅವರು ಮಾಡುವುದನ್ನು ನೋಡಿ ಇವರೆಲ್ಲರೂ ಸಂತೋಷ ಪಡುತ್ತಾರಂತೆ. ಅದು ಅವರಿಗೆ ಇರಲಿ. ಆದರೆ ಮರ್ಯಾದೆ ಮಾತ್ರ ನಮಗೆ ಕೊಡಿ. ನಮ್ಮ ರಾಜ್ಯಕ್ಕೆ ಕೊಡಿ ನಮ್ಮ ಜನರಿಗೆ ಕೊಡಿ. ಕರ್ನಾಟಕ ರಾಜ್ಯದ 5 ಕೋಟಿ ಜನರ ಮಾನಮಾರ್ಯಾದೆಯನ್ನು ನೀವು ರಕ್ಷಣೆ ಮಾಡಿ. ನಾನು ಅಷ್ಟೇ ಕೇಳುತ್ತೇನೆ.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ:- ಯಾರು ಹಿಪೊಕ್ರೆಟ್ ಅಂದರೆ ಮಾಡಬಾರದನ್ನೆಲ್ಲಾ ಮಾಡಿ ಮುಚ್ಚಿಕೊಳ್ಳುತ್ತಾರಲ್ಲಾ ಅವರು ಹಿಪೋಕ್ರಾಟ್ಸ್. ಸತ್ಯೆ ಹೇಳತಕ್ಕಂಥವು ಹಿಪೋಕ್ರಾಟ್ಸ್ ಅಲ್ಲ.

(ಗೊಂದಲ)

ಅಧ್ಯಕ್ಷರು:- ಈಗ ಖರ್ಗೆಯವರೇ, ನಿಮ್ಮ ಅಭಿಪ್ರಾಯ ಏನು? ಅವರು ಅದನ್ನು ಅಡ್ಮಿಟ್ ಮಾಡಿಕೊಳ್ಳಬಾರದಾಗಿತ್ತು ಎಂಬುದೇ ಅಥವಾ ಬೇರೆ ಏನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾನು ಹೇಳಿದ್ದುದು ಏನೆಂದರೆ ಮುಖ್ಯಮಂತ್ರಿಗಳ ಅಡ್ಮಿಟ್‌ಗಿಂತಲೂ ಕೆಲವನ್ನು ನೀವು ಮಾಡುತ್ತೀರಿ. ನಾವು ಮಾಡುತ್ತೇವೆ. ಬೇರೆಯವರು ಮಾಡಬಹುದು.

ಅಧ್ಯಕ್ಷರು:- ಇಲ್ಲಾ ಇಲ್ಲಾ...

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾನು ಹೇಳುವುದನ್ನು ಸ್ವಲ್ಪ ಕೇಳು ಲಘುವಾಗಿ ತೆಗೆದುಕೊಳ್ಳಬೇಡಿ. ನಾನು ಅವರಿಗೆ ಆ ಮಾತನ್ನು ಬಿಚ್ಚಿ ಹೇಳಿದೆ. ನಾವು ಸಾವಿರಾರು ಜನರ ಎದುರು ಲಗ್ನ ಮಾಡಿಕೊಳ್ಳುತ್ತೇವೆಂದು ಹೇಳಿ ಎಲ್ಲರೂ ಕೂಡ ಬಯಲಿಗೆ ಬರುವುದಿಲ್ಲ ಮನೆ ಇರುತ್ತದೆ ಕಿಟಕಿ ಇರುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿದೆ. ಅದಕ್ಕೆ ನೀವು ಇಷ್ಟು ಏಕೆ ನಗುವುದು? ಮತ್ತೆ ಮಾಡಿದ್ದೇವೆಂದು ಹೇಳಿದ್ದಕ್ಕೆ ಏಕೆ ನಗುತ್ತೀರಿ ಎಂಬುದು ನನಗೆ ಗೊತ್ತಾಗಲಿಲ್ಲ. ಆದರೆ ಕೆಲವು ಮಾತಿಗೆ ನಾವು ಉತ್ತರ ಕೊಡಬೇಕಾಗುತ್ತದೆ. ಕೆಲವು ಮಾತುಗಳನ್ನು ಎಲ್ಲಿ ಹೇಳಬೇಕು ಆ ಜಾಗದಲ್ಲಿ ಹೇಳಿ.

ಅಧ್ಯಕ್ಷರು:- ಮಾನ್ಯ ಶಿವಪ್ಪನವರು ಶಿವರಾಮೇಗೌಡರ ಮಾತಿನ ಒಳ ಅರ್ಥ ನನಗೆ ಅನಿಸಿದ್ದು ಏನೆಂದರೆ ಎಕ್ಸ್‌ಟ್ರಾ ಮ್ಯಾರಿಟಲ್ ರಿಲೇಷನ್‌ಶಿಫ್ ಇರತಕ್ಕಂಥವರು ಬಹಳ ಜನರು ಇರುತ್ತಾರೆ. ಮತ್ತೆ ಈ ವೈನ್ ತೆಗೆದುಕೊಳ್ಳುವವರು ಇರುತ್ತಾರೆ. ಅವರು ಅದನ್ನು ಅಡ್ಮಿಟ್ ಮಾಡಿಕೊಳ್ಳದೇ ಕನ್ಸೀಲ್ ಮಾಡಿಕೊಳ್ಳುತ್ತಾರೆ. ಇವರು ಅಡ್ಮಿಟ್ ಮಾಡಿಕೊಂಡಿದ್ದಾರೆ ಎನ್ನುವ...

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಮುಖ್ಯಮಂತ್ರಿಗಳು ಆ ರೀತಿ ಹೇಳಿಯೇ ಇಲ್ಲ. ಆಪ್ ಕಿ ಅದಾಲತ್‌ನ್ನು ನಾನು ಕೇಳಿದ್ದೇನೆ...

ಅಧ್ಯಕ್ಷರು:- ಒಂದು ನಿಮಿಷ. ಮಾಡಿ ಮಾಡಿದ್ದನ್ನು ಒಪ್ಪಿಕೊಳ್ಳಬಾರದು ಎನ್ನುವುದೇ ಅಥವಾ ಮಾಡಲೇಬಾರದು ಎನ್ನುವುದೇ ಅಥವಾ ಮಾಡಬಹುದು ಮಾಡಿದ್ದನ್ನು ಒಪ್ಪಿಕೊಳ್ಳಬೇಕು ಎನ್ನುವುದು ವಾದವೇ? which is the proper stand, according to you.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅದಕ್ಕೆ ನಾನು ತಮ್ಮ ರೂಲಿಂಗ್ ಕೇಳುತ್ತೇನೆ.

MR. SPEAKER:- I am yet to follow you friends. I will take some time...

SRI H. SHIVAPPA:- Ruling is reserved.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈಗ ಹೇಗೆ ರೂಲಿಂಗ್ ರಿಸರ್ವ್ ಹಾಗೆ ಅವರಿಗೆ ಎಷ್ಟೇ ಅನಿಸಿಕೆ ಇದ್ದರೂ ಕೂಡ he could have reserved his ruling. ತಾವು ಈ ರೂಲಿಂಗ್‌ನ್ನು ಹೇಗೆ ರಿಜರ್ವ್ ಇಟ್ಟಿರೋ ತಮಗೆ ಹೇಗೆ ಇಕ್ಕಟ್ಟಿಗೆ ಬಂತೋ ಅದೇ ರೀತಿಯಾಗಿ ಎಷ್ಟೋ ಸಮಸ್ಯೆಗಳು ಬರುತ್ತವೆ. ಅವರ ಬಗ್ಗೆ ನಮಗೂ ಗೌರವ ಇದೆ. ಅವರ ಬಗ್ಗೆ ಲಘುವಾಗಿ ಮಾತನಾಡುತ್ತೇವೆ ಎಂದು ಅಲ್ಲ. ಅವರಿಗೆ ಸೋಷಿಯಲಿಸ್ಟ್ ಬ್ಯಾಕ್‌ಗ್ರೌಂಡ್ ಇದೆ ಆ ದೃಷ್ಟಿಯಿಂದ ಮಾತನಾಡುತ್ತೇವೆ. ಆದರೆ ಅವರು ಈಗ ಎಲ್ಲಾ ಕೆಟ್ಟು ಹೋಗಿದ್ದಾರೆ ಬಿಡಿ. ಆ ಮಾತು ಬೇರೆ. ಅದಕ್ಕೆ ನನ್ನ ಹೇಳಿಕೆ ಏನೆಂದರೆ ಈ ಒಂದು ವಾತಾವರಣ...

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ತಾವು ವಾಟಾಳರಿಗೆ ಬಹಳ ಪ್ರಿಯವಾದ ವಸ್ತು ಎಂದು ಹೇಳಿದಿರಿ.

ಅಧ್ಯಕ್ಷರು:- ಸಬ್ಜೆಕ್ಟ್ ಎಂದು ಅಂದೆ.

ಶ್ರೀ ವಾಟಾಳ್ ನಾಗರಾಜ್:- ನನಗೆ ಸಂಬಂಧ ಇಲ್ಲದೆ ಇದ್ದರೂ ಸಂಬಂಧ ಇದೆ ಕಲ್ಪಿಸಿದ್ದೀರಿ. ಪಾಪ ತಮಗೆ ಏನೂ ಸಂಬಂಧ ಇಲ್ಲದಿದ್ದರೂ ತಮ್ಮನ್ನು ಗುರುತಿಸಿದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸುಮ್ಮನೆ ಒಂದಕ್ಕೊಂದು ಹೋಲಿಸಬೇಡಿ.

ಶ್ರೀ ವಾಟಾಳ್ ನಾಗರಾಜ್:- ತಾವು ಇದನ್ನು ತೀವ್ರವಾಗಿ ತೆಗೆದುಕೊಳ್ಳುವುದು ಬೇಡ. ಇದರ ಬಗ್ಗೆ ಬಹಳ ಸುದೀರ್ಘವಾಗಿ ಚರ್ಚೆಮಾಡಬೇಕಾಗುತ್ತದೆ. ಏಕೆಂದರೆ ತಾವು ಮೂರು ಪ್ರಶ್ನೆಗಳನ್ನು ಎತ್ತಿದ್ದೀರಿ. ನಾವು ಅಷಾಡಭೂತಿತನದಿಂದ ಇರಬೇಕೇ ಬೇಡವೇ ಎನ್ನುವುದು ಒಂದು ಪ್ರಶ್ನೆ. ಎರಡನೇಯದು ನಾವು ಮಾಡಿದ್ದನ್ನು ಮಾಡಿಲ್ಲ ಎಂದು ಹೇಳಬೇಕೇ ಎನ್ನುವಂತಾದ್ದು;

ಮೂರನೇಯದು ಮಾಡಿದ್ದನ್ನು ಮಾಡಿದ್ದೇನೆಂದು ಧೈರ್ಯವಾಗಿ ಹೇಳುವಂತಾದ್ದು. ಇದರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಬೇಕಾಗುತ್ತದೆ. ಇದರ ಬಗ್ಗೆ ಅನೇಕರದ್ದು ಅವರ ಅತ್ಮಾವಲೋಕನ ಮಾಡಿಕೊಳ್ಳಬೇಕಾಗುತ್ತದೆ.

3.50 ಪಿ.ಎಂ.

ಈ ಸದನದಲ್ಲಿ, ಮಂತ್ರಿಗಳದ್ದು, ಶಾಸಕರದ್ದು, ಅಧಿಕಾರಿಗಳದ್ದು, ಪತ್ರಕರ್ತರದ್ದು ಹಾಗೂ ಇನ್ನೂ ಅನೇಕರದ್ದು ಆತ್ಮಾವಲೋಕನ ಆಗಬೇಕಾಗಿದೆ. ಈ ಸಂದರ್ಭದಲ್ಲಿ ತಾವು ಅವಕಾಶಕೊಡುವುದಾದರೆ ಈ ಬಗ್ಗೆ ಸಮಗ್ರವಾದ ಬೆಳಕನ್ನು ಚೆಲ್ಲೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೆ, ಕೊನೆಯದಾಗಿ ನಾನು ಸ್ಪಷ್ಟಪಡಿಸಿದ್ದೇನೆ, ನನ್ನ ಅನಿಸಿಕೆಗಳನ್ನು ಕೂಡ ಇವತ್ತು ತಮ್ಮ ಮುಂದೆ ಇಟ್ಟಿದ್ದೇನೆ. ಕೆಲವು ಫ್ಯಾಕ್ಟ್ಸ್ ಅಂಡ್ ಫಿಗರ್ಸ್ ಇಟ್ಟಿದ್ದೇನೆ. ಈ ಸರ್ಕಾರ ಬಂದ ಮೇಲೆ ಕೆಲವು ಸಪ್ರೆಸ್ ಮಾಡಿದ್ದಾರೆ. ಕೆಲವು ರಿಜಿಸ್ಟರ್ ಮಾಡಿಲ್ಲ. ಆದರೂ ಕೂಡ ಓವರ್ ಆಲ್ ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ನೋಡಿದಾಗ ಖಂಡಿತವಾಗಿ ಈ ಸರ್ಕಾರ ವಿಫಲವಾಗಿದೆ ಎನ್ನುವ ದೃಷ್ಟಿಯಿಂದಲೇ ಮುಖ್ಯಮಂತ್ರಿಯವರು ರಾಜೀನಾಮೆ ಕೊಡಬೇಕೆಂದು ನಾನು ಕೇಳಿದ್ದುದು. ಪೋಲೀಸ್ ಫೈರಿಂಗ್ ಮತ್ತು ಲಾಕಪ್ ಡೆತ್ ಏನಿವೆ ಅವುಗಳನ್ನೆಲ್ಲಾ ನಾವು ಗಮನಕ್ಕೆ ತೆಗೆದುಕೊಂಡಾಗ ಈ ಒಂದು ಸ್ಥಾನವನ್ನು ಅವರು ಖಾಲಿ ಮಾಡಬೇಕು ಎನ್ನತಕ್ಕಂಥಾದ್ದೇ ನಮ್ಮ ಅಭಿಪ್ರಾಯ. ಪೋಲಿಸ್ ಫೈರಿಂಗ್‌ನಲ್ಲಿ ಇವತ್ತಿನ ದಿವಸ ಯಾರು ಇನ್‌ವಾಲ್ವ್ ಆಗಿದ್ದಾರೋ ಅವರನ್ನು ತಕ್ಷಣ ಸಸ್ಪೆಂಡ್ ಮಾಡಬೇಕು. ಪೆಂಡಿಂಗ್ ಎನ್‌ಕ್ವೈರಿ. ಮುಂದಿನ ರಿಪೋರ್ಟ್ ಅವರ ಪರವಾಗಿ ಬಂದಾಗ ಅವರನ್ನು ರೀ-ಇನ್‌ಸ್ಟೇಟ್ ಮಾಡಬಹುದು. ಇಲ್ಲದಿದ್ದರೆ ಬಡವರ ಮೇಲೆ ದೊಡ್ಡ ಅನ್ಯಾಯಮಾಡಿದ ಹಾಗಾಗುತ್ತಿದೆ; ಮತ್ತು ಇದಕ್ಕೆ ಪ್ರೋತ್ಸಾಹ ಕೊಟ್ಟಂತೆ ಆಗುತ್ತದೆ. ಮುಂದೆ ಬರತಕ್ಕಂಥ ಅಧಿಕಾರಿಗಳೆಲ್ಲರೂ ಕೂಡ ಇದೇ ರೀತಿಯಾಗಿ ವರ್ತನೆ ಶುರು ಮಾಡುತ್ತಾರೆ. ಈಗ ನಿಮ್ಮ ಸರ್ಕಾರ ಇದೆ, ನಿಮ್ಮ ಮಾತನ್ನು ಕೇಳಿ ಫೈರಿಂಗ್ ಮಾಡಿದರು ನಾಳೆ ಒಬ್ಬ ರೆಕ್ಲೆಸ್ ಮಿನಿಸ್ಟರ್ ಬಂದು ಅವನೂ ಒಂದು ಹೇಳಿಬಿಡುತ್ತಾರೆ, ಅದೇ ರೀತಿಯಾಗಿ ಮಾಡುತ್ತಾ ಹೋದರೆ, ಈ ಪ್ರಜಾಪ್ರಭುತ್ವದಲ್ಲಿ ನಿಜವಾಗಲೂ ಯಾರಾದರೂ ಪ್ರತಿಭಟನೆ ಮಾಡಬೇಕು, ಕಾನೂನು ರೀತಿಯಾಗಿ ನಡೆದುಕೊಂಡು ಹೋಗಬೇಕೆಂದರೆ ಅವರಿಗೆ ಆಗುವುದಿಲ್ಲ. ಅವರ ಹಕ್ಕುಗಳನ್ನು ಮೊಟಕುಗೊಳಿಸದಂಥಾಗುತ್ತದೆನ್ನತಕ್ಕ ಮಾತನ್ನು ನಾನು ಇವತ್ತು ಹೇಳಿ ಈ ಸರ್ಕಾರಕ್ಕೆ ಅಧಿಕಾರದಲ್ಲಿ ಇರತಕ್ಕಂಥ ನೈತಿಕ ಹಕ್ಕು ಇಲ್ಲ. ಇವತ್ತು ಏನೋ ನಮ್ಮ ಪ್ರಧಾನ ಮಂತ್ರಿಗಳು ನಮ್ಮ ಕರ್ನಾಟಕದವರೇ ಇದ್ದಾರೆಂದು ತಿಳಿದುಕೊಂಡು ಸುಮ್ಮನೆ ಇದ್ದರೂ ಕೂಡ ಅವರು ಈ ಸಮಸ್ಯೆ ಬಗ್ಗೆ ಪರಿಹಾರ ಕಂಡು ಹಿಡಿಯಲಿಲ್ಲ. ಇವರು ಅಧಿಕಾರಕ್ಕೆ ಬಂದು ಎಂಟು ಹತ್ತು ತಿಂಗಳಾಯಿತು, ಇವರ ಬಂದು ಇನ್ನೂ ಹದಗೆಡಿಸಿದರು, ಅದಕ್ಕಾಗಿ ಇವರು ನೈತಿಕ ಹೊಣೆಯನ್ನು ಹೊತ್ತು ರಾಜೀನಾಮೆಯನ್ನು ಕೊಡಬೇಕೆಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ತಕ್ಷಣ ಸಂಬಂಧಪಟ್ಟ ಪೋಲಿಸ್ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಬೇಕೆಂದು ಹೇಳುತ್ತೇನೆ. ತಮ್ಮ ಮಾತು ಅವರು ಕೇಳುವುದರಿಂದ ತಾವು ಸರ್ಕಾರಕ್ಕೆ ಹೇಳಬೇಕು. ಅವರು ಜನರ ಮಾತನ್ನೂ

ಕೇಳುವುದಿಲ್ಲ. ಅವರ ಆಡಳಿತದ ವಿರುದ್ಧ ಇವತ್ತು ಚಿಕ್ಕನಾಯಕನ ಹಳ್ಳಿಯಲ್ಲಾಗಲೀ, ರಾಮನಗರದಲ್ಲಾಗಲೀ ತೀರ್ಮಾನವನ್ನು ಕೊಟ್ಟಿದ್ದಾರೆ. ಅವರ ಫೈರಿಂಗ್ ವಿರುದ್ಧ, ಅವರ ಲಾ ಅಂಡ್ ಆರ್ಡರ್ ವಿರುದ್ಧ, ಎಲೆಕ್ಟ್ರಿಸಿಟಿ ಬಿಲ್ ಹೆಚ್ಚು ಮಾಡಿರುವುದರ ವಿರುದ್ಧ ಬಸ್ ಚಾರ್ಜ್ ಹೈಕ್ ಮಾಡುತ್ತೇವೆಂದು ಹೇಳಿರುವುದರ ವಿರುದ್ಧ ಹೀಗೆ ಇಲ್ಲದೇ ಇರತಕ್ಕಂಥ ಸಮಸ್ಯೆಗಳನ್ನು ಸೃಷ್ಟಿ ಮಾಡಿಕೊಳ್ಳುವುದು ಮತ್ತೆ ಬಿಡಿಸಿಕೊಳ್ಳತಕ್ಕಂಥ ಪ್ರಯತ್ನ ಮಾಡುವುದು ಹೀಗೆ ಇವರ ಕೆಲಸಗಳು ನಡೆದಿವೆ. ಅದಕ್ಕಾಗಿ ದಯವಿಟ್ಟು, ತಮ್ಮ ಮಾತು ಅಂತೂ ಕೇಳೇ ಕೇಳುತ್ತಾರೆ, ಅಟ್‌ಲೀಸ್ಟ್ ತಾವು ಅವರಿಗೆ ಹೇಳಿ, ಈ ರಾಜ್ಯಕ್ಕೆ ಸುಖ ಆಗಬೇಕು ಎಂದರೆ ಹೊಸ ಮುಖ್ಯಮಂತ್ರಿಗಳನ್ನು ಈ ರಾಜ್ಯಕ್ಕೆ ತನ್ನಿ. ಮುಂದೆ ನೋಡೋಣ.

+ ಶ್ರೀ ವೈ. ರಾಮಕೃಷ್ಣ (ಆನೇಕಲ್):- ಸನ್ಮಾನ್ಯ ಅಧ್ಯಕ್ಷರೆ, ಇದರ ಅಡ್ಮಿಸಿಬಿಲಿಟಿ ಪ್ರಶ್ನೆ ಬಂದಾಗ ತಾವು ಏನು ಡಿಸೀಷನ್ ತೆಗೆದುಕೊಂಡಿದ್ದೀರಿ, ಅದು ಕರೆಕ್ಟ್ ಆಗಿದೆ. ಏಕೆಂದರೆ, ಅವರು ಕೊಟ್ಟಿರತಕ್ಕಂಥ ನೋಟೀಸ್‌ನಲ್ಲಿ ಸ್ವಲ್ಪ ತಪ್ಪು ಇತ್ತು. ಒಂದು ವಿಷಯವನ್ನು ಪ್ರಸ್ತಾಪ ಮಾಡುವ ಬದಲು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದರ ಸಲುವಾಗಿ ಇದನ್ನು ಯಾವ ರೂಲ್ ಪ್ರಕಾರವಾಗಿ ತರಬೇಕಾಗಿತ್ತೋ ಅದರ ಪ್ರಕಾರ ತಾವು ತಂದಿದ್ದೀರಿ. ಆದರೆ, ವಿಚಾರ ಮಾತ್ರ ಗಹನವಾದುದು. ಈ ಮನೆಯಲ್ಲಿ ಇದಕ್ಕಿಂತ ಹೆಚ್ಚಿನ ವಿಚಾರ ಇರಲಾರದೆಂದು ನನಗನಿಸುತ್ತದೆ. ಅನಾವಶ್ಯಕವಾಗಿ, ಅವಶ್ಯಕತೆಗಿಂತ ಹೆಚ್ಚಾಗಿ ಗೋಲಿಬಾರ್ ಮಾಡಿ ಬಡ ಜನರನ್ನು ಕೊಂದಿರತಕ್ಕಂಥಾದ್ದು ಎಂದು ಹೇಳಿದಾಗ ಎಂಥವರ ಮನಸ್ಸಿನ ಮೇಲೂ ತೀವ್ರ ಪರಿಣಾಮ ಬೀರುತ್ತಿದೆ. ಅದಕ್ಕೋಸ್ಕರವಾಗಿ ನಾನು ಈ ವಿಚಾರಕ್ಕೆ ಮಾತ್ರ ಸಿಮೀತವಾಗಿರುತ್ತೇನೆ. ಇದರ ಬಗ್ಗೆ ಸನ್ಮಾನ್ಯ ಖರ್ಗೆಯವರು ಬಹಳ ಗಹನವಾಗಿ ಮತ್ತು ಸುದೀರ್ಘವಾಗಿ ಈ ಸಭೆಯ ಮುಂದಿಟ್ಟಿದ್ದಾರೆ. ತಾವು ಇದನ್ನು ಯಾವ ರೂಲ್‌ನಲ್ಲಿ ತಂದಿದ್ದೀರಿ? ಅದರ ಫಲಿತಾಂಶ ಏನೆಂದು ನಮಗೆ ಗೊತ್ತಾಗುತ್ತದೆ. ಅದಕ್ಕೋಸ್ಕರ ನಾನು ಎಲ್ಲಾ ವಿಷಯವನ್ನು ರಿಪೀಟ್ ಮಾಡುವ ಬದಲಾಗಿ ಒಂದು ಸಲಹೆಯನ್ನು ತಮ್ಮ ಮುಂದೆ ಇಡುವುದಕ್ಕೆ ನಮ್ಮ ಪಕ್ಷದ ಪರವಾಗಿ ನಾನು ನಿಂತಿದ್ದೇನೆ. ಈ ವಿಷಯವನ್ನು ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡುವುದಕ್ಕೆ ಸರ್ಕಾರದವರು ಏನು ನಿರ್ಧಾರ ತೆಗೆದುಕೊಂಡಿದ್ದಾರೆ, ಅದಕ್ಕಿಂತ ಒಂದು ಸದನದ ಸಮಿತಿ ಮಾಡಿ. ನಾನು ಇದನ್ನು ಏತಕ್ಕೆ ಹೇಳುತ್ತೇನೆಂದರೆ, ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿ 6 ತಿಂಗಳೊಳಗೆ ರಿಪೋರ್ಟ್ ಕೊಡಬೇಕೆಂದು ಮಾಡಿದರು ಸಹ 6 ವರ್ಷಗಳಾದರೂ ರಿಪೋರ್ಟ್ ಕೊಡುವುದಿಲ್ಲ. ಇದರಿಂದ ಬಹಳ ನಿಧಾನವಾಗುವುದರ ಜೊತೆಗೆ ಕೋಟ್ಯಾಂತರ ರೂಪಾಯಿಗಳು ಖರ್ಚಾಗುತ್ತವೆ ಎಂಬುದನ್ನು ಸರ್ಕಾರ ಆಲೋಚನೆ ಮಾಡಬೇಕು. ಇಂಥಾ ಗಂಭೀರವಾದ ವಿಚಾರವನ್ನು ಚರ್ಚೆ ಮಾಡುವುದು ಖಂಡಿತವಾಗಿ ಅತ್ಯಾವಶ್ಯಕವಾಗಿದೆ. ಆದುದರಿಂದ, ಈ ಬಗ್ಗೆ ಒಂದು ಸದನದ ಸಮಿತಿಯನ್ನು ಮಾಡಿದರೆ ವಿಷಯವೆಲ್ಲಾ ಬಯಲಿಗೆ ಬರುತ್ತದೆ. ನಂತರ ನಾವು ನಿರ್ಣಯ ತೆಗೆದುಕೊಳ್ಳಬಹುದೆಂದು ನಮ್ಮ ಪಕ್ಷದ ಪರವಾಗಿ ನಾನು ಅರಿಕೆ ಮಾಡಿಕೊಳ್ಳುತ್ತೇನೆ.

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಸನ್ಮಾನ್ಯ ಅಧ್ಯಕ್ಷರೆ, ಹೆಜ್ಜಾಲದ ಗೋಲಿಬಾರ್ ಪ್ರಕರಣದ ಬಗ್ಗೆ ಚರ್ಚೆ ಮಾಡಬೇಕೆಂದು ನಿಲುವಳಿ ಸೂಚನೆ ಕಳುಹಿಸಿದಂಥ ಸಂದರ್ಭದಲ್ಲಿ ಕೆಲವು ತಾಂತ್ರಿಕ ಕಾರಣಗಳಿಂದ ನಿಲುವಳಿ ಸೂಚನೆ ಬೇಡ ಎಂದಾಗಿದೆ. ಚರ್ಚೆ ಮಾಡುವಾಗ ಪ್ರಮುಖವಾದ ವಿಷಯವು ವಿಷಯಾಂತರವಾಗಿ ಬೇರೆ ವಿಷಯಗಳೆಲ್ಲಾ ಇದರಲ್ಲಿ ಬರುತ್ತಾ ಇರತಕ್ಕಂಥ ಕಾರಣಕ್ಕೋಸ್ಕರ ಅದರ ಗಹನತೆ ಮತ್ತು ಗಂಭೀರತೆ ಹೋಗತಕ್ಕಂಥ ಸಾಧ್ಯತೆಗಳು ಇವೆ ಎನ್ನತಕ್ಕಂಥಾದ್ದು ನನ್ನ ಅಭಿಪ್ರಾಯ. ಈ ಗೋಲಿಬಾರ್ ಘಟನೆಯ ಪೈಶಾಚಿಕತನ ಎಷ್ಟರಮಟ್ಟಿಗೆ ಹೋಗಿದೆ ಎಂದರೆ, ನಾನು ಸ್ವತಃ ಆ ಸ್ಥಳಕ್ಕೆ ಭೇಟಿ ಕೊಟ್ಟಿದ್ದೇನೆ. ಗಾಯಗಳು ಆಗಿರತಕ್ಕಂಥವರ ಕುಟುಂಬದ ಮನೆಗೆ ಹೋಗಿದ್ದೇನೆ, ಗೋಲಿಬಾರ್‌ನಲ್ಲಿ ಸತ್ತಂಥವರ ಕುಟುಂಬಗಳವರ ಮನೆಗಳಿಗೆ ಹೋಗಿದ್ದೇನೆ, ಏಟುಗಳು ತಿಂದಂಥವರ ಮನೆಗಳಿಗೆ ನಾನು ಭೇಟಿ ಕೊಟ್ಟಿದ್ದೇನೆ. ಗೋಲಿಬಾರ್ ಎಂದು ಇದನ್ನು ಕರೆಯಲಿಕ್ಕೆ ನಾನು ಮೊದಲನೆಯದಾಗಿ ಒಪ್ಪುವುದಿಲ್ಲ. ಅದು ಶೂಟಿಂಗ್ ಅಷ್ಟೆ. ರಿವಾಲ್ವರ್‌ನಿಂದ ಯಾವ ರೀತಿ ಶೂಟ್ ಮಾಡಿದ್ದಾರೆಂದರೆ, ರೋಲಿಂಗ್ ಷಟ್ಟರ್ಸ್ ಕೂಡ ತೂತು ಬಿದ್ದು ಹೋಗಿದೆ. ಆ ಸ್ಥಳಕ್ಕೆ ಹೋಗಿ ನೋಡಿ ಗಮನಿಸಿದರೆ, ಆ ವೆಳ್ಳಿಯಪ್ಪ ಫ್ಯಾಕ್ಟರಿ ಎದುರುಗಡೆ ಇರತಕ್ಕಂಥ ಹೆಜ್ಜಾಲ ಹಳ್ಳಿಯಲ್ಲಿರುವ ಅಂಗಡಿಗಳ ರೋಲಿಂಗ್ ಷೆಟ್ಟರ್‌ಗಳಿಗೂ ಕೂಡ ತೂತು ಬಿದ್ದಿವೆ. ಗೋಲಿಬಾರ್‌ನಲ್ಲಿ ಗಾಯಗೊಂಡಿರುವ ಮತ್ತು ಸತ್ತವರ ಮೇಲೆ ಆಗಿರತಕ್ಕಂಥ ಗುರುತುಗಳನ್ನು ನೋಡಿದರೆ ಎಲ್ಲಾ ಬುಲೆಟ್‌ಗಳು ಹಿಂದುಗಡೆಯಿಂದ ತೂರಿವೆ. ಮುಂದುಗಡೆಯಿಂದ ಯಾರಿಗೂ ತೂರಿಲ್ಲ. ಯಾರು ಯಾರಿಗೆ ಗುಂಡಿನ ಏಟುಗಳು ಬಿದ್ದಿವೆಯೋ ಅವರಿಗೆಲ್ಲಾ ಹಿಂದುಗಡೆಯಿಂದ ತೂರಿ ಮುಂದಗಡೆ ಹೋಗಿವೆ. ಅಂದರೆ, ಇದರ ಅರ್ಥ; ಪ್ರಾಣಿಗಳನ್ನು ಕಾಡಿನಲ್ಲಿ ಬೇಟೆ ಮಾಡತಕ್ಕಂಥ ಸಂದರ್ಭದಲ್ಲಿ ಯಾವ ರೀತಿ ಹಂಟ್ ಮಾಡಿಕೊಂಡು ಹೋಗಿ ಶೂಟ್ ಮಾಡುತ್ತಾರೋ ಆ ರೀತಿಯಲ್ಲಿ ಪೋಲೀಸ್‌ನವರು ಶೂಟ್ ಮಾಡಿದ್ದಾರೆ. ಇದು ಗೋಲಿಬಾರ್ ಅಲ್ಲ. ಗೋಲಿಬಾರ್ ಅನ್ನುವುದಕ್ಕೆ ಒಂದು ಪ್ರತ್ಯೇಕವಾದ ಅರ್ಥ ಇದೆ. ಯಾವಾಗಲಾದರೂ ಕಾನೂನು ವ್ಯವಸ್ಥೆ ಕೆಟ್ಟಂಥ ಸಂದರ್ಭದಲ್ಲಿ, ಇಡೀ ಜನ ಕಾನೂನನ್ನು ತನ್ನ ಕೈಗೆ ತೆಗೆದುಕೊಂಡಂಥ ಸಂದರ್ಭದಲ್ಲಿ ಕಾನೂನನ್ನು ರಕ್ಷಣೆ ಮಾಡಲಿಕ್ಕೋಸ್ಕರ ಮತ್ತು ಸಾಮಾನ್ಯ ಜನರ ನೆಮ್ಮದಿಯನ್ನು ಕೆಡಿಸತಕ್ಕಂಥ ಸಂದರ್ಭದಲ್ಲಿ ಆ ನೆಮ್ಮದಿಯನ್ನು ಕಾಪಾಡುವುದಕ್ಕೋಸ್ಕರ ಮತ್ತು ಸಾರ್ವಜನಿಕ ಹಿತಾಸಕ್ತಿಗೋಸ್ಕರ ಗೋಲಿಬಾರ್ ಮಾಡತಕ್ಕಂಥ ಪ್ರಕರಣ ಈ ದೇಶದಲ್ಲಿ ಮತ್ತು ಈ ರಾಜ್ಯದಲ್ಲಿ ನಡೆದಿವೆ. ಆದರೆ, ಇಲ್ಲಿ ನಡೆದಿರುವುದು ಗೋಲಿಬಾರ್ ಅಲ್ಲ. ಪೋಲಿಸಿನವರು ಉದ್ದೇಶಪೂರ್ವಕವಾಗಿ ಕಾರ್ಮಿಕರನ್ನು ಸುಟ್ಟಿರತಕ್ಕಂಥಾದ್ದು, ಇದು ಶೂಟಿಂಗ್ ಮಾಡಿರತಕ್ಕಂಥಾದ್ದು; ಗೋಲಿಬಾರ್ ಅಲ್ಲ. ಅಲ್ಲಿ ಎಷ್ಟು ಅಮಾನುಷವಾಗಿ ಸುಟ್ಟಿದ್ದಾರೆಂದರೆ, ವೆಳ್ಳಿಯಪ್ಪ ಫ್ಯಾಕ್ಟರಿಯಿಂದ ಒಂದು ಕಿಲೋಮೀಟರ್ ದೂರ ಇರುವ ರೈಲ್ವೆ ಟ್ರಾಕ್ ಹತ್ತಿರ ಅಟ್ಟಿಸಿಕೊಂಡು ಹೋಗಿ ಅಲ್ಲಿ ಸುಟ್ಟಿದ್ದಾರೆ. ಅಲ್ಲಿ ಏಟು ಬಿದ್ದಿರತಕ್ಕಂಥ ಮನುಷ್ಯ ಇನ್ನೂ ಆಸ್ಪತ್ರೆಯಲ್ಲಿ ಇದ್ದಾನೆ. ಸತ್ತಿರತಕ್ಕಂಥ ಕೃಷ್ಣಪ್ಪ, ನಾಗರಾಜು ಮತ್ತು ಸೀತಾ. ಸೀತಾ ಎಂದು ಹೇಳತಕ್ಕಂಥ 18 ವರ್ಷದ ಹುಡುಗಿ ಕಾರ್ಮಿಕಳಲ್ಲ. ಆ ಕಾರ್ಖಾನೆಯಲ್ಲಿ ಕೆಲಸ ಮಾಡತಕ್ಕಂಥ ಒಬ್ಬ ಕಾರ್ಮಿಕನ ಹೆಂಡತಿ. ಅದೇ ರೀತಿಯಲ್ಲಿ ಆಸ್ಪತ್ರೆಯಲ್ಲಿರತಕ್ಕಂಥವರು ಮತ್ತು ಯಾರು

ಸತ್ತಿರತಕ್ಕಂಥವರು, ಅಂದರೆ ಪೋಸ್ಟ್‌ಮಾರ್ಟಮ್ ರಿಪೋರ್ಟ್‌ನಲ್ಲಿಯೂ ಕೂಡ ನೀವು ನೋಡಬಹುದು. ಎದುರುಗಡೆಯಿಂದ ಬುಲೆಟ್ ಹೋಗಿಲ್ಲ, ಹಿಂದುಗಡೆಯಿಂದ ಬುಲೆಟ್ ಹೋಗಿದೆ ಎನ್ನತಕ್ಕಂಥಾದ್ದು ಇದೆ. ಈ ರೀತಿಯಾಗಿ ಜನರನ್ನು ಕಾಡುಮೃಗಗಳಂತೆ ಕಾಡಿನಲ್ಲಿ ಅಟ್ಟಿಸಿಕೊಂಡು ಹೋಗಿ ಬೇಟೆಯಾಡತಕ್ಕಂಥ ರೀತಿಯಲ್ಲಿ ಬೇಟೆಯಾಡಿ ಅವರನ್ನು ಸುಡತಕ್ಕಂಥ ಏನಾದರೂ ಅನಾಹುತವು ಅಲ್ಲಿ ಜರುಗಿತ್ತೇ? ಅಲ್ಲಿ ಅವರು ಫ್ಯಾಕ್ಟರಿಗೆ ಏನಾದರೂ ಬೆಂಕಿಯನ್ನು ಹಾಕಿದ್ದರೇ? ಫ್ಯಾಕ್ಟರಿಯನ್ನು ಸುಟ್ಟಿದ್ದರೇ? ಪೋಲಿಸರನ್ನು ಏನಾದರೂ ಸುಟ್ಟಿದ್ದರೇ? ಎಸ್‌ಪಿಯವರಿಗೆ ಏನಾದರೂ ಹೊಡೆದ್ದಿದ್ದರೆ? ಅಂಥ ಅನಾಹುತಗಳು ಏನಾದರೂ ನಡೆದಿದ್ದರೆ ಅವರು ಗೋಲಿಬಾರ್‌ನ್ನು ಮಾಡಬಹುದಾಗಿತ್ತು. ಈ ರೀತಿಯಾಗಿ ಪೈಶಾಚಿಕ ಕೃತ್ಯವನ್ನು ಮಾಡಿರತಕ್ಕಂಥ ಇವರನ್ನು ಪೋಲಿಸರು ಎಂದು ಕರೆಯುವುದಕ್ಕೆ ಕೂಡ ಆಗುವುದಿಲ್ಲ. ಪೋಲಿಸರ ಕೆಲಸ ಏನೆಂದರೆ ಕಾನೂನು ವ್ಯವಸ್ಥೆಯನ್ನು ಕಾಪಾಡುವುದು ಮಾತ್ರವಾಗಿದೆಯೇ ಹೊರತು ಜನರನ್ನು ಸಾಯಿಸುವುದಲ್ಲ. ಜನರನ್ನು ಬೇಟೆಯಾಡುವುದಲ್ಲ. ಹಾಗೆ ಬೇಟೆಯಾಡಿರತಕ್ಕಂಥವರು ಪೋಲಿಸರಾಗುವುದಕ್ಕೆ ಸಾಧ್ಯವಿಲ್ಲ. ನಾನು ನಮ್ಮ ಪಕ್ಷದ ಕೇಂದ್ರ ಸಮಿತಿಯವರು ಕಳುಹಿಸಿರತಕ್ಕಂಥ ಇಬ್ಬರು ಲೋಕಸಭಾ ಸದಸ್ಯರುಗಳ ಜೊತೆಗೆ ಆ ಸ್ಥಳಕ್ಕೆ ನಾನು ಭೇಟಿ ಕೊಟ್ಟಿದ್ದೇನೆ. ಇಲ್ಲಿ ನ್ಯಾಯಾಂಗ ತನಿಖೆಯ ಪ್ರಶ್ನೆ ಬಂದಂಥ ಸಂದರ್ಭದಲ್ಲಿ ಈ ಘಟನೆ ಏಕೆ ನಡೆಯಿತು ಎಂಬ ವಿಚಾರ ಬರುತ್ತದೆ. ನಾಲ್ಕು ವರ್ಷಗಳಿಂದ ಸತತವಾಗಿ ವೆಳ್ಳಿಯಪ್ಪ ಫ್ಯಾಕ್ಟರಿಯಲ್ಲಿ ಕೆಲಸ ಮಾಡತಕ್ಕಂಥ 500 ಜನ ಕಾರ್ಮಿಕರು ಏನಿದ್ದಾರೆ ಅವರನ್ನು ಇವೊತ್ತಿಗೂ ಕ್ಯಾಷುಯಲ್ ಲೇಬರ್ ಎಂದು ಟ್ರೀಟ್ ಮಾಡುತ್ತಾ ಇದ್ದಾರೆ. ಕ್ಯಾಷುಯಲ್ ಲೇಬರ್ ಅಂದರೆ ಪೂರ್ಣಪ್ರಮಾಣದ ಕಾರ್ಮಿಕನೊಬ್ಬ ಪಡೆಯುವ ಕಾಲು ಭಾಗದ ಸಂಬಳವನ್ನು ಮಾತ್ರ ಅವರು ಪಡೆಯುತ್ತಾರೆ. ಆದುದರಿಂದ ಅವರು ನಮ್ಮನ್ನು ರೆಗ್ಯುಲರ್ ಕಾರ್ಮಿಕರೆಂದು ಟ್ರೀಟ್ ಮಾಡಬೇಕೆಂದು ಕೇಳಿಕೊಂಡಿದ್ದರು. ಹಾಗೆಯೇ ತಮ್ಮ ಕಾರ್ಮಿಕ ಸಂಘವನ್ನು ಮಾನ್ಯತೆ ನೀಡಬೇಕೆಂದು ಒಂದು ಡಿಮ್ಯಾಂಡ್‌ನ್ನು ಇಟ್ಟಿದ್ದರು. ಆ ಸಲುವಾಗಿ ಅವರು ನಾಲ್ಕು ವರ್ಷಗಳಿಂದ ಹೋರಾಟ ಮಾಡುತ್ತಾ ಇದ್ದರು. ಹಿಂದೆ ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಪ್ರಾರಂಭವಾದ ಅವರ ಹೋರಾಟ ಇವೊತ್ತಿನವರೆಗೂ ನಡೆಯುತ್ತಾ ಇದೆ. ಈ ನಾಲ್ಕು ವರ್ಷಗಳಲ್ಲಿ ಅವರು ಸತತವಾಗಿ ಸರಕಾರಕ್ಕೆ ಅನೇಕ ರೀತಿಯಲ್ಲಿ ಮನವಿಗಳನ್ನು ಸಲ್ಲಿಸಿದ್ದಾರೆ. ಮೊನ್ನೆ 30ನೇ ತಾರೀಖು ಸನ್ಮಾನ್ಯ ಉಪ ಮುಖ್ಯಮಂತ್ರಿಯವರು ಹಾಗೂ ಕಾರ್ಮಿಕ ಸಚಿವರಾಗಿರತಕ್ಕಂಥ ಸನ್ಮಾನ್ಯ ಸಿದ್ಧರಾಮಯ್ಯನವರ ಮನೆಯ ಮುಂದೆ ಧರಣಿಯನ್ನು ಮಾಡಿ ಮನವಿಯನ್ನು ಅರ್ಪಿಸಿದ್ದಾರೆ. ಅವರ ಸಮಸ್ಯೆಗಳನ್ನು ಹೇಳಿಕೊಂಡಿದ್ದಾರೆ. ಇವರ ಹಿಂದೆ ಇದ್ದ ಮಾನ್ಯ ಮುಖ್ಯಮಂತ್ರಿಯವರ ಜೊತೆಯಲ್ಲಿಯೂ ಕೂಡ ಚರ್ಚೆಮಾಡಿದ್ದಾರೆ. ನಾಲ್ಕು ವರ್ಷಗಳ ನಿರಂತರವಾದ ಹೋರಾಟದ ನಂತರವೂ ಕೂಡ ಆ ಕಾರ್ಮಿಕರಿಗೆ ಕನಿಷ್ಠವಾದ ಸೌಲಭ್ಯ ಕೊಟ್ಟಿಲ್ಲ. ನಮ್ಮನ್ನು ಕಾರ್ಖಾನೆಯ ರೆಗ್ಯುಲರ್ ಎಂಪ್ಲಾಯೀಸ್ ಎಂದು ಹೇಳತಕ್ಕಂಥ ಕನಿಷ್ಠ ಡಿಮ್ಯಾಂಡ್‌ನ್ನು ಕೂಡ ಪೂರೈಸುವುದಕ್ಕೆ ಸಾಧ್ಯವಾಗಿಲ್ಲ. ಅದರ ಜೊತೆಗೆ ಅವರ ಸಂಘವನ್ನು ಕೂಡ ಮಾನ್ಯ ಮಾಡಲು ತಯಾರಾಗಿಲ್ಲ. ಲೇಬರ್ ಆಕ್ಟ್‌ನಲ್ಲಿ 20ನೇ ಚಾಪ್ಟರ್ ಪ್ರಕಾರ ಏನು ಹೇಳುತ್ತದೆ ಅಂದರೆ, ಯಾವುದೇ ಒಂದು ಮ್ಯಾನೇಜ್‌ಮೆಂಟ್ ಆ ಕಾರ್ಮಿಕರ ಸಂಘದ

ಜೊತೆಗೆ ಮಾತುಕತೆ ಮಾಡಲು ನಿರಾಕರಿಸಿದರೆ ಅಂಥವರಿಗೆ ಕನಿಷ್ಟ ಆರುತಿಂಗಳು ಜೈಲು ಶಿಕ್ಷೆಯಾಗಬೇಕೆಂದು ಲೇಬರ್ ಲಾ ನಲ್ಲಿ ಸ್ಪಷ್ಟವಾಗಿ ಹೇಳುತ್ತದೆ. ಇದು ಮಾನ್ಯ ಕಾರ್ಮಿಕ ಸಚಿವರಿಗೆ ಗೊತ್ತಿದೆ. ಆದರೆ ಇಲ್ಲಿನ ಕಾರ್ಮಿಕರಿಗೆ ಆಡಳಿತದವರು ಸತತವಾಗಿ ನಿರಾಕರಿಸುತ್ತಾ ಬಂದಿದ್ದಾರೆ. ಈ ಘಟನೆ ನಡೆದ ನಂತರ ಕೂಡ ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥ ಒಬ್ಬ ಲೋಕಸಭಾ ಸದಸ್ಯರೂ ಕೂಡ ಸ್ಪಷ್ಟವಾಗಿ ಹೇಳಿದ್ದಾರೆ. ನಾನು ಈ ಸಮಸ್ಯೆಯನ್ನು ಪರಿಹರಿಸಲು ಮಾಲೀಕರನ್ನು ಮತ್ತು ಕಾರ್ಮಿಕರನ್ನು ಒಂದುಗೂಡಿಸಿ ಮಾತುಕತೆ ಮಾಡಲು, ಪರಿಹಾರ ಮಾಡಲು ಪ್ರಯತ್ನ ಮಾಡಿದೆ. ಆದರೆ ಕಾರ್ಮಿಕ ಮುಖಂಡರಾಗಿರತಕ್ಕಂಥ ಕೆ.ಎಸ್. ಸುಬ್ರಮಣ್ಯಂರವರು ಭಾಗವಹಿಸಿದರೆ ನಾವು ಭಾಗವಹಿಸುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿ ಮಾಲೀಕರು ನಿರಾಕರಿಸಿದರು. ಆ ಕಾರಣಕ್ಕಾಗಿ ಮಾತುಕತೆಯು ಮುರಿದು ಹೋಯಿತು ಎಂದು ಹೇಳಿದ್ದಾರೆ. ಹೀಗೆ ನಾಲ್ಕು ವರ್ಷಗಳಿಂದಲೂ ಆ ಮಾಲೀಕರು ಸಂಘದ ಜೊತೆಗೆ ಮಾತುಕತೆ ಮಾಡಲು ನಿರಾಕರಿಸುತ್ತಾ ಬಂದಿದ್ದಾನೆ. ಕಾರ್ಮಿಕರ ಸಮಸ್ಯೆಗಳನ್ನು ಪರಿಹಾರ ಮಾಡಲು ನಿರಾಕರಿಸಿದ್ದಾನೆ. ವಳ್ಳಿಯಪ್ಪ ಅಲ್ಯಾಡ್ ಫ್ಯಾಕ್ಟರಿ ಮತ್ತು ಇನ್ನೊಂದು ಯುನಿಟ್ ಸೇರಿ ಅಲ್ಲಿ 600ಜನ ಕಾರ್ಮಿಕರು ಇದ್ದಾರೆ.

ಮಾನ್ಯ ಅಧ್ಯಕ್ಷರೇ, ಪೋಲೀಸರು ಎಷ್ಟು ಬೇಜವಾಬ್ದಾರಿಯುಳ್ಳವರಾಗಿದ್ದಾರೆ ಅಂದರೆ ಇವರ ಮೂರ್ಖತನದ ಪರಮಾವಧಿಯು ಎಷ್ಟು ಅಂದರೆ ಅವರು ಎಫ್ಐ ಆರ್‌ನಲ್ಲಿ 2000 ಜನ ಎಂದು ಹೇಳಿಕೊಂಡಿದ್ದಾರೆ. ಕಾರ್ಮಿಕರು ಅಲ್ಲಿರುವವರು 600 ಜನರಾದರೆ ಇವರು 200 ಜನರ ಮೇಲೆ ಕೇಸ್ ಹಾಕುತ್ತೇವೆಂದು ಹೇಳುತ್ತಾರೆ. ಅಂದರೆ ಕಾರ್ಮಿಕರಲ್ಲದೇ ಇರತಕ್ಕಂಥವರನ್ನು ಕೂಡ ಇದರಲ್ಲಿ ಸೇರಿಸಿ ಕೇಸ್ ಹಾಕಬೇಕೆಂಬುದು ಇವರ ಉದ್ದೇಶ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಅದೇ ರೀತಿಯಲ್ಲಿ ಇವರುಗಳ ಹೇಳಿಕೆಗಳಲ್ಲಿ ಬದಲಾಗಿದೆ. ನಾನು ಘಟನೆಯನ್ನು ಗೋಲೀಬಾರ್ ಎಂದು ಹೇಲಲು ಇಷ್ಟಪಡುವುದಿಲ್ಲ. ಈ ಶೂಟಿಂಗ್ ಆದಮೇಲೆ ಅಲ್ಲಿ ರಾಜಕೀಯ ಮಾಡಲು ಹೊರಟಿದ್ದಾರೆ. ಬಡಕಾರ್ಮಿಕರ ಜೀವದ ಮೇಲೆ ಚೆಲ್ಲಾಟ ಮಾಡತಕ್ಕಂಥ ರಾಜಕೀಯವನ್ನು ಮಾಡುತ್ತಿದ್ದಾರೆ. ಇದು ಬಹಳ ನಾಚಿಕೆಗೇಡು ವಿಷಯವಾಗಿದೆ. ಇದೊಂದು ದುರಂತದ ವಿಷಯ. ಕಾರ್ಮಿಕರ ಮೂರು ಬೇಡಿಕೆಗಳ ಬಗ್ಗೆ ಹೋರಾಟ ನಡೆಸಿದರು. ಯಾವುದೇ ಉಪ-ಚುನಾವಣೆಯ ಸಂಬಂಧ ಅವರಿಗಿರಲಿಲ್ಲ. ಯಾವುದೇ ರಾಜಕೀಯ ಪಕ್ಷದ ಬಗ್ಗೆ ಅವರಿಗೆ ಸಂಬಂಧ ಇರಲಿಲ್ಲ. ತಮ್ಮ ಬೇಡಿಕೆಗಳಿಗಾಗಿ ಹೋರಾಟ ಮಾಡತಕ್ಕಂಥ ಸಂದರ್ಭದಲ್ಲಿ ಪೋಲಿಸರು ಅಮಾನುಷಕೃತ್ಯವನ್ನು ನಡೆಸುವುದರೊಂದಿಗೆ ಅದರ ಜೊತೆಗೆ ರಾಜಕೀಯವನ್ನು ಮಾಡುತ್ತಾ, ಅವರ ಮೇಲೆ ಇವರು, ಇವರ ಮೇಲೆ ಅವರು ರಾಜಕೀಯ ಮಾಡುತ್ತಿದ್ದಾರೆ. ಸಾಮಾನ್ಯ ಜನರ ಜೀವನದ ಜೊತೆಗೆ ಚೆಲ್ಲಾಟ ಮಾಡಿ ಪ್ರಾಣ ಹೋಗತಕ್ಕಂಥ ಸಂದರ್ಭದಲ್ಲಿ ಇಂಥ ರಾಜಕೀಯ ಮಾಡತಕ್ಕಂಥಾದ್ದು ಯಾರಿಗೂ ಘನತೆಯನ್ನು ತರತಕ್ಕಂಥಾದ್ದು ಅಲ್ಲ. ಪೋಲಿಸರ ಹೇಳಿಕೆಯ ಪ್ರಕಾರ ಡಿಸಿಪಿಯವರ ಹೇಳಿಕೆಯ ಪ್ರಕಾರವೇ ಆ ಕಾರ್ಮಿಕರಿಗೆ 3ನೇ ತಾರೀಖು ರಸ್ತಾರೋಖೋ ಮಾಡಲು ಪೋಲೀಸರೇ ಅನುಮತಿಯನ್ನು ಕೊಟ್ಟಿದ್ದಾರೆ. ಅನುಮತಿ ಪಡೆದುಕೊಂಡೇ ಅವರು ರಸ್ತಾರೋಖೋ ಮಾಡಿದ್ದಾರೆ. ಅಲ್ಲಿ ಏನಾದರೂ ಕಾನೂನು ಪರಿಸ್ಥಿತಿಯು ಹದಗೆಡುತ್ತದೆ. ಅಲ್ಲಿ ರಸ್ತಾರೋಖೋ ಮಾಡಿದರೆ ಹೈವೇನಲ್ಲಿ ಟ್ರಾಫೀಕ್‌ಜಾಮ್ ಆಗುತ್ತದೆ, ಸಾರ್ವಜನಿಕರಿಗೆ ಅದರಿಂದ

ತೊಂದರೆಯಾಗುತ್ತದೆ ಎಂಬ ಕನಿಷ್ಟ ಪರಿಜ್ಞಾನ ಅವರಿಗೆ ಮೊದಲೇ ಇದ್ದಿದ್ದರೆ ಸಂಪೂರ್ಣವಾಗಿ ಅನುಮತಿ ಕೊಡುವುದನ್ನು ನಿರಾಕರಿಸಬಹುದಾಗಿತ್ತು. ಅದನ್ನು ಯಾರೂ ತಡೆಹಿಡಿಯಲು ಸಾಧ್ಯವಾಗುತ್ತಾ ಇರಲಿಲ್ಲ. ಎರಡನೆಯದಾಗಿ ರಸ್ತಾರೋಖೋ ಮಾಡಿದಂಥ ಸಂದರ್ಭದಲ್ಲಿ ನಿಮಗೆ ಆ ರೀತಿಯಾದಂಥ ಗಂಭೀರ ಪರಿಸ್ಥಿತಿ ಬಂದಿದೆ ಎಂದಾದರೆ ಅವರನ್ನು ಬಂಧಿಸಿ ಜೈಲಿಗೆ ಕರೆದುಕೊಂಡು ಹೋಗಬಹುದಾಗಿತ್ತು. ಆದರೆ ಅಲ್ಲಿ ಶೂಟಿಂಗ್ ಮಾಡತಕ್ಕಂಥ ಅವಶ್ಯಕತೆ ಏನಿತ್ತು? ಪೋಲಿಸರಿಗೆ ಇಂಥ ಎಲ್ಲಾ ಅಧಿಕಾರವೂ ಇದೆ. ಬಸ್‌ಗಳನ್ನು ಸುಟ್ಟರು, ವ್ಯಾನ್‌ಗಳನ್ನು ಸುಟ್ಟರು, ಕಾನೂನನ್ನು ಅವರ ಕೈಯಲ್ಲಿ ತೆಗೆದುಕೊಂಡಿದ್ದರು, ಎಂದು ನೀವು ಹೇಳುತ್ತಿದ್ದೀರಿ. ಆ ಸ್ಥಳಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ನನಗೆ ಗೊತ್ತಾದ ವಿಷಯವೇನೆಂದರೆ ಅವರು ರಸ್ತಾ ರೋಖೋ ಎಲ್ಲಿ ಮಾಡಿದ್ದಾರೆ ಮತ್ತು ಬಸ್ಸುಗಳು ಎಲ್ಲಿ ಸುಟ್ಟಿವೆ ಎಂಬುದು ಮುಖ್ಯವಾದ ವಿಚಾರ. ವೆಳ್ಳಿಯಪ್ಪ ಕಾರ್ಖಾನೆಯ ಮುಂದುಗಡೆ ಅವರು ರಸ್ತಾರೋಖೋ ಮಾಡಿದ್ದಾರೆ. ಆ ಬಸ್‌ಗಳು, ವ್ಯಾನ್‌ಗಳು ಸುಟ್ಟಿರುವುದು ಕಾರ್ಖಾನೆಯಿಂದ ಒಂದು ಕಿ.ಮೀ. ದೂರದಲ್ಲಿದೆ. ಯಾವಾಗ ಸುಟ್ಟಿರತಕ್ಕಂಥಾದ್ದು ಅಂದರೆ, ಪೋಲಿಸರ ಹೇಳಿಕೆಯ ಪ್ರಕಾರವೇ ಕಾರ್ಮಿಕರು ಆ ಜಾಗದಲ್ಲಿ ರಸ್ತಾರೋಖೋ ಮಾಡುತ್ತಿದ್ದ ಸಂದರ್ಭದಲ್ಲಿ, ಅವರ ಕಾರ್ಮಿಕ ಮುಖಂಡರು ಶ್ರೀ ವಿಜೆಕೆ ನಾಯರ್ ಎಂದು. ಅವರು ಎಮರ್ಜೆನ್ಸಿ ಅವಧಿಯಲ್ಲಿ ಮಾನ್ಯ ಜೆ.ಹೆಚ್. ಪಟೇಲರ ಜೊತೆಯಲ್ಲಿ ಜೈಲಿನಲ್ಲಿದ್ದವರು. ಅವರು ವೈಯಕ್ತಿಕವಾಗಿ ಜೈಲ್‌ನಿಂದ ಒಂದು ಪತ್ರವನ್ನು ಕಳುಹಿಸಿದ್ದಾರೆ. ಅವರು ಎಸ್‌ಪಿ ಹತ್ತಿರ ಮಾತನಾಡಿ ಸಮಸ್ಯೆಯು ಉಲ್ಬಣಗೊಳ್ಳುತ್ತಾ ಇದೆ, ಅಲ್ಲಿ ಖಾಲಿ ಮಾಡಬೇಕೆಂದು ಹೇಳತಕ್ಕಂಥ ಸಂದರ್ಭದಲ್ಲಿ ಕಾರ್ಮಿಕರನ್ನು ಒಪ್ಪಿಸಿ, ಕಾರ್ಮಿಕರು ಜಾಗವನ್ನು ಖಾಲಿ ಮಾಡುತ್ತಾ ಇರತಕ್ಕಂಥ ಸಂದರ್ಭದಲ್ಲಿ they were about to move from that place. ಆ ಸಂದರ್ಭಕ್ಕೆ ಸರಿಯಾಗಿ ಅಲ್ಲಿ ಬಸ್, ಕಾರ್‌ಗಳು ಸುಟ್ಟಿದ್ದಾರೆ. ಒಂದು ಕಿ.ಮೀ.ದೂರದಲ್ಲಿ ಕಾರ್ಮಿಕರು ಹೋಗಿ ಬಸ್ ಸುಡಲು ಸಾಧ್ಯವೇ? ಆ ಜಾಗದಲ್ಲಿ ಕುಳಿತಿರತಕ್ಕಂಥ ಕಾರ್ಮಿಕರು, ಆ ಜಾಗದಿಂದ ಕದಲದೇ ಇದ್ದಂಥ ಕಾರ್ಮಿಕರು ಒಂದು ಕಿ.ಮೀ. ದೂರ ಹೋಗಿ ಬಸ್, ಕಾರುಗಳನ್ನು ಸುಡಲು ಸಾಧ್ಯವಿದೆಯೇ? ಸಾಧ್ಯವೇ ಇಲ್ಲ. ಇದರ ಹಿಂದೆ ಯಾರದ್ದೋ ಕೈವಾಡ ಖಂಡಿತವಾಗಿ ಇದೆ. ಕಾರ್ಮಿಕರ ಕೈವಾಡ ಇಲ್ಲ, ಇದರಲ್ಲಿ ಮೂರನೇ ಶಕ್ತಿಯ ಕೈವಾಡವಿರುವುದು ಸ್ಪಷ್ಟವಾಗಿ ಕಾಣುತ್ತದೆ. ಮಾನ್ಯ ಸದಸ್ಯಮಿತ್ರರು ಈ ಬಗ್ಗೆ ಸದನದ ಸಮಿತಿಯನ್ನು ಮಾಡಬೇಕೆಂದಿದ್ದಾರೆ ಅದಕ್ಕೆ ನನ್ನ ಒತ್ತಾಯವೂ ಇದೆ. ಇಲ್ಲಿ ಯಾರ ಕೈವಾಡ ಇದೆ ಎಂದು ಅದರಲ್ಲಿ ತನಿಖೆಯಾಗಲಿ. ಡಿ ಜಿ ಯವರ ಹೇಳಿಕೆಯ ಪ್ರಕಾರವೇ ಕಾರ್ಮಿಕರ ಪ್ರಚೋದನೆಯಾಗಲಿಲ್ಲ. ಕಲ್ಲು ಹೊಡೆಯಲಿಲ್ಲ. ಹಾಗಾದರೆ ಕಾರ್ಮಿಕರ ಮೇಲೆ ಯಾಕೆ ಗುಂಡು ಹಾಕಿದ್ದೀರಿ? ಬಸ್ಸು ಸುಟ್ಟಿದ್ದು ಎಲ್ಲಿ? ಅವರು 9 ಘಂಟೆ 35 ನಿಮಿಷಕ್ಕೆ ಅವರು ರಸ್ತಾ ರೋಖೋವನ್ನು ಪ್ರಾರಂಭ ಮಾಡಿದ್ದಾರೆ. ಅದು 3ನೇ ತಾರೀಖಿಗೆ. ಶೂಟಿಂಗ್ ಆಗಿರುವುದು 10-10 ರಲ್ಲಿ, ಪೋಲಿಸರ ಅನುಮತಿ ಪ್ರಕಾರವೇ ಅವರಿಗೆ ಒಂದು ಗಂಟೆ ಅನುಮತಿ ಸಿಕ್ಕಿತ್ತು. ನಾನು ಆ ಸ್ಥಳಕ್ಕೆ ಹೋದ ಸಂದರ್ಭದಲ್ಲಿ ಅಲ್ಲಿದ್ದ ಪೋಲಿಸ್ ಅಧಿಕಾರಿಗಳನ್ನು ಕೇಳಿದೆ: ಕಾರ್ಮಿಕ ಸಂಘದವರು ಬರವಣಿಗೆಯಲ್ಲಿ ನಿಮಗೆ ಅರ್ಜಿಕೊಟ್ಟು ನಮಗೆ ರಸ್ತೆ ರೋಕೋ ಮಾಡಲು 2 ಗಂಟೆ ಅನುಮತಿಕೊಡಬೇಕೆಂದು ಕೇಳಿದ್ದರೇ ಎಂದು; ಹೌದು ಅಂದರು, ನೀವು

ಲಿಖಿತವಾಗಿ ಮೂಲಕವಾಗಿ ಎಷ್ಟು ಗಂಟೆಗೆ ಅಂತ ಅನುಮತಿ ಏನಾದರೂ ಕೊಟ್ಟಿದ್ದೀರಾ ಎಂದು ಕೇಳಿದರೆ ಅದಕ್ಕೆ ಅವರ ಹತ್ತಿರ ಉತ್ತರ ಇಲ್ಲ. ಇವರು ಒಂದು ಗಂಟೆಗೆ ಅನುಮತಿ ಕೊಟ್ಟೆವೆಂದು ಒಪ್ಪಿಕೊಳ್ಳುವವರು, 9.35ಕ್ಕೆ ರಸ್ತೆ ರೋಕೋ ಪ್ರಾರಂಭವಾಗಿದೆ, 10.05ಕ್ಕೆ ಕರೆಕ್ಟಾಗಿ ಅಲ್ಲಿ ಶೂಟಿಂಗ್ ನಡೆದಿದೆ. ಅಂದರೆ ಇವರೇ ಕೊಟ್ಟ ಅನುಮತಿ ನಿರಾಕರಿಸಿ ಅರ್ಧ ಗಂಟೆಯಲ್ಲಿ ಕಾರ್ಮಿಕರನ್ನು ಶೂಟ್ ಮಾಡಲಿಕ್ಕೆ ಯಾವ ಪರಿಸ್ಥಿತಿ ಉದ್ಭವವಾಗಿತ್ತು. ಕಾರ್ಖಾನೆಗೆ ಜಖಂ ಆಗಿಲ್ಲ, ಕಾರ್ಖಾನೆ ಮುಂದೆನೇ ಅವರು ಟೆಂಟ್ ಹಾಕಿಕೊಂಡಿದ್ದಾರೆ. ಪೋಲಿಸರು ಎಂಥ ಅಮಾನುಷವಾಗಿ ವರ್ತನೆ ಮಾಡಿದ್ದಾರೆಂದರೆ ಕಾರ್ಮಿಕರು ಹಾಕಿಕೊಂಡಿದ್ದ ಟೆಂಟನ್ನು ಪೋಲಿಸರೇ ಸುಟ್ಟಿದ್ದಾರೆ. ಅವರ ಎದುರಿಗೇ ಸುಟ್ಟರೋ ಒಂದೇ ಒಂದು ಕಲ್ಲನ್ನು ಕಾರ್ಮಿಕರು ಫ್ಯಾಕ್ಟರಿಗೆ ಹೊಡೆಯಲಿಲ್ಲ. ಪೋಲಿಸರಿಗೆ ಹಾಕಲಿಲ್ಲ. ನಿಮ್ಮ ಬೆಟ್ಟೇಗೌಡ, ಸರ್ಕಲ್ ಇನ್‌ಸ್ಪೆಕ್ಟರ್ ಅಶೋಕ್‌ಕುಮಾರ್, ನಾರಾಯಣಗೌಡ ಎಲ್ಲಾ ಅಲ್ಲೇ ಇದ್ದಾರೆ. ಎಸ್‌ಪಿಯವರ ಹೇಳಿಕೆ ಪ್ರಕಾರವೇ ವಿಜೆಕೆ ನಾಯರ್ ಹತ್ತಿರ ರಸ್ತೆ ರೋಕೋ ವಾಪಾಸ್ ಪಡೆಯಲಿಕ್ಕೆ ಚರ್ಚೆ ಮಾಡುತ್ತಿದ್ದಾರೆ. ಸರ್ಕಲ್ ಇನ್‌ಸ್ಪೆಕ್ಟರ್ ಆ ಕಡೆ ಸರ್ಕಲ್ ಇನ್ಸ್‌ಪೆಕ್ಟರ್ ಕೆ.ಸುಬ್ರಮಣಿ ಜೊತೆ ರಸ್ತೆರೊಕೊ ವಾಪಸ್ ಪಡೆಯಲಿಕ್ಕೆ ಚರ್ಚೆ ಮಾಡುತ್ತಿದ್ದಾರೆ. ಸರ್ಕಲ್ ಇನ್‌ಸ್ಪೆಕ್ಟರಿಗೇ ಗಾಬರಿಯಾಯಿತು ಲಾಠಿಚಾರ್ಜ್ ಶೂಟಿಂಗ್ ಶುರುವಾದಾಗ, ಯಾರು ಆರ್ಡರ್ ಕೊಟ್ಟರು ಎಂದು ನಾನು ಆ ಸ್ಥಳಕ್ಕೆ ಹೋದ ಸಂದರ್ಭದಲ್ಲಿ ಅಲ್ಲಿ ಒಬ್ಬ ಸರ್ಕಲ್ ಇನ್‌ಸ್ಪೆಕ್ಟರಿದ್ದರು, ಶೂಟಿಂಗ್ ಮಾಡಲಿಕ್ಕೆ ನಿಮಗೆ ಯಾರು ಆರ್ಡರ್ ಕೊಟ್ಟರು? ಸಿಆರ್‌ಪಿಸಿ ಪ್ರಕಾರ ತಾಲೂಕು ಮ್ಯಾಜಿಸ್ಟ್ರೇಟ್ ಫೈರಿಂಗ್ ಆರ್ಡರ್ ಕೊಡಬೇಕು. ಆದರೆ ಈ ದೇಶದಲ್ಲಿ ಯಾವುದೇ ತಹಸೀಲ್ದಾರ್ 9.45ಕ್ಕೆ ಆ ಸ್ಥಳಕ್ಕೆ ಬರಲಿಕ್ಕೆ ಸಾಧ್ಯವೆ ಇಲ್ಲ, 11 ಗಂಟೆಗೂ ಆಫೀಸಿಗೆ ಬರದ ಒಬ್ಬ ಕಾರ್ಮಿಕ ಒಂಭತ್ತು ಮುಕ್ಕಾಲಿಗೆ ಹೇಗೆ ಬರಲಿಕ್ಕೆ ಸಾಧ್ಯವಿದೆ? ನಾನು ಪೋಲಿಸರಿಗೆ ಕೇಳಿದೆ ನಿಮಗೆ ಆರ್ಡರ್ ಕೊಟ್ಟವರು ಯಾರು ಎಂದು. ಇವತ್ತಿಗೂ ಕೂಡ ಪೋಲಿಸರಿಗೆ ಗೊತ್ತಿಲ್ಲ ಶೂಟಿಂಗ್‌ಗೆ ಯಾರು ಆರ್ಡರ್ ಕೊಟ್ಟರು ಎಂಬುದು. ಒಂದು ಮಾಹಿತಿ ಪ್ರಕಾರ ಅಲ್ಲಿವರೆಗೆ ಏನೂ ಗದ್ದಲ ಇರಲಿಲ್ಲ. ಮುಖಂಡರು ಸರ್ಕಲ್ ಇನ್‌ಸ್ಪೆಕ್ಟರ್ ಜೊತೆಯಲ್ಲಿ ಮಾತುಕತೆ ನಡೆಸುತ್ತಿದ್ದಾರೆ ಅದನ್ನು ವಾಪಸ್ ಪಡೆಯಲಿಕ್ಕೆ, ಅದೇ ಸಮಯದಲ್ಲಿ ನಾರಾಯಣಗೌಡರು ಏಕಾಏಕಿ ನೀವು ಲಾಠಿಚಾರ್ಜ್ ಮಾಡಿ ಶೂಟ್ ಮಾಡಿ ಎಂದು ಆರ್ಡರ್ ಕೊಟ್ಟರು? ಸಿಆರ್‌ಪಿಸಿಯಲ್ಲಿ ನಿಯಮವಿದೆ ಲಾಠಿಚಾರ್ಜ್ ಯಾವಾಗ ಮಾಡಬೇಕು, ಟಿಯರ್‌ಗ್ಯಾಸ್ ಯಾವಾಗ ಹಾಕಬೇಕು, ಫೈರಿಂಗ್ ಯಾವಾಗ ಮಾಡಬೇಕು ಎಂದು ಒಂದಕ್ಕೂ ಪೋಲಿಸರು ಸೂಚನೆ ಕೊಟ್ಟಿಲ್ಲ. ಕಾನೂನು ಪ್ರಕಾರ ಅವರು ಲಾಠಿಚಾರ್ಜ್ ಮಾಡಬೇಕು, ಅದಕ್ಕೂ ಜನ ಚದರದೇ ಇದ್ದರೆ ಅಶ್ರುವಾಯು ಹಾಕಬೇಕು, ಅದಕ್ಕೂ ಜನ ಬಗ್ಗದೇ ಇದ್ದರೆ ಲಾಸ್ಟ್ ರಿಸಾರ್ಟ್ ಫೈರಿಂಗ್. ಅದೂ ಗಾಳಿಯಲ್ಲಿ ಮೇಲುಗಡೆ ಫೈರ್ ಮಾಡಬೇಕು ಚದುರಿಸಬೇಕು ಇಲ್ಲದಿದ್ದರೆ ಮೊಣಕಾಲು ಕೆಳಗಡೆ ಫೈರ್ ಮಾಡಬೇಕೆಂದು ಸ್ಪಷ್ಟವಾಗಿದೆ. ಅದು ಯಾವುದೂ ಇಲ್ಲ. ಇವತ್ತು ಸತ್ತಿರುವವರ ಪೋಸ್ಟ್‌ಮಾರ್ಟಂ ವರದಿ ನೋಡಿ, ಭುಜದ ಹಿಂದಿನಿಂದ ಬುಲೆಟ್ ಬಂದಿದೆ ಏಟು ತಿಂದಿರುವ ಆಸ್ಪತ್ರೆಯಲ್ಲಿರುವ ಎಲ್ಲರಿಗೂ ಹಿಂದಿನಿಂದ ಬುಲೆಟ್ ತೂರಿಬಂದಿದೆ. ಅಂದರೆ ಎಲ್ಲಾ ನಾಗರೀಕ ಕಾನೂನುಗಳನ್ನು ಕನಿಷ್ಟ ಕಾನೂನುಗಳನ್ನು ಮುರಿದಂತಹ ಪೋಲಿಸರು

ಪೋಲಿಸರಾಗಿರಲಿಕ್ಕೆ ಲಾಯಕ್ಕಿದೆಯಾ ಎಂಬುದು ಪ್ರಶ್ನೆ. ಎರಡನೇ ದಿವಸ ಪೋಲಿಸ್ ಅಧಿಕಾರಿ ಒಬ್ಬರು ಬರೆಯುತ್ತಾರೆ ಇವರನ್ನು ಪ್ರಾಸಿಕ್ಯೂಟ ಮಾಡಿ ಎಂದು. ಇವರು ಫೈರ್ ಮಾಡುವ ಅವಶ್ಯಕತೆ ಇರಲಿಲ್ಲ ಏಕಾಗಿ ಮಾಡಿದರು ಎಂದು ಅಭಿಪ್ರಾಯ ಪಡುತ್ತಾರೆ. ಯಾರೀ ಘಟನೆ ಹಿಂದೆ ಇರುವವರು? ರಾಮನಗರ ಚುನಾವಣೆ ನಡೆಯುತ್ತಿದೆ ಆ ಸಂದರ್ಭದಲ್ಲಿ ಇಂತಹ ಘಟನೆ ನಡೆದಿದೆ, ಇದಕ್ಕೇನಾದರೂ ಕಾರಣವಿದೆಯಾ? ಇವತ್ತು ಕೇಸ್ ಬುಕ್ ಮಾಡಿದ್ದಾರೆ. ಅಧ್ಯಕ್ಷರೇ, ಅದರಲ್ಲಿ ಎಲ್ಲಾ ಸೆಕ್ಷನ್‌ಗಳನ್ನೂ ಹಾಕಿದ್ದಾರೆ. 307 ಸೆಕ್ಷನ್ ಕೂಡ ಹಾಕಿದ್ದಾರೆ. 307ನೇ ಸೆಕ್ಷನ್ ಹಾಕುವ ಅವಶ್ಯಕತೆ ಇರುವುದು,...

ಅಧ್ಯಕ್ಷರು:- ನೀವು ಸ್ಪೆಸಿಫೈ ಮಾಡಿ ಇನ್‌ಸ್ಟೆಂಟೆನಸ್ ಯಾರಾದರೂ ಇಂಡಿವಿಜ್ಯುಯಲ್ ಆಫೀಸರ್ಸ್ ಇದ್ದರೆ ಇಂಥಿಂಥ ಆಫೀಸರು, ಇಂಥಿಂಥ ಜವಾಬ್ದಾರಿ ಹೊತ್ತಿರುವವರು, ಹೀಗೆ ಹೀಗೆ ಮಾಡಿದ್ದಾರೆಂದು ಹೇಳಿ. ಪೋಲಿಸರು, ಪೋಲಿಸನವರು ಎಂದು ಹೇಳಿದಾಗ ಏನಾಗುತ್ತದೆಂದರೆ ಇಡೀ ಇಲಾಖೆಗೆ ಹೋಗುತ್ತದೆ. ಈಗಾಗಲೇ ಆ ಇಲಾಖೆ ಮಾರೇಲ್ ಸಾಕಷ್ಟು ಕೆಳಕ್ಕೆ ಹೋಗಿದೆ. ನಮಗೆ ಪರ್ಯಾಯಾದ ವ್ಯವಸ್ಥೆಯೇನೂ ಇಲ್ಲ. ನಮ್ಮ ಮಾನ ಪ್ರಾಣ ರಕ್ಷಣೆಗೆ ಅವರ ಹತ್ತಿರಕ್ಕೇ ನಾವು ಹೋಗಬೇಕು. ಇದು ಬಹಳ ಪವಿತ್ರವಾದ ವೇದಿಕೆ. ತಾವು ಜನರಲೈಸ್ ಮಾಡಿ ಹೇಳಿಬಿಟ್ಟರೆ ನಾಳೆ ನಾವೇ ಅಸಹಾಯರಾಗುತ್ತೇವೆ. ಆದ್ದರಿಂದ ಜನರಲೈಸ್ ಮಾಡುವುದು ಬೇಡ ಎಂದು ಹೇಳುತ್ತಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ನಾನೂ ಕೂಡ ನಿಮ್ಮ ಅಭಿಪ್ರಾಯ ಒಪ್ಪುತ್ತೇನೆ. ಆ ಸ್ಥಿತಿಗೆ ಅವರೇ ಅವರನ್ನು ತಂದುಕೊಂಡಿದ್ದಾರೆ. ನಾನು ಅದಕ್ಕೆ ಸ್ಪೆಸಿಫಿಕ್ಕಾಗಿ ಹೇಳುತ್ತಿದ್ದೇನೆ. ಸೆಕ್ಷನ್ 307ರಡಿ ಕೇಸ್ ಹಾಕಿದ್ದಾರೆ. ಆ ಸೆಕ್ಷನನ್ನು ಕೊಲೆ ಮಾಡಲು ಪ್ರಯತ್ನಿಸಿದವರ ಮೇಲೆ ಹಾಕುವಂಥದ್ದು. ಇಲ್ಲಿ ಯಾರು ಕೊಲೆ ಮಾಡಲು ಪ್ರಯತ್ನಿಸಿದ್ದಾರೆ? ಕಾರ್ಮಿಕರು ಸಾರ್ವಜನಿಕರು ಯಾರನ್ನಾದರೂ ಕೊಲೆ ಮಾಡಲು ಪ್ರಯತ್ನಿಸಿದ್ದಾರೆಯೇ? 307ನೇ ಸೆಕ್ಷನ್ ಹಾಕುವಂಥದಲ್ಲ, 302ನೇ ಸೆಕ್ಷನ್ ಹಾಕಿ ಎಸ್‌ಪಿ ರಾಮೇಗೌಡ, ಸರ್ಕಲ್ ಇನ್‌ಸ್ಪೆಕ್ಟರು, ಅಶೋಕ್‌ಕುಮಾರ್ ಈ ಮೂವರನ್ನು ಬಂಧಿಸಿ ಜೈಲಿಗೆ ಕಳುಹಿಸಬೇಕಾಗಿದ್ದ ಸಂದರ್ಭದಲ್ಲಿ ಕಾರ್ಮಿಕರ ವಿರುದ್ಧ ಯಾವುದೇ ಕಾರಣವಿಲ್ಲದೆ 307ನೇ ಸೆಕ್ಷನ್ ಹಾಕಿದ್ದಾರೆ ಉಳಿದ ಸೆಕ್ಷನ್ ಬಿಡಿ, ಅದು ಮಾಮೂಲಾಗಿ ಹಾಕುತ್ತಾರೆ, ಅದರ ಬಗ್ಗೆ ಹೆಚ್ಚಿಗೆ ನಾನೇನೂ ಹೇಳುವುದಿಲ್ಲ. ಅಧ್ಯಕ್ಷರೇ, ಇದಕ್ಕಿಂತ ನಾಚಿಕೆಗೇಡಿನ ಸಂಗತಿ ಏನಿದೆ? ಈಗ 16 ಜನ ಜೈಲಿನಲ್ಲಿದ್ದಾರೆ ಅವರು ಯಾರು ಎಂದು ಪರಿಶೀಲಿಸದರೆ ಈ ಇಲಾಖೆ ಸರ್ಕಾರ ಹೇಗೆ ಕೆಲಸ ಮಾಡುತ್ತಿದೆ ಎಂಬುದು ಅರಿವಾಗುತ್ತದೆ. 16 ಜನರ ಪೈಕಿ ನಮ್ಮ ವಿಜಿಕೆ ನಾಯರ್ ಮೊದಲನೆ ಅಪರಾಧಿಯಾಗಿದ್ದಾರೆ ಪಾಪ ಅವರಿಗೂ ಅದಕ್ಕೂ ಸಂಭಂದವೇ ಇಲ್ಲ, ಒಬ್ಬ ಮುನಿರಾಜು ಎಂಬುವನು ವೈಟ್‌ಫೀಲ್ಡಿನ ಎಂವಿಕೆಇಎಸ್ ಇಂಜನಿಯರಿಂಗ್ ಕಾಲೇಜಿನಲ್ಲಿ ಇಂಜನಿಯರಿಂಗ್ ಓದುತ್ತಿದ್ದಾನೆ ಆತನು ಚನ್ನಪಟ್ಟಣದ ಹುಡುಗ, ಕಾಲೇಜಿಗೆಂದು ಬಸ್‌ಗೆ ಹೋಗುತ್ತಿದ್ದನು. ಅವನನ್ನು ಹಿಡಿದುಕೊಂಡು ಬಂದು ಪೋಲೀಸರು ಜೈಲಲ್ಲಿ ಹಾಕಿದ್ದಾರೆ. ಅರುಣ್‌ಕುಮಾರ್ ಬಿನ್ ಕೃಷ್ಣಪ್ಪ, 9ನೇ ಕ್ಲಾಸ್‌ನಲ್ಲಿ ಓದುತ್ತಿರುವ ವಿದ್ಯಾರ್ಥಿ ಮಂಚನಾಯಕ್ಕನಹಳ್ಳಿಯವನು, ಸ್ಕೂಲಿಗೆ ಹೋಗಲಿಕ್ಕೆ ಅವನು ಪುಸ್ತಕಗಳ ಬ್ಯಾಗ್ ತೆಗೆದುಕೊಂಡು ಬಂದಿದ್ದ ಅದರ ಸಮೇತ ಅವನನ್ನು ಜೈಲಿಗೆ ಹಾಕಿದ್ದಾರೆ,

ರಾಜೇಶ್ ಬಿನ್ ಗೋವಿಂದಪ್ಪ, ಹೆಜ್ಜಾಲ ಕಾಲೋನಿ, 9ನೇ ತರಗತಿ, ಆನಂದ ಹೈಸ್ಕೂಲು, ಆತನ ಪುಸ್ತಕ ಬ್ಯಾಗು ಸೆಂಟ್ರಲ್ ಜೈಲಿನಲ್ಲೇ ಇದೆ. ಇದನ್ನು ಏನೆಂದು ಹೇಳಬೇಕು? ನೀವು ಅಪರಾಧಿಕಾರಿಗಳನ್ನು ಹಿಡಿದು ಕೇಸ್ ಹಾಕಿದ್ದೀರೋ ಅಥವಾ ಭಯೋತ್ಪಾದನೆ ಮಾಡಲಿಕ್ಕೆ ಕೇಸ್ ಹಾಕಿದ್ದೀರೋ ಅಥವಾ ಕಾರ್ಮಿಕರು ಈ ದೇಶದಲ್ಲಿ ಪ್ರಜಾಸತ್ತಾತ್ಮಕವಾಗಿ ತಮಗಿರುವ ಹಕ್ಕಿಗೋಸ್ಕರ ಹೋರಾಡುವುದನ್ನು ಸದೆಬಡಿಯುವುದಕ್ಕೆ ಭಯೋತ್ಪಾದನೆ ಮಾಡಲಿಕ್ಕೆ ಈ ಕೆಲಸ ಮಾಡಿದ್ದೀರೋ? ಅಧ್ಯಕ್ಷರೇ, ಇಡೀ ಘಟನೆಗೆ ಮೂಲಕಾರಣನಾದ ಫ್ಯಾಕ್ಟರಿ ಮಾಲೀಕ ವೆಳ್ಳಿಯಪ್ಪನ ಮೇಲೆ ಒಂದೇ ಒಂದು ಕೇಸ್ ಹಾಕಿಲ್ಲ. ಲಾಟೀಚಾರ್ಜ್‌ಗೆ ಶೂಟಿಂಗ್‌ಗೆ ಎಲ್ಲಾ ಅನಾಹುತಕ್ಕೂ ಮೂಲ ಕಾರಣನಾದ ಕಾರ್ಖಾನೆ ಮಾಲೀಕನ ವಿರುದ್ಧ ಒಂದೇ ಒಂದು ಕೇಸ್ ಹಾಕಿಲ್ಲ ಯಾಕೆ? ನಿಜವಾದ ಪ್ರಾಮಾಣಿಕ ಕಳಕಳಿ ಇವರಿಗೇನಾದರೂ ಇದ್ದಿದ್ದರೆ ಆ ಮಾಲೀಕನನ್ನು ಅರೆಸ್ಟ್ ಮಾಡಿ ಕೇಸ್ ಹಾಕಬೇಕಾಗಿತ್ತು. ಮತ್ತೆ ಪೋಲಿಸರ ಮೇಲೆ ಕೇಸ್ ಹಾಕಬೇಕಾಗಿತ್ತು. ಅದು ಬಿಟ್ಟು ಹೈಸ್ಕೂಲು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿಗಳ ಮೇಲೆ ಕೇಸ್ ಹಾಕಿ ಯೂನಿಯನ್ ಮುಖಂಡರು ವಿಜೆಕೆ ನಾಯರ್ ಬಹುಶಃ ಇಲ್ಲಿರುವ ಎಲ್ಲರಿಗೂ ಸ್ನೇಹಿತರೇ; ಸಿಂಧ್ಯಾರ ಜೊತೆ ಜೈಲಲ್ಲಿದ್ದರು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಜೈಲಲ್ಲಿದ್ದರು, ಸಿದ್ಧರಾಮಯ್ಯನವರಿಗೆ ಬಹಳ ಆತ್ಮೀಯರು, ಅವರು ಎಂಥವರೆಂದು ಗೊತ್ತಿದೆ. ಆ ಘಟನೆ ತಪ್ಪಿಸಲಿಕ್ಕೆ ಹೋದ ಆ ಕಾರ್ಮಿಕ ಮುಖಂಡನನ್ನು 307ನೇ ಸೆಕ್ಷನ್‌ನಲ್ಲಿ ಕೇಸ್ ಹಾಕಿ ಜೈಲಿಗೆ ಕಳುಹಿಸಿದ್ದಾರೆ. ಕೇಸ್ ಆರ್ಗುಮೆಂಟ್‌ಗೆ ಹೋದರೆ ಪೋಲಿಸರು ಡೈರಿ ಕಳುಹಿಸುವುದಿಲ್ಲ. ಅಬ್ಜೆಕ್ಷನ್ ಹಾಕಲಿಕ್ಕೆ. ಆ ಸ್ಥಿತಿಯಲ್ಲಿ ಅವರು 3ನೇ ತಾರೀಖಿನಿಂದ ಜೈಲಿನಲ್ಲಿದ್ದಾರೆ. ಯಾರು ನಿಜವಾದ ಅಪರಾಧಿಗಳಿದ್ದಾರೋ ಅವರ್‍ಯಾರನ್ನೂ ಪೋಲಿಸರು ಮುಟ್ಟಲಿಲ್ಲ. ಯಾರ ಮೇಲೂ ಕೇಸ್ ಹಾಕಲಿಲ್ಲ. ಮುಗ್ಧ ಜನರು ಕಾರ್ಮಿಕ ಮೇಲೆ ಹೂಡಿದ್ದಾರೆ. ಅಧ್ಯಕ್ಷರೇ, ಜೈಲಿನಲ್ಲಿರುವ 16 ಜನರ ಪೈಕಿ 4 ಜನ ಮಹಾದೇವ ಸಿದ್ದರಾಜು ವೆಂಕಟರಾಜು ತಿಮ್ಮಪ್ಪ, ಲಾರಿಕ್ಲೀನರ್ ಇವನು, ರಸ್ತೆರೊಕೋ ನಡೆದಾಗ ರಸ್ತೆ ಬ್ಲಾಕ್ ಆಗಿ ನಿಂತಿದ್ದ ಲಾರಿಯಲ್ಲಿ ಕುಳಿತಿದ್ದ ಕ್ಲೀನರ್‌ಗಳನ್ನು ಹಿಡಿದುಕೊಂಡು ಹೋಗಿ ಸೆಂಟ್ರಲ್ ಜೈಲ್‌ನಲ್ಲಿ ಹಾಕಿದ್ದಾರೆ. ಅವರು ಕಾರ್ಮಿಕರಲ್ಲ. 16 ಜನರ ಪೈಕಿ 4 ಜನ ಮಾತ್ರ ಕಾರ್ಮಿಕರು ಉಳಿದ 12 ಜನ ಆ ಘಟನೆಗೆ ಕಾರ್ಖಾನೆಗೆ ಯಾವುದಕ್ಕೂ ಸಂಬಂಧವಿಲ್ಲ. ಪೋಲಿಸರ ಮೇಲೆ ಸರ್ಕಾರದ ಮೇಲೆ ನಾವು ಏನನ್ನು ಹೇಳಬೇಕು? ಅವರ ಮಾರೇಲ್ ಕಡಿಮೆಯಾಗುತ್ತದೆಂದು ಹೇಳಬೇಕಾ? ಅಲ್ಲಿರುವ ಪೋಲಿಸ್ ಅಧಿಕಾರಿಗಳೆಲ್ಲಾ ಒಂದೇ ಕಮ್ಯುನಿಟಿಯವರೇ, ಎಸ್‌ಪಿ ರಾಮೇಗೌಡ ಬೆಟ್ಟೇಗೌಡ ಎಲ್ಲರೂ ಇದ್ದಾರೆ. ಇದ್ದುಕೊಳ್ಳಲಿ, ನನಗೇನೂ ತೊಂದರೆ ಇಲ್ಲ, ಆದರೆ ಅವರು ಮಾಡಿರುವ ಕೆಲಸ ಇಡೀ ಕರ್ನಾಟಕದ ಜನತೆ ಅದನ್ನು ಖಂಡಿಸಬೇಕಾಗುತ್ತದೆ. ಅಮಾನವೀಯವಾದ ಕೆಲಸ ಮಾಡಿರುವವರು, ಕಾರ್ಮಿಕರ ಸಮಸ್ಯೆ ಪರಿಹಾರಕ್ಕೆ ಎಳ್ಳಷ್ಟು ಕನಿಷ್ಟ ಜವಾಬ್ದಾರಿ ತೆಗೆದುಕೊಳ್ಳದಂತಹ ಜನ. ಅಲ್ಲಿ ಫೈರಿಂಗಿಗೆ ಆರ್ಡರ್ ಕೊಟ್ಟವರು ಯಾರು ನನಗೆ ದಟ್ಟವಾದ ಗುಮಾನಿ ಇದೆ. ಪೋಲಿಸರು ಕಾರ್ಖಾನೆ ಮಾಲೀಕರ ಕೈಗೊಂಬೆಗಳಾಗಿ ವರ್ತಿಸಿದ್ದಾರೆ, ಅವರಿಗೆ ಸರ್ಕಾರ ಮಣಿದಿದೆ. ಬರೀ ವೆಳ್ಳಿಯಪ್ಪ ಕಾರ್ಖಾನೆಯಷ್ಟೇ ಅಲ್ಲ ಸಾಮ್ರಾಟ್ ಅಶೋಕ ಎರಡು ವರ್ಷದಿಂದ ಹೋರಾಟ ನಡೆಯುತ್ತಿದೆ.

4.20 ಪಿ.ಎಂ.

ಸುಮಾರು 6000 ಜನ ಮಹಿಳಾ ಕಾರ್ಮಿಕರು ಅಲ್ಲಿ ದುಡಿಯುತ್ತಿದ್ದಾರೆ. ಈ ಸಾಮ್ರಾಟ್ ಅಶೋಕ್ ಟೆಕ್ಸ್‌ಟೈಲ್ ಕಾರ್ಖಾನೆಯ ಪರಿಸ್ಥಿತಿ ಏನಾಗಿದೆ ಎಂಬುದನ್ನು ವಿಚಾರ ಮಾಡಬೇಕು. ಬೆಂಗಳೂರು ನಗರದಲ್ಲಿ ಇರತಕ್ಕಂತಹ ಖಾಸಗಿ ಆ ಕಾರ್ಖಾನೆಗಳಲ್ಲಿ ಅದರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅಸಂಘಟಿತ ಮಹಿಳೆಯರು ಇರತಕ್ಕಂತಹ ಆ ಟೆಕ್ಸ್‌ಟೈಲ್ ಕಾರ್ಖಾನೆಗಳಲ್ಲಿ ಅವರನ್ನು ಅಮಾನವೀಯವಾಗಿ ಶೋಷಣೆ ಮಾಡುತ್ತಿದ್ದಾರೆ. ಅವರ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಒಂದಿಷ್ಟೂ ಕಾಳಜಿ ವಹಿಸದೇ ಇರತಕ್ಕಂತಹ ಸರಕಾರ ಪೋಲೀಸರು ಕಾರ್ಮಿಕರ ಮೇಲೆ ಗೋಲಿಬಾರ್ ಮಾಡತಕ್ಕಂತಹ ಹಂತಕ್ಕೆ ಹೋಗಿದ್ದಾರೆ. ಹಲವಾರು ಸಂದರ್ಭಗಳಲ್ಲಿ ಪೋಲಿಸಿನವರು, ಇದೇ ವೆಳ್ಳಿಯಪ್ಪ ಕಾರ್ಖಾನೆಯಲ್ಲಿ ಒಂದು ಹೋರಾಟ ನಡೆಸಿದಂತಹ ಸಂದರ್ಭದಲ್ಲಿ ಅನಾವಶ್ಯಕವಾಗಿ ಪೋಲಿಸಿನವರು 302 ಸೆಕ್ಷನ್ ಕೇಸ್ ಹಾಕಿ 18 ಜನರನ್ನು ಜೈಲಿಗೆ ಕಳುಹಿಸಿದರು. ಎಲ್ಲಿಯಾದರೂ ಪೋಲಿಸಿನವರು ಕಾರ್ಮಿಕರ ಪರವಾಗಿ ಹೋರಾಟದಲ್ಲಿ ಮಧ್ಯ ಪ್ರವೇಶ ಮಾಡಿದ್ದಾರೆಯೇ? ಪೋಲಿಸ್ ಇಲಾಖೆ ಇರುವುದು ನಾಗರೀಕ ಹಕ್ಕುಗಳನ್ನು ರಕ್ಷಣೆ ಮಾಡಲಿಕ್ಕೆ ಪ್ರಜಾಸತ್ತಾತ್ಮಕವಾಗಿ ಜನಸಾಮಾನ್ಯರಿಗೆ ಸಂವಿಧಾನ ದತ್ತವಾದ ಹಕ್ಕುಗಳು ಎಲ್ಲಿಯಾದರೂ ಉಲ್ಲಂಘನೆಯಾದರೆ ಅದನ್ನು ರಕ್ಷಣೆ ಮಾಡಲಿಕ್ಕೆ ಪೋಲಿಸ್ ಇಲಾಖೆ ಇದೆಯೋ ಅಥವಾ ಸಂವಿಧಾನ ದತ್ತವಾಗಿ ಸಾಮಾನ್ಯ ಮನುಷ್ಯನಿಗೆ ಕೊಟ್ಟಿರತಕ್ಕಂತಹ ಹಕ್ಕುಗಳನ್ನು ಮೊಟಕು ಮಾಡಿ ಆ ಹಕ್ಕುಗಳನ್ನು ಕಿತ್ತುಕೊಳ್ಳಲಿಕ್ಕೆ ಪೋಲಿಸ್ ಇಲಾಖೆ ಇದೆಯೋ ಎಂಬುದನ್ನು ನಾವು ಇಲ್ಲಿ ಚರ್ಚೆ ಮಾಡಬೇಕಾಗಿದೆ. ಇಷ್ಟೆಲ್ಲಾ ಆದರೂ ಅಲ್ಲಿ ಷೂಟಿಂಗ್ ನಡೆದಿದೆ 3 ಜನರು ಸತ್ತಿದ್ದಾರೆ. ನೂರಾರು ಜನರಿಗೆ ಗಾಯಗಳಾಗಿವೆ. ನಮ್ಮಲ್ಲಿ ಎಷ್ಟೇ ಭಿನ್ನಭಿಪ್ರಾಯ ಇದ್ದರೂ ಮಾನ್ಯ ರೋಷನ್ ಬೇಗ್‌ರವರನ್ನು ನಾನು ಅಭಿನಂದಿಸುತ್ತೇನೆ. ಅಂತಹ ಸಂದರ್ಭದಲ್ಲಿ ಆಸ್ಪತ್ರೆಗೆ ಹೋಗಿ ಜನರ ಹತ್ತಿರ ಬೈಸಿಕೊಂಡು ಬಂದಿದ್ದಾರೆ. ಆದರೆ ಸರಕಾರದ ಜವಾಬ್ದಾರಿ ಸ್ಥಾನದಲ್ಲಿ ಇರತಕ್ಕಂತಹ ಗೃಹ ಮಂತ್ರಿಗಳಾಗಲೀ ಇಲ್ಲವೇ ಯಾವುದೇ ಒಬ್ಬ ಮಂತ್ರಿಗಳಾಗಲೀ ಹೋಗಿ ಅಲ್ಲಿಯ ಜನರಿಗೆ ಸಾಂತ್ವನ ಹೇಳತಕ್ಕಂತಹ ಸೌಜನ್ಯವನ್ನು ತೋರಲಿಲ್ಲ. ಇವತ್ತಿಗೂ ಸರಕಾರದ ಪರವಾಗಿ ಯಾರಾದರೂ ಮಂತ್ರಿಗಳು ಆ ಘಟನೆ ನಡೆದಂತಹ ಸ್ಥಳಕ್ಕೆ ಹೋಗಿದ್ದಾರಾ ಗಾಯಗಳಾಗಿರತಕ್ಕಂತಹವರಿಗೆ ಸಾಂತ್ವನ ಹೇಳಿದ್ದಾರಾ? ಸತ್ತು ಹೋಗಿರತಕ್ಕಂತಹವರ ಮನೆಗಳಿಗೆ ಹೋಗಿ ಸಾಂತ್ವನ ಹೇಳಿದ್ದಾರಾ? ನಾಗರಾಜು ಎಂಬ ಮನುಷ್ಯ ಸತ್ತಿದ್ದಾನೆ. ಆತನ ಹೆಂಡತಿ 6 ತಿಂಗಳ ಗರ್ಭವತಿ ಒಂದು ಮಗು ಇದೆ ಬೇರೇನೂ ಜೀವನಕ್ಕೆ ದಾರಿ ಇಲ್ಲ. ಬದುಕಲಿಕ್ಕೆ ಸಾಧ್ಯವಿಲ್ಲ ಅವರೇನು ಮಾಡಬೇಕು? ಕೃಷ್ಣಪ್ಪ ಎಂಬುವವನು ಸತ್ತಿದ್ದಾನೆ ಆತನಿಗೆ 5 ಜನ ತಂಗಿಯರು ಇಬ್ಬರು ಅಣ್ಣಂದಿರು ಅವನು ಒಬ್ಬನೇ ಒಬ್ಬ ಅವರ ಇಡೀ ಕುಟುಂಬಕ್ಕೆ ಆಧಾರವಾಗಿದ್ದ. ಆತನು ಸತ್ತಿದ್ದಾನೆ. ಸೀತಾ ಎಂಬ ಮಹಿಳೆ ಕಾರ್ಖಾನೆಗೂ ಅವಳಿಗೂ ಸಂಬಂಧ ಇಲ್ಲ. ಆ ಕಾರ್ಖಾನೆಯಲ್ಲಿ ಕೆಲಸ ಮಾಡತಕ್ಕಂತಹ ಒಬ್ಬ ಬಡ ಕಾರ್ಮಿಕನ ಹೆಂಡತಿ 4 ತಿಂಗಳ ಗರ್ಭಿಣಿ ಆ ಮಹಿಳೆ. ಅವರು ಸತ್ತಿದ್ದಾಳೆ. ಅವರುಗಳನ್ನು ಸಾಯಿಸಲಿಕ್ಕೆ ಅಂತಹ ಅನಾಹುತವೇನು ಜರುಗಿತ್ತು? ನಿಮ್ಮ ಅಧಿಕಾರವನ್ನು ಅಂದರೆ ಸರಕಾರದಿಂದ ಅಧಿಕಾರವನ್ನು

ಕಿತ್ತುಕೊಳ್ಳಲಿಕ್ಕೆ ಅವರು ಬಂದಿದ್ದರೋ? ಇಲ್ಲವೆ ವೆಳ್ಳಿಯಪ್ಪ ಕಾರ್ಖಾನೆ ನಮಗೆ ಬೇಕು ಎಂದು ಕೇಳಲಿಕ್ಕೇನಾದರೂ ಬಂದಿದ್ದರೋ? ಕನಿಷ್ಠ ಮಾನವೀಯತೆ ಇಲ್ಲದೆ ಷೂಟ್ ಮಾಡಿರತಕ್ಕಂತಹ ಈ ಕೃತ್ಯ ಇಡೀ ಕರ್ನಾಟಕ ಜನತೆ ಇದನ್ನು ಖಂಡಿಸಬೇಕಾಗುತ್ತದೆ. ಸರಕಾರ ಇದಕ್ಕೆ ಪರಿಹಾರವನ್ನು ಘೋಷಣೆ ಮಾಡಿದೆ ಮತ್ತು ನ್ಯಾಯಾಂಗ ತನಿಖೆಯನ್ನು ಕೊಡಬೇಕೆಂದು ಕೂಡ ಆದೇಶ ಹೊರಡಿಸಿದೆ. ಈ ಗೋಲಿಬಾರಿನಿಂದ ಸತ್ತವರಿಗೆ ಒಂದು ಲಕ್ಷ ಕೊಡುವುದಾದರೆ ಇದೇ ಪರಿಹಾರವೆಂದು ಆದರೆ ನಿಜವಾಗಲೂ ಅದನ್ನು ಒಪ್ಪುವುದೆಂದಾದರೆ, ಈ ದೇಶದಲ್ಲಿ ಪೋಲಿಸಿನವರು ಗೋಲೀಬಾರ್ ಮಾಡುತ್ತಿರಲಿ, ಎಲ್ಲರಿಗೂ ಒಂದೊಂದು ಲಕ್ಷ ಕೊಡುತ್ತಿರಲಿ. ಸಮಸ್ಯೆ ಪರಿಹಾರವಾಯಿತು ಸರಕಾರಕ್ಕೆ ಕಾಳಜಿ ಇದೆ ಎಂದಾಯಿತು. ಜನರನ್ನು ಸಾಯಿಸಿರಿ ಒಂದೊಂದು ಲಕ್ಷ ಕೊಡಿರಿ, ಇದು ಸರಿಯಾಗುತ್ತದೆ. ಅದೇ ರೀತಿ ನ್ಯಾಯಾಂಗ ತನಿಖೆಗೆ ಆದೇಶ ಹೊರಡಿಸಿದ್ದೀರಿ. ನಾನು ಯಾವುದೇ ನ್ಯಾಯಾಧೀಶರನ್ನು ಅಗೌರವ ಮಾಡತಕ್ಕಂತಹ ದೃಷ್ಟಿಯಿಂದ ಹೇಳುತ್ತಿಲ್ಲ. ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಎಷ್ಟು ನ್ಯಾಯಾಂಗ ತನಿಖೆಗಳಿಗೆ ಆದೇಶವಾಗಿದೆ? ಯಾವ ನ್ಯಾಯಾಂಗ ತನಿಖೆಯ ವರದಿಯನ್ನು ಸರ್ಕಾರ ಜಾರಿ ಮಾಡಿದೆ? ಯಾರಿಗೆ ಶಿಕ್ಷೆ ಕೊಟ್ಟಿದೆ? ಎಂಬುದನ್ನು ಗಮನಿಸಬೇಕು. ನನಗೆ ಗೊತ್ತಿರುವ ಪ್ರಕಾರ ನನ್ನಲ್ಲಿ ಮಾಹಿತಿ ಇಲ್ಲ. ನ್ಯಾಯಾಂಗ ತನಿಖೆಯಾಧಾರದ ವರದಿ ಮೇಲೆ ಯಾವುದೇ ಸರಕಾರ ಕ್ರಮ ತೆಗೆದುಕೊಂಡು ಅವರಿಗೆ ಶಿಕ್ಷೆ ಮಾಡಿರತಕ್ಕಂತಹ ದಾಖಲೆ ನನ್ನಲ್ಲಿ ಇಲ್ಲ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡುವುದೆಂದಾದರೆ ಆ ವಿಷಯವನ್ನು ಅಲ್ಲಿಗೇ ಸಾಯಿಸುವುದು ಎಂದು ಅರ್ಥ. ಅದನ್ನು ಬದುಕಿಸತಕ್ಕಂತಹ ಅರ್ಥ ಇಲ್ಲ. ಇಲ್ಲಿ ಅದನ್ನು ಚರ್ಚೆ ಮಾಡುವ ಹಾಗೆ ಇಲ್ಲ, ಬೇರೆ ಕಡೆ ಮಾತನಾಡುವ ಹಾಗೆ ಇಲ್ಲ ಇದರಿಂದಾಗಿ ಸತ್ಯ ಹೊರಗಡೆ ಬರುವ ಹಾಗೆ ಇಲ್ಲ. ಇಡೀ ಘಟನೆಗೆ ಕಾರಣವಾಗಿರತಕ್ಕಂತಹ ಕಾರ್ಖಾನೆ ಮಾಲೀಕರನ್ನು ಬಂಧಿಸಿ ಅವನನ್ನು ಜೈಲಿಗೆ ಕಳುಹಿಸಬೇಕು, ಇದು ನನ್ನ ಮೊದಲನೆಯ ಬೇಡಿಕೆ. ಎರಡನೆಯದು ಇಡೀ ಜನರನ್ನು ಷೂಟ್ ಮಾಡಿರತಕ್ಕಂಥಾದ್ದು ಕೊಲೆ ಮಾಡಿರತಕ್ಕಂತಹ ಎಸ್.ಪಿ. ನಾರಾಯಣಗೌಡ, ಬೆಟ್ಟೇಗೌಡ, ಹಾಗೂ ಅಶೋಕ್ ಕುಮಾರ್ ಈ ಮೂರು ಜನರನ್ನು ಸೆಕ್ಷನ್ 302ರಲ್ಲಿ ಕೇಸ್ ಹಾಕಿ ಮೊಕದ್ದಮೆ ಹೂಡಿ ಬಂಧಿಸಬೇಕು. 3ನೇಯದು ಆ ಕಾರ್ಮಿಕರಿಗೆ ಏನು ಪರಿಹಾರ ಕೊಟ್ಟಿದ್ದೀರಿ ಅದು ಒಂದು ಲಕ್ಷ ಸಾಲುವುದಿಲ್ಲ ಕಡೇ ಪಕ್ಷ 5 ಲಕ್ಷ ರೂಪಾಯಿಗಳಾದರೂ ಕೊಡಿ. ಅವರ ಕುಟುಂಬಗಳು ನಾಶವಾಗುತ್ತಿವೆ. 4ನೇಯದು ಅನಾವಶ್ಯಕವಾಗಿ ಕಾರ್ಮಿಕರ ಮೇಲೆ ಹಾಗೂ ಮುಗ್ದರ ಮೇಲೆ ಏನು ಕೇಸುಗಳನ್ನು ಹಾಕಿದ್ದೀರಿ ಆ ಮೊಕದ್ದಮೆಗಳನ್ನು ತಕ್ಷಣ ವಾಪಸ್ ಪಡೆಯಬೇಕು ಮತ್ತು ಸದನ ಸಮಿತಿಯನ್ನು ರಚನೆ ಮಾಡಬೇಕು. ಬಸ್ ಸುಟ್ಟಿರತಕ್ಕಂತಹ ಜಾಗಕ್ಕೂ ಕಾರ್ಮಿಕರ ರಸ್ತೆ ರೋಕೋ ಮಾಡಿರತಕ್ಕಂತಹ ಜಾಗಕ್ಕೂ ಒಂದು ಕಿಲೋ ಮೀಟರ್ ದೂರ ಇದೆ. ಆ ಬಸ್ ಸುಟ್ಟಿರತಕ್ಕಂಥಾದ್ದು ಇಲ್ಲಿ ಷೂಟ್ ಮಾಡಿರತಕ್ಕಂಥಾದ್ದು ಏಕಕಾಲಕ್ಕೆ ನಡೆದಿದೆ. ಆದ್ದರಿಂದ ಇದರ ಹಿಂದೆ ಸ್ಪಷ್ಟವಾಗಿ ಯಾವುದೋ ಮೂರನೇ ಶಕ್ತಿಯ ಕೈವಾಡ ಇದೆ, ಆದ್ದರಿಂದ ಸದನ ಸಮಿತಿ ರಚನೆ ಮಾಡಬೇಕೆಂದು ಹೇಳುತ್ತಾ ಈ ನಾಲ್ಕು ಬೇಡಿಕೆಗಳನ್ನು ಸರಕಾರ ಪರಿಶೀಲಿಸಿ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಅಧ್ಯಕ್ಷರೇ, ಹೆಜ್ಜಾಲದಲ್ಲಿ ನಡೆದಿರತಕ್ಕಂತಹ ಗೋಲಿಬಾರ್ ವಿಚಾರಕ್ಕೂ ಬೇರೆ ಕಡೆ ನಡೆದಿರತಕ್ಕಂತಹ ಗೋಲಿಬಾರ್ ವಿಚಾರಕ್ಕೂ ಬಹಳ ವ್ಯತ್ಯಾಸಗಳು ಇದೆ. ಹೆಜ್ಜಾಲದಲ್ಲಿ ವಸ್ತು ಸ್ಥಿತಿ ಏನು ಇದೆ ಅದರ ಬಗ್ಗೆ ನಾವೆಲ್ಲರೂ ಪ್ರಾಮಾಣಿಕವಾಗಿ ಚಿಂತನೆ ಮಾಡೋಣ. ಕಾಂಗ್ರೆಸ್ ರಾಜಕೀಯ ಮಾಡುವುದು ಬೇಡ. ನಾವು ಸರಕಾರ ಮಾಡಿತು ಎಂದು ಕಾಂಗ್ರೆಸ್‌ನವರು ಮಾಡಿದರು ಎಂದು ಹೇಳಿ ಇದಕ್ಕೆ ರಾಜಕೀಯ ಹಿನ್ನೆಲೆ ಕೊಡುವುದಕ್ಕಿಂತ ಹೆಚ್ಚಾಗಿ ನಾವು ಹೃದಯ ಬಿಚ್ಚಿ ಪ್ರಾಮಾಣಿಕವಾಗಿ ಚರ್ಚೆ ಮಾಡೋಣ. ಹೆಜ್ಜಾಲದಲ್ಲಿ ನಡೆದಂತಹ ಗೋಲಿಬಾರ್ ಇದಕ್ಕೆ ಹಿನ್ನೆಲೆ ಏನು ಎಂದು ವಿಚಾರ ಮಾಡೋಣ. ಕಾರ್ಮಿಕರು ಸುಮಾರು 3-4 ವರ್ಷದಿಂದ ವೆಳ್ಳಿಯಪ್ಪ ಕಾರ್ಖಾನೆ ಮುಂದೆ ಸತ್ಯಾಗ್ರಹ ಮಾಡುತ್ತಿದ್ದಾರೆ ಇದು ಹೊಸದೇನೂ ಅಲ್ಲ. ಅವತ್ತು 500 ಜನ ಸೇರಿದಂತಹ ಪರಿಸ್ಥಿತಿ ಇತ್ತು. ಈ 500 ಜನರನ್ನು ನಿಯಂತ್ರಣ ಮಾಡುವುದಕ್ಕೆ ಸರಕಾರದ ವ್ಯವಸ್ಥೆ ಏನು ಗೋಲೀಬಾರೇ? ಗೋಲೀಬಾರೇ ಇದನ್ನು ನಿಯಂತ್ರಣ ಮಾಡತಕ್ಕಂತಹ ವ್ಯವಸ್ಥೆ ಎಂದು ಹೇಳುವುದಾದರೆ ಇದು ಅತ್ಯಂತ ನಾಚಿಕೆಗೇಡು ಎಂದು ನಾನು ಹೇಳುತ್ತಿದ್ದೇನೆ. 500 ಜನ ರಸ್ತೆ ಮೇಲೆ ಸೇರಿದರು. ಈ ರೀತಿ ಸೇರುವುದಕ್ಕೆ ಪೋಲಿಸಿನವರೇ ಅನುಮತಿ ಕೊಟ್ಟಿದ್ದರು. ಒಂದು ಗಂಟೆಗಳ ಕಾಲ ಪೋಲೀಸಿನವರು ಅನುಮತಿ ಕೊಟ್ಟ ಮೇಲೆ ಎರಡೂ ಕಡೆ ವಾಹನಗಳು ನಿಲ್ಲತಕ್ಕಂಥಾದ್ದು ಸ್ಪಷ್ಟ. ವಾಹನಗಳು 2 ಕಡೆ ನಿಂತಾಗ ಸತ್ಯಾಗ್ರಹಿಗಳನ್ನು ಮಾತುಕತೆಗೆ ಕರೆದು, ಮಾತುಕತೆಯ ಮೂಲಕ ಅವರ ಸತ್ಯಾಗ್ರಹವನ್ನು ಅಂತ್ಯ ಮಾಡಬಹುದಾಗಿತ್ತು. ಇಂತಹ ನೂರಾರು ಅನೇಕ ಸತ್ಯಾಗ್ರಹಗಳನ್ನು ಅಂತ್ಯ ಮಾಡುವ ವ್ಯವಸ್ಥೆ ಇದ್ದರೂ ಈ ಪರಿಸ್ಥಿತಿಯನ್ನು ಅರಿತುಕೊಳ್ಳದೆ, ಪ್ರಾಮಾಣಿಕತೆಯಿಂದ ಚಿಂತನೆ ಮಾಡದೆ 500 ಜನರ ಜೊತೆಗೆ ಇನ್ನೂ 1500 ಜನ....

ಅಧ್ಯಕ್ಷರು:- ಅವರು ಆಲೋಚನೆ ಮಾಡುತ್ತಿದ್ದಾರೆ.ನಿಮಗೆ ಏನು ಉತ್ತರ ಕೊಡಬೇಕೆಂದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸರಕಾರ ಮಲಗಿದೆ ಎಂದು...

ರಾಜಹಿಲೇತು ಮುಲಿಖಿಲೆ ಖಾಜಿಹಿಲೇತು ದಾಡಿಹಿಲೇ ಎಂದು ಹೇಳುತ್ತಾರೆ. ಹಾಗೇ ರಾಜನೇ ಮಲಗಿದರೆ ಉಳಿದಿದ್ದೆಲ್ಲಾ ಮಲಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ನಿದ್ದೆ ಬಗ್ಗೆ ಹೊಸ ವ್ಯಾಖ್ಯಾನ ಇತ್ತೀಚೆಗೆ ಹುಟ್ಟಿದೆ. ಪ್ರಧಾನ ಮಂತ್ರಿಗಳು ನಿದ್ದೆ ಮಾಡುತ್ತಾರೆಂದು ಪತ್ರಿಕೆಯಲ್ಲಿ ಬಂತು. ನಾನು ನಿದ್ದೆ ಮಾಡುವುದು ನಿದ್ರೆ ಅಲ್ಲ ಈ ದೇಶಕ್ಕೋಸ್ಕರ ಚಿಂತನೆ ಮಾಡುತ್ತಿದ್ದೇನೆ ಬಡವರ ಬಗ್ಗೆ ಸಾಮಾನ್ಯ ಜನರ ಬಗ್ಗೆ, ದೇಶದ ಬಗ್ಗೆ ಚಿಂತನೆ ಮಾಡುತ್ತಿದ್ದೇನೆ ಎಂದು ಹೇಳುತ್ತಾರೆ. ಇವರು ನಿದ್ರೆ ಮಾಡುತ್ತಾರೆಂದು ನಾನು ಹೇಳುತ್ತಿಲ್ಲ. ಈ ರೀತಿ ನಾವು ಗೋಲೀಬಾರ್ ಮಾಡಿದೆವಲ್ಲಾ ನಮ್ಮ ಪರಿಸ್ಥಿತಿ ಈ ರೀತಿ ಆಯಿತಲ್ಲಾ. ಈ ಅನ್ಯಾಯ ಮಾಡಬಾರದಾಗಿತ್ತಲ್ಲಾ ಎಂದು ಅವರ ಮನಸ್ಸಿನಲ್ಲಿ ಚಿಂತೆ ಬಂದಿರಬಹುದು.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಬಸವಣ್ಣನವರ ಒಂದು ವಚನವೇ ಇದೆ ''ಶರಣರು ಮಲಗಿದರೆ ತಪಸ್ಸೆನ್ನಿರಯ್ಯಾ'' ಎಂದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಮಾನ್ಯ ಮುಖ್ಯಮಂತ್ರಿಗಳು ಮಲಗಿದರೆ ತಪಸ್ಸು ಮಾಡುತ್ತಿದ್ದಾರೆ ಎಂದು ತಿಳಿಯಬೇಕು ಎಂದು ಅರ್ಥವೇ?

ಶ್ರೀ ವಾಟಾಳ್ ನಾಗರಾಜ್:- ನನಗಾದರೂ ಅನಿಸುತ್ತದೆ, ಗೋಲಿಬಾರನ್ನು ಮಾಡಬೇಕಾದರೆ ಎಷ್ಟು ವಿಧಿ ವಿಧಾನಗಳನ್ನು ನಾವು ಅನಸರಿಬೇಕು ಎನ್ನುವುದು ಬಹುಶಃ ತಮಗೂ ಗೊತ್ತಿದೆ, ಮತ್ತು ನಿಮ್ಮ ತಾಲ್ಲೂಕಿನಲ್ಲಿ ನಡೆದಂಥ ಒಂದು ದೊಡ್ಡ ಘಟನೆಯ ಹಿಂದೆ ಪೋಲಿಸರನ್ನು ಎಲ್ಲರನ್ನೂ ನೀವು ಬಯ್ಯಬೇಡಿ ಎಂದು ಹೇಳಿದಿರಿ ಆಗಲೇ. ನಿಜ, ನಾನು ಒಪ್ಪುತ್ತೇನೆ. ಸಾಮಾನ್ಯವಾಗಿ ನಮ್ಮ ಕರ್ನಾಟಕದ ಪೋಲಿಸರಲ್ಲಿ ಒಳ್ಳೆಯ ಅಧಿಕಾರಿಗಳಿದ್ದಾರೆ ಚೆನ್ನಾಗಿ ಕೆಲಸ ಮಾಡಿದ್ದಾರೆ. ಆದರೆ ಇಂಥ ಪರಿಸ್ಥಿತಿಯಲ್ಲಿ ನಾವು ಸೀಮಿತ ಮಾಡುವುದಕ್ಕಾಗುವುದಿಲ್ಲ. ಇಡೀ ರಾಜ್ಯದ ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ಪೋಲೀಸ್ ಇಲಾಖೆಗೆ ಇದೊಂದು ಅವರಿಗೆ ಸವಾಲಾಗಿದೆ. ಈ ಸವಾಲನ್ನು ಅವರು ಯಾವ ರೀತಿ ಇದನ್ನು ಸವಾಲು ಎಂದು ಸ್ವೀಕಾರ ಮಾಡಬೇಕು ಎನ್ನುವುದು ಅತೀ ಮುಖ್ಯವಾಗಿದೆ. ತಾವೇನು ಮಾತೆತ್ತಿದರೆ ನ್ಯಾಯಾಂಗ ತನಿಖೆಯಾಗಬೇಕು ಎಂದು ಹೇಳುತ್ತಿರಿ. ನ್ಯಾಯಾಂಗ ತನಿಖೆಗೆ ನಾನೇನೂ ವಿರೋಧವಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ನ್ಯಾಯಾಂಗ ತನಿಖೆಯ ಒಂದು ಗಾಂಭೀರ್ಯತೆಯೇ ಹೊರಟುಹೋಗಿದೆ. ನ್ಯಾಯಾಂಗ ತನಿಖೆ ಮತ್ತು ಆಯೋಗಗಳ ರಚನೆ ಮತ್ತು ಅದರಲ್ಲಿ ಬರುವ ತೀರ್ಪುಗಳು, ಆ ತೀರ್ಪುಗಳು ಸಮಗ್ರವಾಗಿ ಜಾರಿಯಾಗದೇ ಇರುವುದು. ಇವೆಲ್ಲವನ್ನೂ ನೋಡಿದಾಗ ನ್ಯಾಯಾಂಗ ತನಿಖೆ ಬಗ್ಗೆ ನಾವು ಹೇಳಬೇಕು. ಸರ್ಕಾರ ನ್ಯಾಯಾಂಗ ತನಿಖೆ ಮಾಡಿ ಎಂದು ಹೇಳಬೇಕು. ಇಷ್ಟರಲ್ಲೇ ಒಂದು ಸೀಮಿತವಗಿದೆ. ನಿನ್ನೆ ಮೊನ್ನೆ ಬಂದಿರುವುದನ್ನು ತಾವು ಪತ್ರಿಕೆಯಲ್ಲಿ ಓದಿರಬಹುದು. ಗಂಗಾರಾಂ ಕಟ್ಟಡದ ಬಗ್ಗೆ ಬಂದಿದೆ. ಅದರ ಬಗ್ಗೆ ತನಿಖೆಯಾಯಿತು. ಎಲ್ಲಾ ಅಪರಾಧಿಗಳು ಖುಲಾಸೆ ಎಂದು ಬಂತು. ಸತ್ತುವರು 130 ಜನರು. ಅವರು ಸತ್ತುಹೋದರು. ಅಲ್ಲಿಗೆ ಕೆಟ್ಟವರು ಯಾರು? ಸತ್ತವರೇ ಕೆಟ್ಟವರು ಎಂದು ಕಾಣುತ್ತದೆ. ಆ ಪ್ರಶ್ನೆ ಇವತ್ತು ಉದ್ಭವವಾಗುತ್ತದೆ. ನನಗನಿಸುತ್ತದೆ, ಈ ಒಂದು ಅತ್ಯುನ್ನತವಾದಂಥ ಈ ಸದನ ಇದನ್ನು ಸಮಗ್ರವಾಗಿ ಚಿಂತನೆ ಮಾಡಿ ತಾವು ಒಪ್ಪುವುದಾದರೆ ಪ್ರಾಮಾಣಿಕವಾಗಿ, ನ್ಯಾಯಾಂಗ ತನಿಖೆ ಎನ್ನುವುದು ನಾವು ಹೇಳುವುದು ತಾವು ಕೇಳುವುದಕ್ಕೆ ಮುಂಚೆ ನೀವೇ ನ್ಯಾಯಾಂಗ ತನಿಖೆ ಎಂದು ಹೇಳಿಬಿಟ್ಟರೆ ನಾವು ಕೇಳುವುದರಲ್ಲಿ ಆಸಕ್ತಿ ಕಡಿಮೆಯಾಗಲಿ ಎಂದು ಹೇಳಿ ಮೊದಲೇ ತರಾತುರಿಯಿಂದ ನ್ಯಾಯಾಂಗ ತನಿಖೆ, ಸತ್ತವರಿಗೆ ಒಂದು ಲಕ್ಷ ರೂಪಾಯಿ ಎಂದು ಹೇಳುವುದು. ಈ ರೀತಿಯಾದ ಪರಿಹಾರವನ್ನು ಘೋಷಣೆ ಮಾಡುವ ಮೊದಲು ಒಂದು ಚಿಂತನೆಯನ್ನು ಮಾಡೋಣ. ಸದನ ಸಮಿತಿಯನ್ನು ಮಾಡೋಣ. ಎರಡು ಕಡೆಯವರು ಸೇರಿ. ನಾವೂ ಇರೋಣ ನೀವೂ ಇರಿ, ಎರಡೂ ಕಡೆಯವರು ಸೇರಿ. ಕನಿಷ್ಟ ಈ ಸದನದ ಮುಗಿಯುವುದರೊಳಗಾಗಿ ಆ ಸಮಿತಿಯ ವರದಿಯನ್ನು ಈ ಸದನದ ಮುಂದೆ ಮಂಡಿಸುವುದಕ್ಕೆ ಒಂದು ಅವಕಾಶ ಇದೆ. ತಾವೇಕೆ ಸದನದ ಸಮಿತಿಗೆ ಒಪ್ಪಿಕೊಳ್ಳಬಾರದು? ಸದನದ ಸಮಿತಿಯನ್ನು ಮಾಡೋಣ. ನನಗೆ ನ್ಯಾಯಾಂಗ ತನಿಖೆಯ ಬಗ್ಗೆ ನ್ಯಾಯಾಧೀಶರ ಬಗ್ಗೆಯಾಗಲಿ, ನ್ಯಾಯಾಂಗ ತನಿಖೆಯ ಬಗ್ಗೆಯಾಗಲೀ ನಾನು ವಿರೊಧ ಮಾಡುತ್ತೇನೆ ಎನ್ನುವ ಪ್ರಶ್ನೆಯಲ್ಲ. ಏಕೆಂದರೆ ಅವರ ಬಗ್ಗೆ ವಿರೋಧ ಏನಿದೆ, ಮತೆತ್ತಿದರೆ ಒಂದು ತಿಂಗಳು ಕಾಲಾವಕಾಶವನ್ನು ನಾವು ಅವರಿಗೆ ಕೊಡಬೇಕು. ಕಾಲಾವಕಾಶ ಕೊಟ್ಟ ತಕ್ಷಣ

ಏನಿದೆ, ಆರು ತಿಂಗಳ ಒಳಗೆ ಮುಗಿಸಬೇಕು ಎಂದು ಹೇಳಿ ಒಂದು ನೀತಿ ಇದೆ. ಆದರೆ ಆರು ತಿಂಗಳಲ್ಲಿಯೆ ಮುಗಿಯಿತೇ ಎಂದರೆ ಮತ್ತೆ ಸರ್ಕಾರಕ್ಕೆ ಇನ್ನು ಆರು ತಿಂಗಳು ಕಾಲಾವಕಾಶ ಕೊಡಿ ಎಂದು ಕೇಳುತ್ತಾರೆ. ಹೀಗೆ ಆರಾರು ತಿಂಗಳು ಕಾಲಾವಕಾಶ ಕೊಟ್ಟರೆ ಮೂರುವರೆ ವರ್ಷ ಮುಗಿದು ನಿಮ್ಮ ಸರ್ಕಾರದ ಅಧಿಕಾರವೂ ಮುಗಿದು ಮತ್ತೆ ಆ ತೀರ್ಪು ಬರುವ ಹೊತ್ತಿಗೆ ಇದೊಂದು ಶವಸಂಸ್ಕಾರವಾಗುತ್ತದೆಯೇ ಹೊರತು ಇದರಿಂದ ಏನು ಅನುಕೂಲವಾಗುವುದಿಲ್ಲ. ಈ ಶವಸಂಸ್ಕಾರದ ಬದಲು ಪ್ರಾಮಾಣಿಕವಾಗಿ ಚಿಂತನೆ ಮಾಡಿ ಇಲ್ಲಿ ಪ್ರಾಮಾಣಿಕವಾಗಿ. ನಾವು ಹೇಳುವುದು ಸದನದ ಸಮಿತಿಗೆ ಒಂದು ಅತ್ಯುನ್ನತವಾದಂಥ ಸ್ಥಾನ ಇದೆ. ನಾನು ಸಿಬಿಐ ತನಿಖೆ ಮಾಡಿ ಎಂದು ಹೇಳುವುದಿಲ್ಲ, ಸಿ.ಓ.ಡಿ. ತನಿಖೆ ಮಾಡಿ ಎಂದು ಹೇಳುವುದಿಲ್ಲ. ನ್ಯಾಯಾಂಗ ತನಿಖೆಯ ಬಗ್ಗೆ ನನ್ನದೇನೂ ಒತ್ತಾಯವಿಲ್ಲ. ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, ಸದನದ ಸಮಿತಿಯನ್ನು ಮಾನ್ಯ ಅಧ್ಯಕ್ಷರು, ಮುಖ್ಯಮಂತ್ರಿಗಳು ಈ ಕಡೆ ವಿರೋಧ ಪಕ್ಷದ ನಾಯಕರ ಜೊತೆ ಕುಳಿತು ಮಾತುಕತೆಯಾಡಿ ಸದನದ ಸಮಿತಿಯನ್ನು ನೇಮಕ ಮಾಡುವುದಾದರೆ ಒಂದು ಒಳ್ಳೆಯ ವರದಿ ಬರುತ್ತದೆ ಎಂದು ಹೇಳಿ ನಾನು ಅಂದುಕೊಂಡಿದ್ದೇನೆ. ಈ ಗೋಲಿಬಾರ್ ನಡೆದಂಥ ಸ್ಥಳದಲ್ಲಿ ಕೆಲವು ವಿಚಾರಗಳನ್ನು ಕೇಳಿದಾಗ ಮೊದಲು ಅಶ್ರುವಾಯು ಪ್ರಯೋಗ ಮಾಡುತ್ತಾರೆ. ಲಾಠಿಛಾರ್ಜ್ ಮಾಡುವುದಿಲ್ಲ. ಆ ಕತ್ತಲೆಯಲ್ಲಿ ಆ ಹೊಗೆ ಬಂದಾಗ ಕಣ್ಣಿನ ಉರಿಯಿಂದ ನೀರು ಬೀಳುವಾಗ ಯದ್ವಾತದ್ವ ಹೊಡೆದಿದ್ದಾರೆ. ಯದ್ವಾತದ್ವ ಗೋಲಿಬಾರ್ ಮಾಡಿದ್ದಾರೆ. ಇದರಿಂದ ನನಗನಿಸುತ್ತದೆ, ಯಾವುದೇ ಒಂದು ಮುನ್ಸೂಚನೆ ಇಲ್ಲದೆ, ಯಾವುದೇ ಒಂದು ವಿಧಿ ವಿಧಾನಗಳನ್ನು ಅನುಸರಿಸದೇ ಅಪ್ರಮಾಣಿಕವಾದಂಥ ಚಿಂತನೆಯನ್ನು ಮಾಡಿದ್ದಾರ. ಈ ದೃಷ್ಟಿಯಿಂದ ಇದು ಎಷ್ಟರಮಟ್ಟಿಗೆ ಪೋಲಿಸ್‌ನವರು ದೌರ್ಜನ್ಯವನ್ನು ನಡೆಸಿದ್ದಾರೆ ಎಂದರೆ ನೇರವಾಗಿ ಗೋಲಿಬಾರಲ್ಲ, ಇದು ಕೊಲೆ. ಅದರಲ್ಲೇನೂ ಅನುಮಾನವಿಲ್ಲ. ಮಾದೇಗೌಡರು ರಸ್ತೆ ಸತ್ಯಾಗ್ರಹ ಮಾಡುತ್ತಾರೆ ಎಂದರೆ ಅವರು ಕೊಲೆ ಮಾಡುವುದಕ್ಕೆ ಹೊರಟಿದ್ದು ಎಂದು ಹೇಳಿ ಅವರ ಮೇಲೆ 307 ಕೇಸನ್ನು ಹಾಕುತ್ತೀರಿ. ನಂಜುಂಡಸ್ವಾಮಿಯವರು ಅಲ್ಲಿ ಸತ್ಯಾಗ್ರಹ ಮಾಡುವುದಕ್ಕೆ ಹೋದರೆ 307ನೇ ಸೆಕ್ಷನ್ ಕೇಸ್ ಹಾಕುತ್ತೀರಿ. ಇವತ್ತು ಜನಗಳು ಸತ್ತರು. ಯಾರಾದರೂ ಪೋಲಿಸ್‌ನವರು ಸತ್ತರೇ? ಯಾರಾದರೂ ಪೋಲಿಸ್‌ನವರಿಗೆ ಜನರು ಕಲ್ಲಿನಲ್ಲಿ ಹೊಡೆದು, ಲಾಠಿಯಲ್ಲಿ ಹೊಡೆದು, ಯಾವುದರಲ್ಲಿ ಹೊಡೆದಿದ್ದಾರೆ? ಒಬ್ಬ ಪೋಲಿಸ್‌ನವರೂ ಸತ್ತಿಲ್ಲ. ಆದರೆ ಸತ್ತಿರುವವರೆಲ್ಲಾ ಜನಸಾಮಾನ್ಯರು. ಯಾವಾಗಲೂ ಪೋಲಿಸ್‌ನವರು ಹೇಳುವುದು. ಬಹಳ ಭಯೋತ್ಪಾದಕರು ಬಂದರು. ರೌಡಿಗಳು ಬಂದರು. ಕಲ್ಲುತೂರಾಟ ಆಯಿತು. ಕಲ್ಲುತೂರಾಟವನ್ನು ತಡೆಯಲಾರದೇ ನಾವು ಲಾಠಿಛಾರ್ಜ್ ಮಾಡಿದೆವು. ಲಾಠಿಛಾರ್ಜ್‌ಗೆ ಬಗ್ಗಲಿಲ್ಲ ಎಂದಾಗ ನಾವು ಟಿಯರ್‌ಗ್ಯಾಸ್ ಮಾಡಿದೆವು. ಕೊನೆಗೆ ಗೋಲಿಬಾರ್ ಮಾಡಿದೆವು ಎಂದು ಛಾರ್ಜಿಶೀಟನ್ನು ಯಾವ ರೀತಿ ಹಾಕಬೇಕೋ ಹಾಗೆ ತಯಾರು ಮಾಡಿಕೊಂಡಿದ್ದಾರೆ. ಅದೇ ರೀತಿ ಸರ್ಕಾರಕ್ಕೆ ಕೊಡುವ ಒಂದು ನೀತಿ ಇದೆ. ಅದಕ್ಕೆ ನನಗನಿಸುತ್ತದೆ, ಇವತ್ತು ಪ್ರಾಮಾಣಿಕವಾಗಿ ಸರ್ಕಾರದಲ್ಲಿ, ಮುಖ್ಯಮಂತ್ರಿಗಳಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ, ನೀವು ಈ ಪಾಪಕ್ಕೆ ಹೋಗಬಾರದು. ನಿಮಗೆ ಒಂದು ಹಿನ್ನೆಲೆ ಇದೆ. ನೀವು ಎಲ್ಲವನ್ನೂ ಮರೆತುಬಿಟ್ಟಿದ್ದೀರಿ ಎಂದು ಕಾಣುತ್ತದೆ. ಹಳೆಯದನ್ನು

ಮರೆತಿರಿ ಎಂದು ಕಾಣುತ್ತದೆ. ನಿಮ್ಮ ಸಮಾಜವಾದ ಸಿದ್ಧಾಂಥವನ್ನು ಮರೆತಿದ್ದೀರಿ. ನಿಮ್ಮ ಹೇಳಿಕೆಗಳನ್ನೆಲ್ಲಾ ಮರೆತಿದ್ದೀರಿ. ಬಹುಶಃ ಹಿಂದೆ ನೀವು ಈ ಬಗ್ಗೆ ಮಾಡಿದಂಥ ಟೀಕೆಗಳು ಈ ಬಗ್ಗೆ ಮಾಡಿದಂಥ ಹೋರಾಟಗಳು ಅನೇಕ ಸತ್ಯಾಗ್ರಹಗಳು, ಕಾಗೋಡು ಸತ್ಯಾಗ್ರಹ ಆಯಿತು. ಅನೇಕ ಕಡೆ ನಡೆದಂಥ ಚಳುವಳಿ ಬಗ್ಗೆ ನೀವೇನು ಹೇಳಿದ್ದೀರಿ. ಇವತ್ತು ಅದೆಲ್ಲವನ್ನೂ ನೀವು ಸಂಪೂರ್ಣವಾಗಿ ಮರೆತಿದ್ದೀರೋ? ಪ್ರಾಮಾಣಿಕತೆಯಿಂದ ತಾವು ಚಿಂತನೆ ಮಾಡಿ. ಇದರ ಬಗ್ಗೆ ಹಿಂದೆ ಮುಂದೆ ನೋಡುವ ಪ್ರಶ್ನೆ ಬೇಡ. ಮತ್ತೊಂದು ಕಡೆ ತಾವು ಹೇಳಿದ್ದೀರಿ. ಕಾನೂನನ್ನು ಕೈಗೆ ತೆಗೆದುಕೊಂಡವರ ಕೈಯನ್ನು ಕತ್ತರಿಸುತ್ತೇವೆ ಎಂದು ಹೇಳಿದ್ದೀರಿ. ಅದೇನಾದರೂ ಇಲ್ಲಿ ಮಸೂದೆಯಾಗಿದೆಯೇ? ಯಾರ ಕೈ ಕತ್ತರಿಸುವುವುದು? ನಿನ್ನೆ ಚಿಕ್ಕನಾಯಕನ ಹಳ್ಳಿಯಲ್ಲಿ ತಾವು ಹೇಳಿದ್ದೀರಿ. ಕೈ ಕತ್ತರಿಸುತ್ತೇವೆ ಎಂದು. ನನಗೆ ಅನುಮಾನ ಬಂತು. ಯಾರ ಕೈ ಕತ್ತರಿಸುವುದು? ಚಳುವಳಿಗಾರರದೇ? ದರೋಡೆಕೋರರರೇ? ರೌಡಿಗಳದೇ? ಯಾರ ಕೈ ಕತ್ತರಿಸುವುದು? ನೀವು ಅಲ್ಲಿ ಹೇಳಿದ್ದೀರಿ. ಕೈ ಕತ್ತರಿಸಬೇಕು ಎಂದು. ಕೈ ಕತ್ತರಿಸುವ ಮಸೂದೆ ಇಲ್ಲಿ ನಾವು ತಂದಿದ್ದೇವೆಯೇ? ಇದು ಬಹುಶ: ದಂಡಿನ ಆಳ್ವಿಕೆ ಪಾಕಿಸ್ತಾನದಲ್ಲಿ ಇರಬಹುದು. ಅಥವಾ ಬೇರೆ ಬೇರೆ ದೇಶದಲ್ಲಿ ಇರಾನ್‌ನಲ್ಲಿ ಇರಬಹುದು. ನೀವ್ಯಾಕೆ ಹೀಗೆ ಆದಿರಿ? ನಿಮ್ಮ ಬಾಯಲ್ಲಿ ಹಾಗೆ ಬರಬಾರದು, ಪರಕಾಯ ಪ್ರವೇಶ ಆಗಿತ್ತೇ? ಅಥವಾ ಯಾರಾದರೂ ಒಳಗಡೆ ಸೇರಿ ಈ ರೀತಿ ಹೇಳಿಸುತ್ತಿದ್ದಾರೋ? ಏನಿದು? ಇದರ ಬಗ್ಗೆ ನನಗೆ ಚಿಂತನೆಯಾಗಿದೆ. ನಿಮ್ಮ ಬಾಯಲ್ಲಿ ಈ ರೀತಿ ಮಾತು ಬಂದಿದೆ. ಬೇರೆ ಯಾರಾದರೂ ಹೇಳಿದ್ದರೆ ಅದನ್ನು ತಡೆದುಕೊಳ್ಳಬಾರದಾಗಿತ್ತು. ಜೆ.ಹೆಚ್. ಪಟೇಲರಂಥವರು ವರ್ಷಗಟ್ಟಲೇ ಜೈಲಿನಲ್ಲಿದ್ದಾಗ ನಾನು ಬಂದಿದ್ದೆ. ನೀವು ಆಸ್ಪತ್ರೆಯಲ್ಲಿದ್ದಾಗ ನಾನೂ ಬಂದಿದ್ದೆ. ಇದೆಲ್ಲವನ್ನೂ ನೋಡಿದ್ದೇನೆ.

ಅಧ್ಯಕ್ಷರು:- ನಿಮ್ಮ ಅನುಮಾನ ನಾಣಯ್ಯನವರ ಮೇಲೆ.

ಶ್ರೀ ವಾಟಾಳ್ ನಾಗರಾಜ್:- ಸುಮ್ಮನೆ ನಾಣಯ್ಯನವರು ಕುಳಿತಿದ್ದಾರೆ. ಅವರನ್ನು ಬೀದಿಗೆ ಎಳೆಯುತ್ತಿದ್ದೀರಿ. ನಿಮ್ಮ ಅನುಮಾನ ನಾಣಯ್ಯನವರ ಮೇಲೆ ಎಂದು ಹೇಳುತ್ತಾರೆ. ಯಾರು ಹೇಳಿಕೊಟ್ಟಿದ್ದಾರೋ ನನಗಂತೂ ಗೊತ್ತಿಲ್ಲ. ತಾವು ಈಗಲಾದರೂ ತಾವು ಹೇಳಿರುವ ಎಲ್ಲಾ ಹೇಳಿಕೆಗಳು ನಾವು ಚುನಾವಣೆಗೆ ಕೊಟ್ಟಂಥ ಹೇಳಿಕೆಗಳು. ಆ ಹೇಳಿಕೆಗಳನ್ನು ಹಿಂತೆಗೆದುಕೊಳ್ಳುತ್ತೇನೆ. ಪ್ರಾಮಾಣಿಕವಾಗಿ ಗೋಲಿಬಾರ್ ಮಾಡಿರುವುದು ಅಕ್ಷಮ್ಯ ಅಪರಾಧ ಎನ್ನುವ ಮಾತನ್ನು ತಾವು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಿ. ಇದರಲ್ಲೇನಿದೆ? ತಾವು ದೊಡ್ಡಸ್ತಿಕೆ ತೋರಬೇಕು. ನಾನೇಕೆ ದೊಡ್ಡಸ್ತಿಕೆ ತೋರಬೇಕು ಎಂದು ತಮ್ಮಲ್ಲಿ ಹೇಳುತ್ತೇನೆ ಎಂದರೆ, ಮಧುಗಿರಿ ಪ್ರಕರಣ ಬಂದಾಗ ಇದೇ ಸದನದಲ್ಲಿ ಗೋಪಾಲಗೌಡರ ಭಾಷಣವನ್ನು ತಾವು ಕೇಳಿದ್ದೀರಿ. ಎಷ್ಟು ಮಾಧುರ್ಯವಾಗಿ, ಎಷ್ಟು ಎಳೆ ಎಳೆಯಾಗಿ ಕೊನೆ ಮಾತನ್ನು ಹೇಳಿದರು. ಎಂ.ವಿ.ರಾಮರಾಯು ಇಲ್ಲಿ ಕುಳಿತಿದ್ದರು. ನಿಜಲಿಂಗಪ್ಪನವರು ತಮ್ಮ ಸ್ಥಾನದಲ್ಲಿ ಕುಳಿತಿದ್ದರು. ಏನು ಮಾತನಾಡಿದರು? ನಾನು ನೋಡಿದೆ. ಎಲ್ಲವನ್ನೂ ಮಾತನಾಡಿ ಕೊನೆಯಲ್ಲಿ ಒಂದು ಮಾತನ್ನು ಹೇಳುತ್ತೇನೆ ಎಂದು ಹೇಳಿದರು. ಸ್ವಾಮಿ, ರಾಮರಾಯರೇ, ಈ ಒಂದು ಮಧುಗಿರಿ ಅತ್ಯಾಚಾರ ತಮ್ಮ ಹೆಣ್ಣುಮಗಳ ಮೇಲೆ ಅಥವಾ ತಮ್ಮ ಪತ್ನಿಯ ಮೇಲೆ ನಡೆದಿದ್ದರೆ ಏನು ಮಾಡುತ್ತಿದ್ದೀರಿ

ಎಂದು ಒಂದೇ ಒಂದು ಮಾತನ್ನು ಕೇಳಿ ತಮ್ಮ ಭಾಷಣವನ್ನು ಮಾಡಿ ಮುಗಿಸಿದರು. ಆಗ ರಾಮರಾಯರು ಇಡೀ ಹೊಣೆಯನ್ನು ಹೊತ್ತು ನಾನು ರಾಜೀನಾಮೆ ಕೊಡುತ್ತೇನೆ ಎಂದು ಹೇಳಿದರು. ಅಂದರೆ ನಾನು ಈ ಮಾತನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತೇನೆ ಎಂದರೆ ಅಂಥ ಸತ್ಯವಂತರ, ಪ್ರಾಮಾಣಿಕರ ಜೊತೆಯಲ್ಲೂ ನೀವು ಇದ್ದಿರಿ. ಇವತ್ತು ನೀವ್ಯಾಕೆ ಬದಲಾವಣೆಯಾಗಿದ್ದೀರಿ? ಏನು ಪರಿಸ್ಥಿತಿ? ಪೋಲಿಸ್ ಇಲಾಖೆ ನಿಮ್ಮ ಕೈಯಲ್ಲಿ ಹಿಡಿತ ಇಲ್ಲವೋ ಅಥವಾ ಪೋಲೀಸ್ ಇಲಾಖೆ ತಮಗೆ ಸರಿಯಾದಂಥ ಮಾಹಿತಿ ಕೊಡುತ್ತಿಲ್ಲವೇ? ಅಥವಾ ಪೋಲೀಸ್ ಅಧಿಕಾರಿಗಳಲ್ಲಿ ಇತ್ತೀಚಿನ ದಿನಗಳಲ್ಲಿ ಅನೇಕ ಪತ್ರಿಕೆಗಳಲ್ಲಿ ನಾನು ನೋಡುತ್ತಿದ್ದೇನೆ. ಪೋಲೀಸ್ ಇಲಾಖೆಯಲ್ಲಿ ಹೊಂದಾಣಿಕೆ ಇಲ್ಲ ಎಂದು ಹೇಳಿ ನೋಡುತ್ತಿದ್ದೇನೆ. ಅದು ಸತ್ಯವಿದ್ದರೆ ನಿಜವಾಗಿಯೂ ಬಹಳ ಅತ್ಯಂತ ಕೆಟ್ಟ ಒಂದು ಚಿಂತನೆಯಾಗುತ್ತದೆ. ಪೋಲಿಸರಲ್ಲಿ ಬೇದಭಾವವೇ ಬರಬಾರದು. ಪೋಲಿಸರಲ್ಲಿ ಬಡ್ತಿ ವಿಚಾರದಲ್ಲಿ ಒಬ್ಬರಿಗೊಬ್ಬರು ಏನೋ ಒಂದು ವಿಚಾರ ಇದೆ ಎಂದು ಹೇಳುತ್ತಿದ್ದಾರೆ. ನಾನು ಆ ಬಗ್ಗೆ ಹೋಗುವುದಕ್ಕೆ ತಯಾರಾಗಿಲ್ಲ. ಯಾರನ್ನು ಆ ಬಗ್ಗೆ ಆಕ್ಷೇಪಣೆ ಮಾಡುತ್ತೇವೆ ಎಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ಕರ್ನಾಟಕದ ಪೋಲಿಸ್ ಅಪಾರವಾದ ಕೆಲಸ ಮಾಡಿರುವ, ಹೆಸರು ವಾಸಿಯಾಗಿರುವ ಪೋಲಿಸರಿಗೆ ಇವತ್ತು ಏನಾಗಿದೆ? ಕರ್ನಾಟಕದ ಪೋಲಿಸ್ ಮೇಲೆ ಕೆಟ್ಟ ಪರಿಣಾಮ ಬೀರಿದೆ. ಸ್ವಾಮಿ, ಒಂದೂವರೆ ತಿಂಗಳಲ್ಲಿ ಮುಳುಬಾಗಿಲಿನಲ್ಲಿ ನಾಲ್ಕು ಹೆಣ ಬಿದ್ದಿವೆ. ಇಲ್ಲಿ ಈ ಕಡೆ ಗೋಲಿಬಾರ್ ಆಗಿದೆ. ನಾನು ಯಾರ ಬಗ್ಗೆಯೂ ರಾಜಕೀಯವಾಗಿ ಮಾತನಾಡುತ್ತಿಲ್ಲ. ಒಂದು ಈ ಬಗ್ಗೆ ಚಿಂತನೆಯಾಗಬೇಕು. ಪ್ರಾಮಾಣಿಕವಾಗಿ ಚಿಂತನೆಯಾಗಲಿಲ್ಲ ಎಂದರೆ ನನಗನಿಸುತ್ತದೆ, ನಾಳೆ ನೀವು ಇಲ್ಲಿ ಇರಬಹುದು, ಬೇರೆಯವರು ಅಲ್ಲಿಗೆ ಹೋಗಬಹುದು. ಅಂತಿಮವಾಗಿ ಪೋಲಿಸ್ ಇಲಾಖೆಯಲ್ಲಿ ಬದಲಾವಣೆ ಆಗಲಿಲ್ಲ ಎಂದರೆ ಇದು ನಿಜವಾಗಿಯೂ ಬಹಳ ಅತ್ಯಂತ ಉಪಾಯಕಾರಿ. ಸ್ವಲ್ಪ ಗ್ರಾಮ್ಯವಾಗಿ ಹೇಳುವುದಾದರೆ ಯಮಧರ್ಮನಿಗೂ ಸ್ವಲ್ಪ ಧರ್ಮ ಎನ್ನುವುದು ಇತ್ತು. ಅಂದರೆ ಆಯಸ್ಸು ಮುಗಿದನಂತರ ಸಾವನ್ನು ಸ್ವೀಕಾರ ಮಾಡುತ್ತಿದ್ದರು, ಸಾಯುವವರನ್ನು ಕರೆಯುತ್ತಿದ್ದ ಎಂದು. ಯಮಧರ್ಮ ಇದ್ದನೋ ಇಲ್ಲವೋ ಆ ಬಗ್ಗೆ ಚರ್ಚೆ ಮಾಡುವುದು ಬೇಕಾಗಿಲ್ಲ. ಆದರೆ ಯಮ ಮತ್ತು ಧರ್ಮ, ಯಮನಲ್ಲೂ ಧರ್ಮ ಇತ್ತು. ಆದರೆ ಆ ಯಮಧರ್ಮ ಇಲ್ಲ. ನಮ್ಮ ಪೋಲಿಸರಿಗೆ ಧರ್ಮ ಇಲ್ಲ ಯಮ ಆಗಿದ್ದಾರೆ ಅಂದರೆ ಆಯಸ್ಸು ಮುಗಿಯದೇ ಇದ್ದವರನ್ನೂ ಗೋಲಿಬಾರ್ ಮೂಲಕ ಕೊಲ್ಲುವುದು. ಇದು ಈ ರೀತಿ ಆಗುವುದಾದರೆ ಒಳ್ಳೆಯ ವ್ಯವಸ್ಥೆಯೇನಲ್ಲ. ಕಾರ್ಮಿಕರನ್ನು ಹತ್ತಿಕ್ಕಬೇಕಾದರೆ ಗೋಲಿಬಾರು. ತಮ್ಮ ಸರ್ಕಾರ ಅಂದರೆ ಜನತಾ ದಳದ ಸರ್ಕಾರ ಅಧಿಕಾರಕ್ಕೆ ಬಂದಾಗ ಏನು ಹೇಳಿದರು? ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ದೇವೇಗೌಡರು ಏನು ಹೇಳಿದರು ಅಂದರೆ ನಮ್ಮಲ್ಲಿ ಗೋಲೀಬಾರ್ ಸಂಸ್ಕೃತಿ ಇಲ್ಲ. ರಬ್ಬರ್ ಗುಂಡುಗಳನ್ನು ಉಪಯೋಗಿಸುತ್ತೇವೆಂದರು. ಎಲ್ಲಿದೆ ಸ್ವಾಮಿ ರಬ್ಬರ್ ಗುಂಡುಗಳು? ರಬ್ಬರ್ ಗುಂಡುಗಳನ್ನು ಎಲ್ಲಿಟ್ಟಿದ್ದೀರಿ ಮತ್ತು ಜನರನ್ನು ಚದುರಿಸಬೇಕಾದರೆ ನೀರಿನ ಕೊಳವೆ ಮೂಲಕ ಚದರಿಸುತ್ತೇವೆ ಎಂದರು. ಎಷ್ಟು ಸುಂದರವಾದಂತಹ ಮಾತುಗಳನ್ನು ಹೇಳಿದಿರಿ. ಆ ರಬ್ಬರ್ ಗುಂಡುಗಳು ಎಲ್ಲಿ ಹೋದವು? ಅವುಗಳನ್ನು ಏನು ಮಾಡಿದಿರಿ ನೀವು? ಅವು ಎಲ್ಲಿ ಹೋಗಿವೆ? ಇದನ್ನೆಲ್ಲಾ ನೀವು ಸ್ವಲ್ಪ

ವಿಚಾರ ಮಾಡಿ. ಹಿಂದೆ ಏನು ಹೇಳಿದ್ದೀರಿ ಎಂಬುದನ್ನು ನೆನೆದುಕೊಳ್ಳಿ. ನನಗೆ ಅನಿಸುತ್ತದೆ. ಇದು ಎಷ್ಟು ತೀವ್ರವಾಗಿ ಚರ್ಚೆ ಮಾಡಿದರೂ ಸಹ ಗೋಲೀಬಾರ್ ಸಂಸ್ಕೃತಿ ನಿಲ್ಲಬೇಕು. ಲಾಕಪ್ ಸಾವುಗಳು ನಿಲ್ಲಬೇಕು. ಸುಮ್ಮನೇ ಬರೀ ಹೇಳಿಕೆಯಿಂದ ಸಾಧ್ಯವಿಲ್ಲ. ಪೋಲೀಸರ ವರ್ತನೆ ಅತಿರೇಕವಾಗಿದೆ. ಇದರ ಬಗ್ಗೆ ಒಂದು ನಿಯಂತ್ರಣ ಆಗಬೇಕು. ನಾನು ಪೋಲೀಸರ ಆತ್ಮಸ್ಥೈರ್ಯವನ್ನು ಕಳೆಯಬೇಕು ಎನ್ನತಕ್ಕ ಇಚ್ಛೆ ನನಗೆ ಇಲ್ಲ. ತಾವು ಹೇಳಿದ ಮಾತನ್ನು ನಾನು ನಿಜವಾಗಿ ಒಪ್ಪುತ್ತೇನೆ. ಆತ್ಮಸ್ಥೈರ್ಯ ಕಳೆಯಬೇಕು ಎಂಬ ಇಚ್ಛೆ ನಮಗ್ಯಾರಿಗೂ ಇಲ್ಲ. ಆದರೆ ಪೋಲೀಸ್ ಇಲಾಖೆ ಈ ರೀತಿಯಾಗಿ ಹೋದರೆ ಯಾವ ಸರ್ಕಾರವೂ ಉಳಿಯುವುದಿಲ್ಲ ಎನ್ನತಕ್ಕ ಮಾತನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇಲ್ಲಿ ನಡೆದಿರತಕ್ಕದ್ದು ಗೋಲೀಬಾರ್ ಅಲ್ಲ. ನೇರವಾಗಿ ಕೊಲೆ. ಇಷ್ಟು ಹೊತ್ತಿಗೆ ಆಗಲೇ ತಾವು ನ್ಯಾಯಾಂಗ ತನಿಖೆಯನ್ನು ಮಾಡಿದ್ದೇವೆಂದು ಏನು ಹೇಳಿದ್ದೀರಿ, ಅದರ ಜೊತೆಯಲ್ಲಿಯೇ ನೀವು ಅವರೆಲ್ಲರನ್ನೂ ವಜಾ ಮಾಡಿ. ಅವರಿಗೆ ಸೆಕ್ಷನ್ 302ರ ಪ್ರಕಾರ ಮೊಕದ್ದಮೆಯನ್ನು ಪ್ರಾಮಾಣಿಕವಾಗಿ ದಾಖಲೆ ಮಾಡಬೇಕಾಗುತ್ತದೆ. ನಾನೇನು ಯಾರ ಬಗ್ಗೆಯೂ ವ್ಯಕ್ತಿ ದ್ವೇಷದಿಂದ ಮಾತನಾಡುತ್ತಿದ್ದೇನೆ ಎನ್ನತಕ್ಕದ್ದಲ್ಲ. ಅಮಾಯಕರು ಆಗಿರುವಂತಹವರು. ಎರಡು ಕಿಲೋ ಮೀಟರ್ ದೂರದಲ್ಲಿ ಹೋಗಿರತಕ್ಕ ಹಳ್ಳಿಗಳಿಗೆ ಹೋಗಿ ಬಂದೂಕು ತೆಗೆದುಕೊಂಡು ಹೊಡೆದು ಹಾಕಿದ್ದಾರೆ. ಈ ರೀತಿ ಹೇಳುವುದಕ್ಕೆ ಹೋದರೆ ಅವತ್ತು ನಡೆದಿರತಕ್ಕ ಘಟನೆ ಕರ್ನಾಟಕ ರಾಜ್ಯದಲ್ಲಿ ನಡೆದಿರತಕ್ಕ ಇನ್ನಿತರ ಗೋಲಿಬಾರ್‌ಗಳಿಗಿಂತ ಬೇರೆ ರೀತಿಯಲ್ಲಿ ನಡೆದಿರತಕ್ಕ ಗೋಲೀಬಾರ್. ಆದ್ದರಿಂದ ಈ ಗೋಲೀಬಾರ್ ಬಗ್ಗೆ ಸಮಗ್ರವಾದ ಒಂದು ತನಿಖೆಗೆ ಸಮಗ್ರವಾಗಿ ಒಂದು ಸದನ ಸಮಿತಿಯನ್ನು ತಾವು ನೇಮಕ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ):- ಮಾನ್ಯ ಸಭಾಧ್ಯಕ್ಷರೇ, ಎಲ್ಲಾ ವಿರೋಧ ಪಕ್ಷದವರು ಹೆಜ್ಜಾಲ ಗೋಲೀಬಾರ್ ಬಗ್ಗೆ ಏನು ಅಭಿಪ್ರಾಯಪಟ್ಟರು ಅದನ್ನು ಬೆಂಬಲಿಸುತ್ತಾ ಸರ್ಕಾರ ಸಾವಿನ ಬಗ್ಗೆ ಅತ್ಯಂತ ಗಂಭೀರವಾಗಿ ಯೋಚನೆ ಮಾಡಬೇಕು ಎಂದು ಹೇಳುತ್ತೇನೆ. ಮ್ಯಾಕ್ಸಿ ಕ್ಯಾಬ್‌ನಲ್ಲಿ ಆಕ್ಸಿಡೆಂಟ್ ಆಗಿ 15 ಜನ ಸತ್ತರು. ಕಿಲಾರಿ ಗ್ರಾಮದಲ್ಲಿ ಭೂಕಂಪದ ಮೂಲಕ 15 ಸಾವಿರ ಜನ ಸತ್ತರು. ಆದರೆ ಗೋಲೀಬಾರ್, ಅದಕ್ಕೆ ಯಾರು ಹೊಣೆಗಾರರು? ಪೋಲೀಸ್‌ನವರು, ಸರ್ಕಾರ. ಅಂತಹ ಒಂದು ದುಃಖವಾದ ಸಮಯದಲ್ಲಿ ಪತ್ರಿಕೆಯಲ್ಲಿ ಒಬ್ಬರಿಗಿಂತ ಒಬ್ಬರು ವರದಿ ಕೊಟ್ಟರು. ಈ ಗೋಲೀಬಾರ್‌ಗೆ ಕಾಂಗ್ರೆಸ್ ಕಾರಣ. ಈ ಗೋಲೀಬಾರ್‌ಗೆ ಆಡಳಿತ ಪಕ್ಷ ಕಾರಣ ಎಂದು ವರದಿ ಕೊಟ್ಟರು. ಎಷ್ಟೊಂದು ಹೊಣೆಗಾರಿಕೆ, ಎಷ್ಟೊಂದು ಜವಾಬ್ದಾರಿ. ಒಬ್ಬ ವ್ಯಕ್ತಿಯ ಸಾವು ಗೋಲೀಬಾರ್ ಮೂಲಕ ಆದಾಗ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಈ ತರಹದ ಸಾವು ಆದಾಗ ಆಳತಕ್ಕ ಪಕ್ಷದ ಹೊಣೆಗಾರಿಕೆ, ಜವಾಬ್ದಾರಿ ಹೆಚ್ಚೆಚ್ಚು ಇರಬೇಕು ಎನ್ನುವುದನ್ನು ಬಹಳ ತೀವ್ರವಾಗಿ ಯೋಚನೆ ಮಾಡಬೇಕು. ಕಾನೂನು ವ್ಯವಸ್ಥೆಯಲ್ಲಿ ಲೋಪ ಇದೆ, ಆಡಳಿತದಲ್ಲಿ ಲೋಪ ಇದೆ ಎನ್ನುವುದನ್ನು ತಾವು ತೀವ್ರವಾಗಿ ಯೋಚನೆ ಮಾಡಬೇಕು. ಅದಕ್ಕೆ ಸಂಬಂಧಪಟ್ಟವರ ಮೇಲೆ ಕ್ರಮವನ್ನು ತೆಗೆದುಕೊಳ್ಳತಕ್ಕಂಥ ಆಲೋಚನೆ ಮಾಡಬೇಕು. ಇದು ಒಂದೇ ಅಲ್ಲ. ಉದಾಹರಣೆಗೆ ನಾಗೇಗೌಡರು ಇರತಕ್ಕ ಜಾಗ, ಕಾಳಮುದ್ದನ ದೊಡ್ಡಿ. ಈಗ ಒಂದೂವರೆ

ವರ್ಷಗಳ ಹಿಂದೆ ಸ್ಪೆಸಿಫಿಕ್ ಆಗಿ ಸರ್ಕಲ್ ಇನ್ಸ್‌ಪೆಕ್ಟರ್, ಡಿವೈ ಎಸ್‌ಪಿ ಇದ್ದರು ಒಂದು ಸಮಾವೇಶಕ್ಕೆ ರೈತ ಸಂಘದವರು ಬರತಕ್ಕ ವಿಚಾರದಲ್ಲಿ ಶುರವಾದಂತಹ ಘಟನೆ. ಪೋಲೀಸ್‌ನವರು ವೈಯಕ್ತಿಕ ದ್ವೇಷವಾಗಿ ತೆಗೆದುಕೊಂಡರು. ಯಾರು ಹಸಿರು ಟಾವೆಲ್ ಹಾಕಿರುತ್ತಾರೆ, ಅವರ ಮೇಲೆ ಕಾನೂನು ವಿರೋಧ ಚಟುವಟಿಕೆಗಳನ್ನು ಮಾಡತಕ್ಕ ಕೆಲಸವನ್ನು ಮಾಡಿದರು. ಜೊತೆಗೆ ಅದೇ ಜವಾಬ್ದಾರಿ ಶ್ರೀ ಜಿ. ಮಾದೇಗೌಡರ ಮೇಲೂ ಸೆಕ್ಷನ್ 307ರ ಮೇಲೆ ಕೇಸ್ ಹಾಕಿ ಮೊಕದ್ದಮೆ ಹಾಕಿರತಕ್ಕ ಉದಾಹರಣೆ ಇದೆ. ಮಾದೇಗೌಡರು ಎಂದಲ್ಲ. ಯಾರೇ ಆಗಲಿ. ಕಾನೂನು ಪ್ರಕಾರ ಕೆಲಸ ಮಾಡತಕ್ಕ ಒಂದು ಪೋಲೀಸ್ ಇಲಾಖೆ ಬ್ರಿಟೀಷ್‌ನವರ ಕಾಲದ ಆಡಳಿತ ವ್ಯವಸ್ಥೆಯನ್ನು ಮಾಡತಕ್ಕ ನಿಲುವಿಗೆ ಹೋಗಬಾರದು. ಪೋಲೀಸ್ ಇಲಾಖೆಗೆ ಅತ್ಯಂತ ಜವಾಬ್ದಾರಿಯಾಗಿ ಕಾನೂನು ರಕ್ಷಣೆ ಮಾಡಿ ಜನರಿಗೆ ತಿಳುವಳಿಕೆ ಕೊಡತಕ್ಕ ಕೆಲಸ ಮಾಡಬೇಕು. ಮೊನ್ನೆ ಇನ್ನೊಂದು ಇನ್ಸಿಡೆಂಟ್ ಆಯಿತು. ಕಬ್ಬಿನ ಹೋರಾಟಕ್ಕೆ ಹೋಗಿ ಕಾಳಮುದ್ದನ ದೊಡ್ಡಿಯಲ್ಲಿ ನಾವು ನಮ್ಮ ನ್ಯಾಯವಾದ ಬೇಡಿಕೆಯನ್ನು ಇಡುತ್ತಿರಬೇಕಾದರೆ ಅಲ್ಲಿರುವ ಪೋಲೀಸ್‌ನವರಿಗೂ ಜನರಿಗೂ ಸ್ವಲ್ಪ ಘರ್ಷಣೆಯಾಗಿ ಒಬ್ಬ ದಫೇದಾರ್ ಜಾರಿ ಬಿದ್ದರು. ಆದರೆ ಮೂರ್‍ನಾಲ್ಕು ಜನರ ಮೇಲೆ ಛಾರ್ಜ್‌ಶೀಟ್ ಹಾಕಿದರು. ಯಾರ ಮೇಲೆ ಅವರು ಹೊಡೆದಿದ್ದಾರೆ ಎಂದು ಖಚಿತವಾಗಿ ಹೇಳಿದಂತಹ ವ್ಯಕ್ತಿ ಶ್ರೀ ಶಿವನಂಜಪ್ಪನವರು ಆ ಸಮಯದಲ್ಲಿ 12 ಗಂಟೆಗೆ ಸರಿಯಾಗಿ ಕೋರ್ಟಿನಲ್ಲಿದ್ದರು. 12 ಗಂಟೆ ಸಮಯದಲ್ಲಿ ಕೋರ್ಟಿನಲ್ಲಿದ್ದಂತಹ ವ್ಯಕ್ತಿ ಮೇಲೆ ಈತ ಪೋಲೀಸ್‌ನವರ ಮೇಲೆ ಹೊಡೆದಿದ್ದಾನೆ ಎಂದು ಉದ್ದೇಶ ಪೂರ್ವಕವಾಗಿ ಕೇಸ್ ಹಾಕಿರುವುದರಿಂದ ಸಂಬಂಧಪಟ್ಟ ನ್ಯಾಯಾಲಯದ ಮುಖ್ಯಸ್ಥರು ನಗತಕ್ಕ ಒಂದು ವ್ಯವಸ್ಥೆ ಅಲ್ಲಿ ಆಯಿತು.

9. **ಅಧ್ಯಕ್ಷರಿಂದ ಸೂಚನೆ:**

ವಿಷಯ:- ಸದನದ ಒಳಗೆ ಸೆಲ್ಯೂಲಾರ್ ಫೋನ್/ಪೇಜರ್ ತಂದಿರುವ ಬಗ್ಗೆ.

ಶ್ರೀ ವಾಟಾಳ್ ನಾಗಾರಾಜ್:- ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಒಂದು ವಿಶೇಷವಾದಂತಹ ಪ್ರಸಂಗ. ನನ್ನ ಹಿಂದೆ ಏನೋ ಕೊಂಯ್ ಕೊಂಯ್ ಎಂದು ಶಬ್ದ ಬರುತ್ತಿದೆ. ಸದನಕ್ಕೆ ಏನು ಬೇಕಾದರೂ ತರಬಹುದೇ ನಾವು? ನಾವು ದೂರವಾಣಿ ತಂದು ಇಲ್ಲಿ ಇಟ್ಟುಕೊಂಡಿದ್ದೇವಲ್ಲಾ? ಇದು ಸದನೋ ಏನು ಇದು? ಇದಕ್ಕೆ ತಾವು ಏನಾದರೂ ಹೇಳಬೇಕು. ಯಾರು ಏನು ಬೇಕಾದರೂ ತರಬಹುದೇ? ಅಲ್ಲಿ ಕುಳಿತುಕೊಂಡು ಕಿವಿಯಲ್ಲಿ ಕೇಳುತ್ತಿದ್ದಾರೆ. ನಾನು ಏನಪ್ಪಾ ಎಂದು ನೋಡುತ್ತಿದ್ದೇನೆ. ಅಥವಾ ಇನ್ನೇನಾದರೂ ಹೆಚ್ಚು ಕಡಿಮೆ ಆದರೆ ಗತಿ ಏನು? ಅದೇನು ಸ್ವಲ್ಪ ಕೇಳಿ.

ಶ್ರೀ ಎಲ್.ಆರ್. ಶಿವರಾಮೇಗೌಡ:- ಸೆಲ್ಯುಲಾರ್ ಫೋನ್ ಎಲ್ಲಿ ಬೇಕಾದರೂ ಇಟ್ಟುಕೊಳ್ಳಬಹುದು. ಇಟ್ಟುಕೊಳ್ಳುವುದಕ್ಕೆ ತೊಂದರೆ ಇಲ್ಲ.

ಶ್ರೀ ವಾಟಾಳ್ ನಾಗರಾಜ್:- ಅದು ಸರಿ ಇಲ್ಲ. ನಾನು ಇದನ್ನು ಒಪ್ಪುವುದಿಲ್ಲ. ಅವರು ನನ್ನ ಸ್ನೇಹಿತರು ಇರಬಹುದು. ನಾನು ಇದನ್ನು ಒಪ್ಪುವುದಿಲ್ಲ. ಫೋನ್ ತಂದು ಇಲ್ಲಿ ಇಟ್ಟುಕೊಳ್ಳುವುದು ಎಂದರೆ ಏನು? ನಾವು ನಾಳೆ ಏನು ಬೇಕಾದರೂ ತಂದು ಇಟ್ಟುಕೊಳ್ಳುತ್ತೇವೆ.